# ವಿಪ್ರನುಡಿ

ಸ್ವಾವಲಂಬನೆ-ಸಂಘಟನೆ-ಸಂಸ್ಕಾರ

ಸಂಪುಟ-39 ಶೋಭಕೃತ್ ನಾಮ ಸಂವತ್ಸರ, ಶ್ರಾವಣ ಮಾಸ, ಆಗಸ್ಟ್ - 2023, ಸಂಚಿಕೆ-6, ಪುಟಗಳು-36 ಬೆಲೆ ರೂ.15/-

## ಅರಳಿದ ಪ್ರತಿಭೆ - ಹಾರ್ದಿಕ ಅಭಿನಂದನೆ





ರಾಯಚೂರಿನಲ್ಲಿ ಪ್ರತಿಭಾ ಪುರಸ್ಕಾರ, ವಿದ್ಯಾ ಪ್ರೋತ್ಸಾಹ ನಿಧಿ ವಿತರಣೆ ಸಮಾರಂಭ




ತುರುವೇಕೆರೆಯಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ




ಕೆಜಿಎಫ್ ಬ್ರಾಹ್ಮಣ ಸಂಘ, ಪ್ರತಿಭಾ ಪುರಸ್ಕಾರ ಸಮಾರಂಭ

## 77ನೇ ಸ್ವಾತಂತ್ರೋತ್ಸವ ಸಂಭ್ರಮ




ಗಾಯಿತ್ರೀ ಭವನ, ಬೆಂಗಳೂರು



ಬುದ್ಧಗಯಾ - ಕಾಶಿಯಾತ್ರೆ ಸಂದರ್ಭ

# ಮಹಾಸಭೆಯಿಂದ ಚಾತುರ್ಮಾಸ್ಯ ವ್ರತನಿರತ ಗುರುವರ್ಯರಿಗೆ ಭಿಕ್ಷಾಸಮರ್ಪಣೆ



ಬೆಂಗಳೂರಿನಲ್ಲಿ ಹರಿಹರಪುರ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ದಂಪತಿಗಳಿಂದ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಭಟ್ಟರ ಸಮ್ಮುಖದಲ್ಲಿ ಹರಿಹಪುರ ಶ್ರೀ ಶಾರದಾ ಲಕ್ಷ್ಮೀನರಸಿಂಹ ಪೀಠದ **ಜಗದ್ಗುರು ಶ್ರೀ ಸ್ವಯಂ ಪ್ರಕಾಶ ಸಚ್ಚಿದಾನಂದ ಶ್ರೀಗಳಿಗೆ** ಭಿಕ್ಷಾಸಮರ್ಪಣೆ.



**ಪೇಜಾವರ ಗುರುಗಳ ದರ್ಶನ ಮತ್ತು ಭಿಕ್ಷಾವಂದನೆ**

ಮೈಸೂರಿನಲ್ಲಿ ಚಾತುರ್ಮಾಸ್ಯ ನಿರತ ಶ್ರೀ ಶ್ರೀ ಪೇಜಾವರ ಮಠಾಧೀಶರಾದ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರಿಗೆ ಪೂರ್ಣಫಲ ಭಿಕ್ಷಾ ಸಮರ್ಪಪಣೆ ರಾಜ್ಯ ಉಪಾಧ್ಯಕ್ಷರಾದ ಶ್ರೀ ನಟರಾಜ್ ಜೋಯಿಸ್, ಶ್ರೀ ಭಾಸ್ಕರರಾವ್, ಶ್ರೀಮತಿ ಪುಷ್ಪ ಅಯ್ಯಂಗಾರ್, ಜಿಲ್ಲಾ ಬ್ರಾಹ್ಮಣ ಮಹಾಸಭಾದ ಗೌ. ಅಧ್ಯಕ್ಷರಾದ ಡಾ. ರಘುರಾಂ ವಾಜಪೇಯಿ, ಕೇಂದ್ರ ಕಾರ್ಯಕಾರಿ ಮಂಡಳಿ ಸದಸ್ಯರಾದ ಎಂ.ಎಸ್.ರವೀಂದ್ರ ಹಾಗೂ ಪದಾಧಿಕಾರಿಗಳ ಸಮ್ಮುಖದಲ್ಲಿ ಸಮರ್ಪಿಸಿ ಆಶೀರ್ವಾದ ಪಡೆಯಲಾಯಿತು.



ಧಾರವಾಡ ಹನುಮಂತನಗರದ ಶ್ರೀ ಸೀತಾಪಟ್ಟಾಭಿರಾಮ ದೇವಸ್ಥಾನದಲ್ಲಿ ಚಾತುರ್ಮಾಸ ಕೈಗೊಂಡ ಕೂಡಲಿ ಆರ್ಯ ಅಕ್ಷೋಭ್ಯತೀರ್ಥ ಮಠದ ಶ್ರೀ ರಘುವಿಜಯತೀರ್ಥ ಶ್ರೀಪಾದಂಗಳವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ವತಿಯಿಂದ ಸತ್ಕರಿಸಲಾಯಿತು. ಮುಖಂಡರಾದ ಎ.ಸಿ. ಗೋಪಾಲ, ಹಣಮಂತ ಡಂಬಳ, ಬಿಂದುಮಾಧವ ಪುರೋಹಿತ, ಸಂಜೀವ ಕುಲಕರ್ಣಿ ಇದ್ದರು.



ಸೋಂದೇ ವಾದಿರಾಜ ಮಠದ ಶ್ರೀ ಶ್ರೀ ವಿಶ್ವವಲ್ಲಭ ತೀರ್ಥ ಸ್ವಾಮಿಗಳನ್ನು ಭೇಟಿ ಮಾಡಿ ಅಖಿಲ ಕರ್ನಾಟಕ ಮಹಾಸಭಾದ ಪರವಾಗಿ ಗುರು ಪೂರ್ಣಿಮೆಯ ಸಂದರ್ಭದಲ್ಲಿ ಭಿಕ್ಷಾವಂದನೆ ಮಾಡಿ ಆಶೀರ್ವಾದವನ್ನು ಪಡೆಯಲಾಯಿತು. ಈ ಸಂದರ್ಭದಲ್ಲಿ ಬ್ರಾಹ್ಮಣಸಭಾದ ಉಪಾಧ್ಯಕ್ಷರಾದ ಶ್ರೀ ಶಶಿಭೂಷಣ್ ಹೆಗಡೆ, ಸಂಘಟನಾ ಕಾರ್ಯದರ್ಶಿಗಳಾದ ಶ್ರೀಪಾದ್ ರಾಯ್ಸದ್ ಮತ್ತು ಇತರ ಪದಾಧಿಕಾರಿಗಳು ಉಪಸ್ಥಿತರಿದ್ದರು



ನೆಲಮಾವು ಶ್ರೀಮಠದಲ್ಲಿ ಶ್ರೀ ಶ್ರೀ ಮಾಧವಾನಂದ ಭಾರತೀ ಸ್ವಾಮಿಗಳವರ ಚಾತುರ್ಮಾಸ ವ್ರತವು ವ್ಯಾಸಪೂಜೆಯೊಂದಿಗೆ ಆರಂಭವಾದ ಸಂದರ್ಭದಲ್ಲಿ ಶ್ರೀ ಅಶೋಕ್ ಹಾರನಹಳ್ಳಿ (ಅಧ್ಯಕ್ಷರು, AKBMS), ಶ್ರೀ ಶಶಿಭೂಷಣ ಹೆಗಡೆ ದೊಡ್ಮನೆ (ಉಪಾಧ್ಯಕ್ಷರು, AKBMS) ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾದ ಪ್ರಮುಖ ಪದಾಧಿಕಾರಿಗಳು ಸ್ವಾಮಿಗಳ ಚಾತುರ್ಮಾಸ ದರ್ಶನ ಪಡೆದು ಭಿಕ್ಷಾ ಸಮರ್ಪಣೆ ಮಾಡಿ ಆಶೀರ್ವಾದ ಪಡೆದರು

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ)**

ಗಾಯತ್ರೀ ಭವನ, ನಂ.3070, (14ನೇ ಅಡ್ಡರಸ್ತೆ), 9ನೇ ಮುಖ್ಯರಸ್ತೆ,
ಗಾಯತ್ರಿ ಭವನ ರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70
ದೂರವಾಣಿ: 26771695, 26770066
E-mail: info@akbms.com
Website: www.akbms.com

ಅಧ್ಯಕ್ಷರು
**ಅಶೋಕ ಹಾರನಹಳ್ಳಿ**

ಪ್ರಧಾನ ಕಾರ್ಯದರ್ಶಿ
**ಶ್ರೀಧರಮೂರ್ತಿ ಎಸ್.**

ಖಜಾಂಚಿ
**ವೆಂಕಟೇಶ ಎಸ್, ನಾಯಕ್**

**ವಿಪ್ರನುಡಿ ಪ್ರಕಟಣಾ ಸಮಿತಿ**

ಪ್ರಧಾನ ಸಂಪಾದಕರು
**ಡಾ। ಎಂ.ಕೆ. ಶ್ರೀಧರ್**

ಸಮಿತಿ ಸದಸ್ಯರು
ಜ್ಯೋತಿಷಿ ಬ॥ ಡಾ। ಮುದ್ರಾಡಿ ವಾಸುದೇವ ಭಟ್
ನಾರಾಯಣ ಭಟ್ ಹುಳೇಗಾರು
ಪ್ರಭಾಕರ ಕೆ.ಸಿ
ಕಾರ್ತಿಕ್ ಬಾಪಟ್
ಟಿ.ಎಲ್.ಎಸ್. ಕುಮಾರ್
ಹೆಚ್.ವಿ. ಸುಬ್ಬರಾವ್

ಕಛೇರಿ ಸಮಯ : ಮಂಗಳವಾರದಿಂದ ಶನಿವಾರ
ಬೆಳಿಗ್ಗೆ 10.00 ರಿಂದ 2.00
ಸಂಜೆ 4.00 ರಿಂದ 8.00
ಭಾನುವಾರ ಬೆಳಿಗ್ಗೆ 10.00 ರಿಂದ 2.00
ವಾರದ ರಜಾ : ಸೋಮವಾರ

ಮುದ್ರಕರು : ಪರಿಮಳ ಮುದ್ರಣಾಲಯ
ನಂ 184, 14ನೇ ಮುಖ್ಯರಸ್ತೆ, ಹನುಮಂತನಗರ
ಬೆಂಗಳೂರು-560 05. ದೂ : 26606061.

# ನಲ್ನುಡಿ

**ನಹಿ ಯತ್ ಕರ್ಮ ಧರ್ಮಾಯ ನ ವಿರಾಮಾಯ ಕಲ್ಪತೇ ।**
**ನ ತೀರ್ಥಪದ ಸೇವಾಯೈ ಜೀವನ್ನಪಿ ಮೃತೋಹಿ ಸಃ ॥**

"(ಈ ಲೋಕದಲ್ಲಿ) ಯಾರಾದರೂ ಮಾಡುವ ಕೆಲಸವು ಧರ್ಮ ಸಾಧನೆಗಾಗಿ ಅಲ್ಲವೋ, ವೈರಾಗ್ಯಕ್ಕೆ ಅಲ್ಲವೋ, ಸಾಧು-ಸಂತರ ಸೇವೆಗಾಗಿ ಅಲ್ಲವೋ, ಅಂತಹ ಮನುಷ್ಯನು ಜೀವಿಸಿದ್ದರೂ ಮರಣ ಹೊಂದಿದಂತೆ"

ಮನುಷ್ಯ ಜೀವನದ ಸಾರ್ಥಕತೆಯನ್ನು ಭಾಗವತದ ಮೇಲ್ಕಂಡ ಶ್ಲೋಕ ವಿವರಿಸುತ್ತದೆ. ನಾವು ಐದು ಜ್ಞಾನೇಂದ್ರಿಯಗಳು, ಐದು ಕರ್ಮೇಂದ್ರಿಯಗಳ ಮೂಲಕ ತೊಡಗುವ ಕ್ರಮಕ್ಕೆ ಮನಸ್ಸೇ ಮುಖ್ಯ ಕಾರಣ. ಈ ಮನಸ್ಸೇ ಸಾಂಸಾರಿಕ ಬಂಧನ ಅಥವ ಮೋಕ್ಷಕ್ಕೆ ಕಾರಣವೆಂದು ಮಹಾಭಾರತ ವಾಕ್ಯ (**ಮನ ಏವ ಮನುಷ್ಯಾಣಾಂ ಕಾರಣಂ ಬಂಧ ಮೋಕ್ಷಯೋಃ** ।) ಮನುಷ್ಯನಲ್ಲಿ ಮಾತ್ರ ಮನಸ್ಸು ಬಹಳ ಜಾಗೃತವಾಗಿದ್ದು ಸರಿ-ತಪ್ಪು, ಗುಣ-ದೋಷಗಳನ್ನು ವಿವೇಚಿಸಲು ಸಮರ್ಥ, ಆದ್ದರಿಂದ ನಮ್ಮ ಗುರಿ, ಉದ್ದೇಶ ಸಫಲವಾಗಬೇಕಾದರೆ ಮಾಡುವ ಕೆಲಸ ಅರ್ಥವತ್ತಾಗಿರಬೇಕು. ಜೀವನದ ಕೆಲಸವು ಧರ್ಮಯುತವಾಗಿರಬೇಕು. ಧರ್ಮ ಎಂಬ ಶಬ್ದ ಬಹಳ ವ್ಯಾಪಕವಾದ ಅರ್ಥವ್ಯಾಪ್ತಿಯಿದ್ದು, ಅದು ವ್ಯಕ್ತಿ, ಕುಟುಂಬ, ಸಮಾಜ, ದೇಶ, ವಿಶ್ವಕಲ್ಯಾಣವನ್ನು ಒಳಗೊಂಡಿದೆ. ಈ ಧರ್ಮದಲ್ಲಿ ಸೇವೆ, ಪೂಜೆ, ವೈರಾಗ್ಯ ಎಲ್ಲವೂ ಸೇರಿವೆ. ಸೇವೆಯು ಹೃದಯ ವೈಶಾಲ್ಯವನ್ನು, ಪೂಜೆಯು ಜ್ಞಾನಾರ್ಜನೆಯನ್ನು, ವೈರಾಗ್ಯವು ಅನಾಸಕ್ತಿ ಕರ್ಮವನ್ನು ಸೂಚಿಸುತ್ತವೆ. ವೇದಗಳ ಪ್ರಕಾರ ನಾವು ತೊಡಗುವ ಎಲ್ಲ ಕ್ರಿಯಾತ್ಮಕ ಕೆಲಸಗಳೆಲ್ಲವೂ ಯಜ್ಞವೇ. ದೇವತೆಗಳಿಗೆ ನಮ್ಮ ಕೃತಜ್ಞತೆ ಸಲ್ಲಿಸಲು ವಿಧಿಯುಕ್ತವಾಗಿ ಅಗ್ನಿಯಲ್ಲಿ ಹವಿಸ್ಸನ್ನು ಯಜಮಾನನು ಸಮರ್ಪಿಸುವುದು ಯಜ್ಞದ ಒಂದು ಭಾಗ. ಈ ಯಜ್ಞದ ಅನುಷ್ಠಾನವೇ ನಮ್ಮ ಕರ್ಮಚಕ್ರ. ಯಾವ ವ್ಯಕ್ತಿಯು ಈ ಕರ್ಮಚಕ್ರವನ್ನು ಪಾಲಿಸುವುದಿಲ್ಲವೂ ಅಂತಹವನ ಜನ್ಮ ನಿರರ್ಥಕ. ಈ ಯಜ್ಞ ಪ್ರಕ್ರಿಯೆಯ ಪ್ರಮುಖ ಸೂತ್ರಗಳು ದಾನ ಮತ್ತು ಪ್ರತಿಗ್ರಹ (ಪಡೆದುಕೊಳ್ಳುವುದು). ದಾನ-ಪ್ರತಿಗ್ರಹ ಅಥವಾ ಆದಾನ-ಪ್ರದಾನಗಳು ಜಗತ್ತಿನ ನಡೆಗೆ ಮುಖ್ಯವಾದವು. ನಿಸರ್ಗದಲ್ಲೂ ಈ ಅಂಶವನ್ನು ನೋಡಬಹುದು. ಮಹಾಕವಿ ಕಾಳಿದಾಸನು ರಘುವಂಶ ಮಹಾಕಾವ್ಯದಲ್ಲಿ ವಿವರಿಸಿದಂತೆ ಮೋಡಗಳು ಭೂಮಿಯಲ್ಲಿನ ನೀರನ್ನು ಹೀರಿ, ಮಳೆಗಾಲದ ಮೋಡಗಳಾಗಿ ಪರಿವರ್ತನೆ ಹೊಂದಿ, ಇಳೆಗೆ ಮಳೆ ಸುರಿಸಿ ಸಜ್ಜನರಂತೆ ತಂಪಾಗಿಸುತ್ತವೆ. (**ಆದಾನಂ ಹಿವಿಸರ್ಗಾಯ ಸತಾಂ ವಾರಿಮುಚಾಮಿವ**।) ಸಸ್ಯ ಪ್ರಪಂಚದಲ್ಲೂ ಈ ಪ್ರಕ್ರಿಯೆ ನಿರಂತರವಾಗಿ ನಡೆದೇ ಇರುತ್ತದೆ. ಬಳ್ಳಿ, ಗಿಡ, ಮರಗಳು ಪಕ್ಷಿಗಳು ನಮ್ಮಿಂದ ಪಡೆದಿದ್ದಕ್ಕಿಂತ ನೀಡಿರುವುದೇ ಜಾಸ್ತಿ. ಆ ಕಾರಣದಿಂದ, ಮನುಷ್ಯರಾದ ನಾವು ನಮಗೆ ನಿರಂತರವಾಗಿ ಸಹಾಯ ಮಾಡುತ್ತಿರುವ ಪ್ರಕೃತಿಯ ಚೇತನ-ಅಚೇತನ ವಸ್ತುಗಳನ್ನು ರಕ್ಷಿಸುತ್ತಾ, ಸೇವೆ, ಧರ್ಮಕಾರ್ಯದಲ್ಲಿ ತೊಡಗಿ ಜೀವನ ಸಾರ್ಥಕ್ಯ ಹೊಂದಬೇಕು. ಮಂಗಳವನ್ನು ಕಾಣಬೇಕು ಎಂದು ಮಹರ್ಷಿ ವೇದವ್ಯಾಸರ ಹಿತೋಕ್ತಿ. (**ಜೀವನ್ ಭದ್ರಾಣಿ ಪಶ್ಯತಿ**).

**- ಪ್ರೊ. ಎಂ.ಕೆ. ಶ್ರೀಧರ್**

**ಸೂಚನೆ : ವಿಪ್ರನುಡಿ ಪತ್ರಿಕೆಯಲ್ಲಿ ಮುದ್ರಿತ ವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರ ವೈಯಕ್ತಿಕ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ, ಪ್ರಕಾಶಕರ - ಮುದ್ರಕರ ಅಭಿಪ್ರಾಯವಲ್ಲ. ವಿಪ್ರನುಡಿಯಲ್ಲಿ ಪ್ರಕಟವಾಗುವ ಯಾವುದೇ ಜಾಹೀರಾತುಗಳಿಗೆ (ರಿಯಲ್ ಎಸ್ಟೇಟ್, ಜ್ಯೋತಿಷ್ಯ, ವಾಣಿಜ್ಯಕ್ಕೆ ಸಂಬಂಧಿಸಿದ್ದು ಮಹಾಸಭೆ ಜವಾಬ್ದಾರರಾಗಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಜಾಹಿರಾತುದಾರರನ್ನೇ ಸಂಪರ್ಕಿಸಬೇಕು.**

**-ಸಂಪಾದಕ ಮಂಡಳಿ**

# ಭಗವಂತನ ಅಸ್ತಿತ್ವ

– ಸ್ವಾಮಿ ಶಿವಪ್ರಕಾಶಾನಂದ ಸರಸ್ವತಿ

ಭಗವಂತ, ಈಶ್ವರ, ದೇವರು, ಪರಮಾತ್ಮ, ಬ್ರಹ್ಮ ಇತ್ಯಾದಿ ಶಬ್ದಗಳಿಂದ ಕರೆಯಲ್ಪಡುವ ಒಂದು ತತ್ತ್ವದ ಅಸ್ತಿತ್ವವನ್ನು ವೇದಾದಿ ಶಾಸ್ತ್ರಗಳು ಪ್ರತಿಪಾದಿಸುತ್ತವೆ. ಪ್ರಾಚೀನ ಕಾಲದ ಚಾರ್ವಾಕರಂತಹ ನಾಸ್ತಿಕರೂ, ಈಗಿನ ಕಾಲದ ಬುದ್ಧಿಜೀವಿಗಳೆನಿಸಿಕೊಳ್ಳುವ ಕೆಲವರೂ ಭಗವತ್ತತ್ವದ ಅಸ್ತಿತ್ವವನ್ನು ನಿರಾಕರಿಸುತ್ತಾರೆ. ಆದರೆ ಸರಿಯಾದ ಯುಕ್ತಿಯಿಂದ ವಿಚಾರ ಮಾಡಿದರೆ ಭಗವಂತನ ಅಸ್ತಿತ್ವವನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಯಂತ್ರವೊಂದನ್ನು ನೋಡಿದಾಗ ಅದನ್ನು ನಿರ್ಮಿಸಿದ ಬುದ್ಧಿವಂತನಾದ ವ್ಯಕ್ತಿಯೊಬ್ಬನು ಇರಲೇ ಬೇಕು ಎಂದು ನಾವು ಊಹಿಸಬಹುದು. ಯಂತ್ರದಲ್ಲಿ ಪರಸ್ಪರ ಹೊಂದುವಂತೆ ಜೋಡಿಸಲ್ಪಟ್ಟಿರುವ ಹಲವಾರು ಭಾಗಗಳಿವೆ. ತಿಳುವಳಿಕೆಯುಳ್ಳ ವ್ಯಕ್ತಿಯೊಬ್ಬನಿಲ್ಲದೆ ಅಂತಹ ಯಂತ್ರದ ರಚನೆ ಸಾಧ್ಯವಿಲ್ಲ. ಈ ಜಗತ್ತೂ ಒಂದು ಯಂತ್ರದಂತೆ. ಇದರಲ್ಲಿ ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು ಇತ್ಯಾದಿ ಗೋಲಗಳು ಪರಸ್ಪರ ಹೊಂದಾಣಿಕೆಯಿಂದ ನಿರಂತರ ಸುತ್ತುತ್ತಿರುವುವು. ನಮ್ಮ ಶರೀರದಲ್ಲಾದರೋ ವಿಜ್ಞಾನಕ್ಕೆ ಇನ್ನೂ ತಿಳಿಯಲು ಸಾಧ್ಯವಾಗದಂತಹ ಎಷ್ಟೋ ಆಶ್ಚರ್ಯಕರವಾದ ರಚನೆಗಳು ತುಂಬಿವೆ. ಸೃಷ್ಟಿಯ ಪ್ರತಿಯೊಂದು ಕಣದಲ್ಲೂ ಅತ್ಯದ್ಭುತವಾದ ರಚನಾಕೌಶಲಗಳನ್ನು ನಾವು ಕಾಣಬಹುದು, ಇಂತಹ ಸೃಷ್ಟಿಯು ಸರ್ವಜ್ಞನೂ ಸರ್ವಶಕ್ತನೂ ಆದ ಭಗವಂತನಿಲ್ಲದೆ ಸಾಧ್ಯವೇ?

ಯಂತ್ರವನ್ನು ನಿರ್ಮಿಸಿದ ತಂತ್ರಜ್ಞಾನಿಗೆ ಯಂತ್ರದ ಪ್ರತಿಯೊಂದು ಭಾಗದ ಅರಿವೂ ಇರಬೇಕಾಗುತ್ತದೆ. ಹಾಗೆಯೇ ಈ ಜಗತ್ತನ್ನು ನಿರ್ಮಿಸಿದ ಈಶ್ವರನಿಗೆ ಇಲ್ಲಿರುವ ಪ್ರತಿಯೊಂದು ವಸ್ತುವಿನ ಪರಿಜ್ಞಾನವೂ ಇರಲೇ ಬೇಕು. ಹಾಗಾಗಿ "ಯಃ ಸರ್ವಜ್ಞಃ ಸರ್ವವಿತ್" ಇತ್ಯಾದಿ ವೇದವಾಕ್ಯಗಳು ಈಶ್ವರನನ್ನು ಸರ್ವಜ್ಞನೆಂದು ಘೋಷಿಸಿವೆ.

ತೈತ್ತಿರೀಯೋಪನಿಷತ್ತಿನಲ್ಲಿ ವರುಣನೆಂಬ ಋಷಿಯು ತನ್ನ ಪುತ್ರನಾದ ಭೃಗುವಿಗೆ ಬ್ರಹ್ಮತತ್ತ್ವವನ್ನು ಉಪದೇಶಿಸುತ್ತಾ ಹೇಳುತ್ತಾನೆ: "ಯತೋ ವಾ ಇಮಾನಿ ಭೂತಾನಿ ಜಾಯಂತೇ, ಯೇನ ಜಾತಾನಿ ಜೀವಂತಿ, ಯತ್ ಪ್ರಯಂತ್ಯಭಿಸಂವಿಶಂತಿ, ತದ್ ಬ್ರಹ್ಮ." ಸಕಲ ಚರಾಚರಗಳಿಂದ ಕೂಡಿದ ಈ ಜಗತ್ತು ಎಲ್ಲಿಂದ ಉದ್ಭವಿಸುವುದೋ, ಯಾವುದರಿಂದಾಗಿ ಇರುವುದೋ, ಹಾಗೂ ಪ್ರಳಯಕಾಲದಲ್ಲಿ ಎಲ್ಲಿ ಲಯವಾಗುವುದೋ, ಅದುವೇ ಬ್ರಹ್ಮ. ಸಮುದ್ರದ ಅಲೆಗಳು ಸಮುದ್ರದಿಂದಲೇ ಹುಟ್ಟಿ, ಸಮುದ್ರದಲ್ಲೇ ಇದ್ದು, ಸಮುದ್ರದಲ್ಲೇ ಲಯವಾಗುತ್ತವೆ. ಹಾಗೆಯೇ ಈ ಜಗತ್ತು ಬ್ರಹ್ಮನೆಂದು ಕರೆಯಲ್ಪಡುವ ಪರಮಾತ್ಮನಿಂದ ಹುಟ್ಟಿಕೊಂಡು ಪರಮಾತ್ಮನನ್ನೇ ಆಶ್ರಯಿಸಿಕೊಂಡು ಇರುತ್ತದೆ. ಕೊನೆಯಲ್ಲಿ ಪರಮಾತ್ಮನಲ್ಲೇ ಲಯವಾಗುತ್ತದೆ. ಪರಮಾತ್ಮನು ಜಗತ್ತಿನ ಆಧಾರವಾಗಿದ್ದು ಜಗತ್ತನ್ನು ವ್ಯಾಪಿಸಿಕೊಂಡಿರುವನು. "ಜನ್ಮಾದ್ಯಸ್ಯ ಯತಃ" ಎನ್ನುವ ಬ್ರಹ್ಮಸೂತ್ರದ ಎರಡನೆಯ ಸೂತ್ರವು ಇದನ್ನೇ ಪ್ರತಿಪಾದಿಸುತ್ತದೆ.

ಒಂದು ರಾಜ್ಯದ ಪ್ರಜೆಗಳು ಪರಸ್ಪರ ಜಗಳವಾಡದೆ, ನಿಯಮಿತವಾಗಿ ತಮ್ಮ ಕೆಲಸಗಳನ್ನು ಮಾಡುತ್ತಿರಬೇಕಾದರೆ ಆ ರಾಜ್ಯವನ್ನು ಆಳುವ ಒಬ್ಬ ಸಮರ್ಥನಾದ ರಾಜನು ಇರಲೇ ಬೇಕು. ಈ ಪ್ರಪಂಚದಲ್ಲಿ ಹಲವಾರು ನೈಸರ್ಗಿಕ ಶಕ್ತಿಗಳು ಸತತವಾಗಿ ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಿರುತ್ತವೆ. ಸೂರ್ಯನು ಪ್ರತಿದಿನ ತಪ್ಪದೆ ಉದಯಿಸುತ್ತಾನೆ. ಗಾಳಿಯು ನಿಯಮಿತವಾಗಿ ಬೀಸುತ್ತಿರುತ್ತದೆ. ಮೋಡಗಳು ಸಮಯಕ್ಕೆ ಸರಿಯಾಗಿ ಮಳೆ ಸುರಿಸುತ್ತವೆ. ಈ ನೈಸರ್ಗಿಕ ಶಕ್ತಿಗಳ ಕ್ರಮಬದ್ಧವಾದ ಚಟುವಟಿಕೆಗಳೂ ಇವುಗಳನ್ನು ನಿಯಂತ್ರಿಸುವ ಪರಮೇಶ್ವರನಿಲ್ಲದೆ ಸಾಧ್ಯವೇ? "ಭೀಷಾಸ್ಮಾದ್ ವಾತಃ ಪವತೇ, ಭೀಷೋದೇತಿ ಸೂರ್ಯಃ" ಎನ್ನುವ ತೈತ್ತಿರೀಯೋಪನಿಷತ್ತಿನ ವಾಕ್ಯವು ಇದನ್ನೇ ಸೂಚಿಸುತ್ತದೆ.

ಭಗವಂತನು ನಮ್ಮ ಕರ್ಮಗಳಿಗೆ ತಕ್ಕ ಫಲವನ್ನು ಕೊಡುವವನು. ಜೀವಗಳು ಮಾಡುವ ಶುಭ ಹಾಗೂ ಅಶುಭ ಕರ್ಮಗಳನ್ನು ತಿಳಿದು ಅವುಗಳಿಗೆ ಸರಿಯಾದ ಸಮಯಕ್ಕೆ ಸರಿಯಾದ ಫಲವು ಸಿಗುವಂತೆ ನೋಡಿಕೊಳ್ಳುವನು. ಭಕ್ತರನ್ನು ಅನುಗ್ರಹಿಸಿ ರಕ್ಷಿಸುವನು. ಭಗವಂತನ ಕೃಪೆಯ ಅನುಭವವನ್ನು ಪಡೆದ ಭಕ್ತನು ಅವನ ಅಸ್ತಿತ್ವದ ಬಗ್ಗೆ ಸಂಶಯವನ್ನು ಹೊಂದುವುದಿಲ್ಲ. ಭಗವಂತನ ಅನುಗ್ರಹವು ಸಂಶಯವನ್ನು ತೊಲಗಿಸುತ್ತದೆ ಹಾಗೂ ಆತನಲ್ಲಿ ಶ್ರದ್ಧೆಯನ್ನು ದೃಢವಾಗಿಸುತ್ತದೆ. "ಭಕ್ತ್ಯಾ ಮಾಮ್ ಅಭಿಜಾನಾತಿ ಯಾವಾನ್ ಯಶ್ಚಾಸ್ಮಿ ತತ್ವತಃ" ಎನ್ನುವ ಭಗವದ್ಗೀತೆಯ ವಾಕ್ಯದಂತೆ ಭಕ್ತಿಯು ಭಗವಂತನ ಸ್ವರೂಪವನ್ನು ತಿಳಿಯಲು ಸಾಧನವಾಗಿದೆ. ಭಗವಂತನ ಕೃಪೆಯು ಭಕ್ತನನ್ನು ಸಮರ್ಥನಾದ ಗುರುವಿನ ಕಡೆಗೆ ಕೊಂಡೊಯ್ಯುತ್ತದೆ. ತತ್ವದರ್ಶಿಯಾದ ಗುರುವಿನ ಉಪದೇಶವು ಶೀಘ್ರವಾಗಿ ಪರಮಾತ್ಮನ ಸ್ವರೂಪದ ಅರಿವನ್ನು ಮೂಡಿಸುತ್ತದೆ.


**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)**

**ಮಹಾಸಭೆಯು 60 ವರ್ಷ ಮೇಲ್ಪಟ್ಟ ಅಶಕ್ತ ವಿಪ್ರ ವೃದ್ಧರು ಹಾಗೂ ಅಂಗವಿಕಲರಿಗೆ ನೀಡುತ್ತಿರುವ ಮಾಸಿಕ ಮಾಸಾಶನ ನಿಧಿಗೆ ದೇಣಿಗೆ ನೀಡಿರುವ ವಿಪ್ರ ಮಹನೀಯರು.**

| ಹೆಸರು | ಮೊಬಲಗು | ಹೆಸರು | ಮೊಬಲಗು |
|---|---|---|---|
| **ಶ್ರೀ ಪುಟ್ಟಣ್ಣ,** ಬೆಂಗಳೂರು | 6,000/– | **ಶ್ರೀ ರಂಗರಾವ್ ಬಿ.ವಿ.,** ಬೆಂಗಳೂರು | 6,000/– |
| **ಬ್ರಾಹ್ಮಣ ಸಂಘ, ಟಿ. ದಾಸರಹಳ್ಳಿ,** ಬೆಂಗಳೂರು | 6,000/– | **ಶ್ರೀ ಗಂಗಾಧರ ಜೋಶಿ,** ವಕೀಲರು | 10,000/– |

***ದೇಣಿಗೆ ನೀಡಿರುವ ಎಲ್ಲಾ ಮಹನೀಯರಿಗೆ ಮಹಾಸಭೆಯ ಅನಂತ ಕೃತಜ್ಞತೆಗಳು.***

# ಅಧ್ಯಕ್ಷರ ನುಡಿ



**ವಿಪ್ರ ಬಾಂಧವರಿಗೆ ನನ್ನ ನಮಸ್ಕಾರಗಳು,**

ಪ್ರತಿಭೆ–ಬುದ್ಧಿವಂತಿಕೆಗಳು ಬ್ರಾಹ್ಮಣರ ಆಸ್ತಿ. ಇದೇ ನಮ್ಮನ್ನು ಕಾಪಾಡಿದ್ದು, ಕಾಪಾಡುತ್ತಿರುವುದು, ಮುಂದೆ ಕಾಪಾಡಬೇಕಾದ್ದು. ಆದ್ದರಿಂದಲೇ ನಮ್ಮ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವುದು ಇಂದು ಸಮಾಜದ ಅತ್ಯಂತ ಮುಖ್ಯ ಜವಾಬ್ದಾರಿ. ಈ ಕೆಲಸವನ್ನು ರಾಜ್ಯಮಟ್ಟದಲ್ಲಿ ಮಹಾಸಭೆ, ಸ್ಥಳೀಯಮಟ್ಟದಲ್ಲಿ ಸ್ಥಳೀಯ ಬ್ರಾಹ್ಮಣ ಸಂಘ–ಸಂಸ್ಥೆಗಳು ಹಾಗೂ ಆಯಾ ಪಂಗಡಗಳ ಸಂಸ್ಥೆಗಳು ಮಾಡಿಕೊಂಡು ಬರುತ್ತಿರುವುದು ಸಂತಸದ ಸಂಗತಿ. ಸಮುದಾಯದ ಯಾವೊಂದು ಪ್ರತಿಭೆಯೂ, ಆರ್ಥಿಕ ಕಾರಣಕ್ಕಾಗಿ ಮುರುಟಿಹೋಗದಂತೆ ಬೆಳೆಸಬೇಕಾದಂತದ್ದು ಸಮಾಜದ ಗುರುತರ ಜವಾಬ್ದಾರಿ. ಇದನ್ನು ನಮ್ಮ ಸಂಘ–ಸಂಸ್ಥೆಗಳು ಮನಗಂಡು ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ನಡೆಸುತ್ತಿರುವುದನ್ನು 'ವಿಪ್ರನುಡಿ' ತಿಳಿಸುತ್ತಿದೆ. ಇತ್ತೀಚೆಗೆ ನನ್ನ ಬಹುತೇಕ ಪ್ರವಾಸಗಳು ಪ್ರತಿಭಾ ಪುರಸ್ಕಾರ ಸಮಾರಂಭಗಳಲ್ಲಿ ಭಾಗವಹಿಸಿದ್ದು ನನಗೆ ಅತ್ಯಂತ ಸಂತೋಷದ ಸಂಗತಿಯೂ ಆಗಿದೆ. ಇತ್ತೀಚೆಗೆ ರಾಯಚೂರು ಮಹಾಸಭಾ ಘಟಕವು ತುಂಬಾ ಅದ್ದೂರಿಯಾಗಿ ಜಿಲ್ಲೆಯಾದ್ಯಂತ ಪ್ರತಿಭೆಗಳನ್ನು ಹಾಗೂ ಅವರ ಪೋಷಕರು ಹಾಗೂ ಪುರಸ್ಕಾರ ನೀಡಿದ ಪ್ರಾಯೋಜಕರನ್ನು ಸನ್ಮಾನಿಸಿರುವುದು ಎಲ್ಲರಿಗೂ ಮಾದರಿಯಾಗಿದೆ. ಈ ಉತ್ತಮ ಕಾರ್ಯ ಮಾಡಿದ ರಾಯಚೂರು ಘಟಕಕ್ಕೂ ಹಾಗೂ ಕೇವಲ 120 ಬ್ರಾಹ್ಮಣ ಮನೆಗಳಿಂದ ತುರುವೇಕೆರೆಯಲ್ಲಿ ಕಾರ್ಯಕ್ರಮವನ್ನು ತುಂಬ ಸಂಭ್ರಮದಿಂದ ಅಯೋಜಿಸಿರುವುದನ್ನು ನಾನು ಅಭಿನಂದಿಸುತ್ತೇನೆ. ಹಿಂದಿನ ತಿಂಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮೈಸೂರು, ಮಂಡ್ಯದಲ್ಲಿ ತುಂಬಾ ಅದ್ದೂರಿಯಾಗಿಯೇ ನಡೆಸಿರುವುದನ್ನು ನಾವು ಸ್ಮರಿಸಿಕೊಳ್ಳಬಹುದು. ಇಂತಹ ಕಾರ್ಯಕ್ರಮಗಳನ್ನು ದಾವಣಗೆರೆ, ಕೊಡಗು, ಕೆ.ಜಿ.ಎಫ್. ಮತ್ತು ಬೆಂಗಳೂರಿನ ಹಲವು ಸಂಘಸಂಸ್ಥೆಗಳು ನಡೆಸಿರುವುದು ಸಂತಸದ ಸಂಗತಿ.

ಚಾತುರ್ಮಾಸ್ಯವ್ರತವು ವಿವಿಧ ಸಂಪ್ರದಾಯಕ್ಕೆ ಸೇರಿದ ಎಲ್ಲ ಮಠಗಳ ಯತಿಗಳಿಂದ ನಡೆಯುತ್ತಿದೆ. ವ್ರತನಿರತರಾಗಿರುವ ಗುರುಗಳ ಸಂದರ್ಶನ, ಭಿಕ್ಷಾ ಸಮರ್ಪಣೆಯ ಮೂಲಕ ಆಶೀರ್ವಾದ ಪಡೆಯುವುದು ಗೃಹಸ್ಥರಿಗೆ ಶ್ರೇಯಸ್ಕರ ಹಾಗೂ ಸಂಪ್ರದಾಯವೂ ಹೌದು. ಕಳೆದ ವರ್ಷವೂ ಮಹಾಸಭೆಯ ವತಿಯಿಂದ ನಡೆದ ಭಿಕ್ಷಾ ಸಮರ್ಪಣೆ ಕಾರ್ಯಕ್ರಮ ಎಲ್ಲಾ ಯತಿಗಳ ಮೆಚ್ಚುಗೆಗೆ ಪಾತ್ರವಾಗಿದ್ದು, ಈ ಬಾರಿಯೂ ಈ ಪವಿತ್ರ ಕಾರ್ಯಕ್ರಮವನ್ನು ಸ್ಥಳೀಯ ಉಪಾಧ್ಯಕ್ಷರು, ಉಸ್ತುವಾರಿಗಳು, ಸಂಘಟನಾ ಕಾರ್ಯದರ್ಶಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಚಾತುರ್ಮಾಸ್ಯವ್ರತ ಕೈಗೊಂಡಿರುವ ಗುರುವರ್ಯರನ್ನು ಸಂದರ್ಶಿಸಿ, ಭಿಕ್ಷಾ ಸಮರ್ಪಣೆ ಸಲ್ಲಿಸಿ ಆಶೀರ್ವಾದ ಪಡೆಯುಬೇಕೆಂದು ವಿನಂತಿಸುತ್ತೇನೆ.

ಚಾತುರ್ಮಾಸ್ಯವ್ರತವು ಮುಗಿದ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಸೇರಿದ ಎಲ್ಲಾ ಸಂಪ್ರದಾಯದ ಮಠಗಳು ಹಾಗೂ ಶಾಖಾಮಠಗಳ ಯತಿಗಳ ಸಮಾವೇಶವನ್ನು ನಡೆಸಬೇಕೆಂಬ ಪ್ರಸ್ತಾಪವು ಯತಿಗಳಿಂದ ಬಂದಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ "ಯತಿಗಳ ಸಮಾವೇಶ" ಹಮ್ಮಿಕೊಳ್ಳುವ ಯೋಜನೆ ಇದೆ ಎಂಬುದನ್ನು ತಿಳಿಸಲು ಸಂತಸವಾಗುತ್ತಿದೆ. ಈ ಸಮಾವೇಶ ಯಶಸ್ವಿಯಾಗಿ ಸಮುದಾಯದ ಒಗ್ಗಟ್ಟು, ಸಾಮರಸ್ಯ ಹಾಗೂ ಅಭಿವೃದ್ಧಿಗೆ ಮತ್ತು ಸನಾತನ ಧರ್ಮದ ಸಂರಕ್ಷಣೆ ಕಾರ್ಯಕ್ಕೆ ಸಹಾಯಕವಾಗುವುದು ಎಂದು ನಂಬಿದ್ದೇನೆ. ಅತ್ಯಂತ ಮಹತ್ವದ ಯೋಜನೆಗೆ ತಮ್ಮೆಲ್ಲರ ಬೆಂಬಲ–ಸಹಕಾರ ಮಾರ್ಗದರ್ಶನ ಕೋರುತ್ತೇನೆ.

ಕಳೆದ ತಿಂಗಳು ಮಹಾಸಭೆಯು ಆಯೋಜಿಸಿದ "ವಿಪ್ರ ಉದ್ಯಮಿಗಳ ಮಂತ್ರಾಲೋಚನಾ ಸಭೆ" ಗೆ ಉತ್ತಮ ಸ್ಪಂದನೆ ದೊರಕಿರುವುದು, ನಾಡಿನ ಪ್ರಸಿದ್ಧ ಉದ್ಯಮಿಗಳೂ, ಯಶಸ್ವೀ ಹಿರಿ–ಕಿರಿಯ ಉದ್ಯಮಿಗಳು ಪಾಲ್ಗೊಂಡು ಸಭೆಯನ್ನು ಯಶಸ್ವಿಯಾಗಿರಿಸಿರುವುದು ಮತ್ತೊಂದು ಸಂತಸದ ಸಮಾಚಾರ. ಈ ಸಭೆಯು ಬ್ರಾಹ್ಮಣ ಮಹಾಸಭೆಯ ಎಲ್ಲ ಸಮಾಜಪರ ಕಲ್ಯಾಣ ಕಾರ್ಯಕ್ರಮಗಳಿಗೆ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರ್ಣ ಸಹಕಾರಿಯಾಗಲಿದೆ. ಸಭೆಯಲ್ಲಿ ಭಾಗವಹಿಸಿದ ಅನುಭವಿ ಉದ್ಯಮಿಗಳು ತಮ್ಮ ಅನುಭವ ಹಂಚಿಕೊಳ್ಳುವುದರೊಂದಿಗೆ ತಮ್ಮ ರಚನಾತ್ಮಕ ವಿಚಾರಗಳನ್ನು ಮಂಡಿಸಿದ್ದಾರೆ. ನಮ್ಮ ಯುವ ಉದ್ಯಮಿಗಳಿಗೆ ಹೊಸದಾಗಿ ಸ್ಟಾರ್ಟ್ ಆಪ್ ಗಳನ್ನು ಆರಂಭಿಸಲು ಅಗತ್ಯ ತರಬೇತಿ ತಂತ್ರಜ್ಞಾನವೂ, ಸಂಪನ್ಮೂಲ ಕ್ರೋಢೀರಣದ ಬಗ್ಗೆ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಮುಂದಿನ ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯ ಮಟ್ಟದ ವಾಣಿಜ್ಯೋದ್ಯಮಗಳ ಸಮಾವೇಶವನ್ನು ನಡೆಸಲು ತಿರ್ಮಾನಿಸಲಾಗಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ದಿಸೆಯಲ್ಲಿ ಸಂಬಂಧಪಟ್ಟ ಸಮಿತಿಯು ಕಾರ್ಯೋನ್ಮುಖವಾಗಿ ರಾಜ್ಯ ಸಮಾವೇಶವನ್ನು ಯಶಸ್ವಿಯಾಗಿ ನಡೆಸಲೆಂದು ಹಾರೈಸುತ್ತೇನೆ. ಈ ಎಲ್ಲಾ ಬೆಳವಣಿಗೆಗೆ ಕಾರಣರಾದ ಉಪಾಧ್ಯಕ್ಷೆ ಶ್ರೀಮತಿ ರೂಪಾ ಶಾಸ್ತ್ರಿ ಹಾಗೂ ಉಪಾಧ್ಯಕ್ಷ ಶ್ರೀ ಪಿ.ಸಿ.ರಾವ್ ರವರ ತಂಡವನ್ನು ಅಭಿನಂದಿಸುತ್ತೇನೆ.

ಮುಂಬರುವ ವರಮಹಾಲಕ್ಷ್ಮೀ ವ್ರತ, ಉಪಕರ್ಮ ಹಾಗೂ ರಕ್ಷಾ ಬಂಧನ ಹಬ್ಬಗಳಿಗೆ ತಮ್ಮೆಲ್ಲರಿಗೂ ಹಾರ್ದಿಕ ಶುಭಾಷಯಗಳು.

**ಅಶೋಕ ಹಾರನಹಳ್ಳಿ**
ಅಧ್ಯಕ್ಷರು,

## ಸಂಪಾದಕೀಯ

**ಆತ್ಮೀಯ ವಿಪ್ರಬಂಧುಗಳೇ,**

ನಮಸ್ಕಾರ. ಭಾರತೀಯ ಪಂಚಾಂಗದಂತೆ ಪ್ರತಿವರ್ಷ ಆಗಸ್ಟ್ ತಿಂಗಳಲ್ಲಿ ಬರುವ ಶ್ರಾವಣ ಶುಕ್ಲ ಪೂರ್ಣಿಮಾ ಬಹಳ ಮಹತ್ತರವಾದುದು. ಅಂದು ಸಂಸ್ಕೃತ ಪ್ರೇಮಿಗಳು, ಸಂಸ್ಕೃತ ಸಂಘ–ಸಂಸ್ಥೆಗಳ ಪದಾಧಿಕಾರಿಗಳು ಸಂಸ್ಕೃತೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ವಿದ್ಯಾರ್ಥಿಗಳಿಗೆ ಸಂಸ್ಕೃತ ಸಾಹಿತ್ಯ ಸ್ಪರ್ಧೆಗಳು, ನಾಟಕಗಳು, ಸಂಸ್ಕೃತ ಗೀತೆಗಳು, ಸಂಸ್ಕೃತ ಹಿರಿಮೆ ಸಾರುವ ಭಾಷಣಗಳು, ಪುಸ್ತಕಗಳ ಲೋಕಾರ್ಪಣೆ, ಸಂಸ್ಕೃತ ವಿದ್ವಾಂಸರಿಗೆ ಸನ್ಮಾನ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳು ನಮ್ಮ ರಾಜ್ಯಾದ್ಯಂತ, ದೇಶಾದ್ಯಂತ ನಡೆಯುತ್ತವೆ. ಭಾರತದ ಅತ್ಯಂತ ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಅಪಾರಜ್ಞಾನ ರಾಶಿ ಅಡಗಿದ್ದು ನೂರಾರು ವರ್ಷಗಳಿಂದ ಆಸಕ್ತರು ಸಾಹಿತ್ಯದ ಲಾಭ ಪಡೆದಿದ್ದಾರೆ. ಇಂಡೋ–ಯುರೋಪಿಯನ್ ಭಾಷಾ ಕುಟುಂಬಕ್ಕೆ ಸೇರಿದ ಭಾಷೆಗಳಲ್ಲಿ ಸಂಸ್ಕೃತವೂ ಒಂದಾಗಿದ್ದು, ಇತರ ಭಾಷೆಗಳಾದ ಗ್ರೀಕ್, ಲ್ಯಾಟಿನ್, ಗಾಥಿಕ್, ಸ್ಲೆವೋನಿಕ್, ಹಿಲ್ಟಿಕ್, ಸೆಲ್ಟಿಕ್ ಮುಂತಾದವು ದಿನನಿತ್ಯದ ವ್ಯವಹಾರದಿಂದ ಮರೆಯಾಗಿವೆ. ಆದರೆ ಸಂಸ್ಕೃತ ಮಾತ್ರ ಇಂದಿಗೂ ಜೀವಂತವಾಗಿದೆ. ಭಾರತದ ಬಹಳಷ್ಟು ಪ್ರಾದೇಶಿಕ ಭಾಷೆಗಳು ಸಂಸ್ಕೃತದಿಂದ ಪ್ರಭಾವಿತವಾಗಿವೆ. ಸಂಸ್ಕೃತವು ಭಾರತೀಯ ಜನ–ಜೀವನದಲ್ಲಿ ಹಾಸುಹೊಕ್ಕಾಗಿದ್ದು, ಅವರನ್ನು ಸಂಸ್ಕೃತಿವಂತರು, ಸಂಸ್ಕಾರವಂತರನ್ನಾಗಿಸಿದೆ. ಭಾರತದ ಪ್ರತಿಷ್ಠೆ ಅಂದರೆ ಸಂಸ್ಕೃತ ಮತ್ತು ಸಂಸ್ಕೃತಿ ಎಂಬ ಸದುಕ್ತಿ ಪ್ರಸಿದ್ಧವಾದುದು (**ಭಾರತಸ್ಯ ಪ್ರತಿಷ್ಠೇ ದ್ವೇ ಸಂಸ್ಕೃತಂ ಸಂಸ್ಕೃತಿಸ್ತಥಾ** ।). ಇದು ಅತ್ಯಂತ ಪರಿಷ್ಕೃತವಾದ, ವೈಜ್ಞಾನಿಕವಾದ, ಸಂಗೀತಮಯ ಭಾಷೆ, ವೇದಕಾಲದಿಂದ ಇಂದಿನವರೆಗೂ ಬಹುಸಂಖ್ಯಾತ ಜ್ಞಾನ ಶಾಖೆಗಳ ಮೂಲಸ್ರೋತ್ರವನ್ನು ಈ ಭಾಷೆಯಲ್ಲಿ ನಾವು ಕಾಣಬಹುದಾಗಿದೆ. ನಮ್ಮ ದೇಶದಲ್ಲಿ ಬಹಳ ಹಿಂದೆ ಗುರುಕುಲ ವಿದ್ಯಾಭ್ಯಾಸ ಜಾರಿಯಲ್ಲಿದ್ದಾಗ ಶಿಕ್ಷಣವು ಕೇವಲ ಮುಖದ ಮೂಲಕ ನಡೆಯುತ್ತಿತ್ತು. (**ಮುಖಸ್ಥಾ ವಿದ್ಯಾ** ।). ನಾಲ್ಕು ವೇದಗಳು, ಆರು ವೇದಾಂಗಗಳಾದ ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ, ಕಲ್ಪ, ಸ್ಥಾಪತ್ಯ ಅಥವಾ ಕಟ್ಟಡ ನಿರ್ಮಾಣ, ಸಂಗೀತ, ಧನುರ್ವೇದ, ಆನೆ–ಕುದುರೆ ಕುರಿತ ಜ್ಞಾನ ಎಂಬ ಹದಿನಾಲ್ಕು ವಿದ್ಯೆಗಳನ್ನು ವಿದ್ಯಾರ್ಥಿಯು ಅಭ್ಯಾಸ ಮಾಡಬೇಕಾಗಿತ್ತು. ಒಂದು ಜನ್ಮದಲ್ಲಿ ಒಂದು ಶಾಸ್ತ್ರ (**ಏಕಸ್ಮಿನ್ ಜನ್ಮನಿ ಏಕಂ ಶಾಸ್ತ್ರಮ್**।) ಎಂದು ಉಕ್ತಿ ಇದ್ದರೂ, ವಿದ್ಯಾರ್ಥಿಗಳು ಹಲವು ವಿದ್ಯೆ ಅಥವಾ ಶಾಸ್ತ್ರಗಳನ್ನು ಓದುತ್ತಿದ್ದರು. ಹೀಗಾಗಿ ಜೀವನಕ್ಕೆ ಬೇಕಾದ ಲೌಕಿಕ–ಅಧ್ಯಾತ್ಮಿಕ ವಿದ್ಯೆಗಳನ್ನು ಸಂಸ್ಕೃತದಲ್ಲಿ ರಚಿಸಲಾಗಿತ್ತು. ನಲಂದಾ, ವಿಕ್ರಂ, ತಕ್ಷಶಿಲಾ ಮುಂತಾದ ಪ್ರಾಚೀನ ವಿಶ್ವವಿದ್ಯಾಲಯಗಳಲ್ಲಿ ದೇಶ–ವಿದೇಶಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳಿಗೆ ಸಾವಿರ ಅಧ್ಯಾಪಕರು ಸಂಸ್ಕೃತದ ಮೂಲಕ ಶಿಕ್ಷಣ ನೀಡುತ್ತಿದ್ದರು. ನಳಂದಾದಲ್ಲಿ ಲಕ್ಷಾಂತರ ತಾಳೆಪ್ರತಿಗಳಲ್ಲಿ ಅಮೂಲ್ಯ ಜ್ಞಾನ ಭಂಡಾರವಿದ್ದು, ಮುಸ್ಲಿಂ ಆಕ್ರಮಣಕಾರರು ಈ ದೇಶವನ್ನು ಆಕ್ರಮಿಸಿ, ಆ ಗ್ರಂಥ ಭಂಡಾರಕ್ಕೆ ಬೆಂಕಿ ಇಟ್ಟಿದ್ದು. ಆರು ತಿಂಗಳವರೆಗೆ ಉರಿಯುತ್ತಿತ್ತು ಎಂದು ಇತಿಹಾಸ ಹೇಳುತ್ತದೆ. ಚಾರ್ಲ್ಸ್ ವಿಲ್ಕಿನ್ಸ್ ಭಗವದ್ಗೀತೆಯನ್ನು (1785), ಸರ್ ವಿಲಿಯಂ ಜೋನ್ಸ್ ಕಾಳಿದಾಸನ ಶಕುಂತಲಾ ನಾಟಕವನ್ನು (1789) ಆಂಗ್ಲಭಾಷೆಗೆ ಅನುವಾದಿಸಿದರು. ಸೊರೆನ್ ಸೊರೆನ್‌ಸನ್ ಮಹಾಭಾರತದ ನಳ–ದಮಯಂತೀ ಕಥೆಯನ್ನು ಜರ್ಮನ್ ಭಾಷೆಗೆ ಅನುವಾದಿಸಿದ (1791). ಸಾಮಾನ್ಯ ಶಕೆ 550ರಲ್ಲಿ ಬುರ್ಸೋಯಿ ಪಂಚತಂತ್ರವನ್ನು ಪರ್ಷಿಯನ್‌ಗೆ ಅನುವಾದಿಸಿದ. ಚರಕ ಸಂಹಿತೆಯನ್ನು ಅರಾಬಿಕ್ ಭಾಷೆಗೆ ಅನುವಾದಿಸಲಾಯಿತು (800). ಭಗವದ್ಗೀತೆ ಮತ್ತು ಪಂಚತಂತ್ರವು ಪ್ರಪಂಚದ 500 ಭಾಷೆಗಳಿಗೆ ಅನುವಾದ ಹೊಂದಿ ವಿಶ್ವಮನ್ನಣೆ ಪಡೆದಿವೆ. ಪ್ರಾಚೀನವಾದ ಭಾಷೆ, ಪಾಣಿನಿ ಮಹರ್ಷಿಗಳ ವ್ಯಾಕರಣ ಸೂತ್ರ ಗ್ರಂಥವಾದ ಅಷ್ಟಾಧ್ಯಾಯಿಯ ಮೂಲಕ ಕ್ರಮಬದ್ಧವಾಗಿದ್ದು, ಅಮೆರಿಕಾ ಕಂಪ್ಯೂಟರ್ ತಜ್ಞ ರಿಕ್. ಸಿ. ಬ್ರಿಗ್ಸ್ ತನ್ನ ಪ್ರಯೋಗಗಳ ಮೂಲಕ ಪಾಣಿನಿ ಪದ್ಧತಿಯನ್ನು ಆರನೇ ಜನರೇಷನ್ ಜ್ಞಾನಾಧಾರಿತ ವ್ಯವಸ್ಥೆಗೆ ಅಳವಡಿಸಿ, 'ಸಂಸ್ಕೃತ ಬಹಳ ವೈಜ್ಞಾನಿಕ ಭಾಷೆ, ಕಂಪ್ಯೂಟರ್ ಭಾಷೆ' ಎಂದು ಘೋಷಿಸಿದ್ದು ವಿಶೇಷ. ಕಾಶ್ಮೀರದಿಂದ ಕನ್ಯಾಕುಮಾರಿ, ದ್ವಾರಕೆಯಿಂದ ಅಸ್ಸಾಂವರೆಗೆ ಹರಡಿರುವ ಈ ಭಾಷೆ ನಮ್ಮ ದೇಶದ ಸಮಗ್ರತೆ, ಏಕತೆಗೆ ಸಹಾಯ ಮಾಡಿ, ದೇಶವನ್ನು ಒಂದಾಗಿ ಬೆಸದಿದೆ. ಈ ಭಾಷೆಯನ್ನು ರಕ್ಷಿಸಿ, ಪೋಷಿಸಲು 1978ರಲ್ಲಿ ಇಂದಿನ ಸನ್ಮಾನ್ಯ ರಾಜ್ಯಸಭಾ ಸದಸ್ಯರಾದ, ಧರ್ಮಸ್ಥಳದ ಡಾ॥ ವೀರೇಂದ್ರ ಹೆಗಡೆ ಅವರ ಪ್ರಧಾನ ಪೋಷಕತ್ವದಲ್ಲಿ ಅಖಿಲ ಕರ್ನಾಟಕ ಸಂಸ್ಕೃತ ಪರಿಷತ್ ಅಸ್ತಿತ್ವಕ್ಕೆ ಬಂದು, ನೂರು ಶಾಖೆಗಳನ್ನು ಹೊಂದಿ ಪ್ರತಿವರ್ಷ ಸಂಸ್ಕೃತ ಸಂಬಂಧೀ ಕಾರ್ಯಕ್ರಮಗಳನ್ನು, ರಾಜ್ಯ–ರಾಷ್ಟ್ರ ಸಮ್ಮೇಳನಗಳನ್ನು ಆಯೋಜಿಸಿದೆ. ದೇಶದೆಲ್ಲೆಡೆ ಸಂಸ್ಕೃತೋತ್ಸವವು ನಡೆಯುವ ಈ ಸುಸಂದರ್ಭದಲ್ಲಿ ವಿಪ್ರರಾದ ನಾವು ಸಂಸ್ಕೃತವನ್ನು ಬೆಳೆಸಿ, ಪೋಷಿಸಿ, ಮುಂದಿನ ಪೀಳಿಗೆಗೆ ಈ ಚಿರಂತನ, ನಿತ್ಯನೂತನ, ಅಮೂಲ್ಯ ಜ್ಞಾನ ಭಂಡಾರವನ್ನು ರಕ್ಷಿಸೋಣ. ದೇವಭಾಷೆ ಅಥವಾ ಗೀರ್ವಾಣ ಭಾರತಿಗೆ ಜಯವಾಗಲಿ (**ಜೀಯಾತ್ ಗೀರ್ವಾಣ ಭಾರತೀ**।)

ವಂದನೆಗಳೊಂದಿಗೆ,

**ಪ್ರೊ. ಎಂ.ಕೆ. ಶ್ರೀಧರ್**
– ಪ್ರಧಾನ ಸಂಪಾದಕರು


## ವಿಪ್ರನುಡಿಯಲ್ಲಿ ಜಾಹೀರಾತಿಗಾಗಿ ಮನವಿ

**ಪ್ರತಿ ತಿಂಗಳ ಜಾಹೀರಾತಿನ ದರ ಹೀಗಿದೆ.**

| | | | | |
|---|---|---|---|---|
| 1. | ಹೊರ ರಕ್ಷಾ ಪುಟ (ವರ್ಣ) | .. | ರೂ. | 30,000/= |
| 2. | ಒಳ ರಕ್ಷಾ ಪುಟ (ವರ್ಣ) | .. | ರೂ. | 20,000/= |
| 3. | ಒಳ ಪುಟ (ವರ್ಣ) | .. | ರೂ. | 15,000/= |
| 4. | ಒಳ ಪುಟ (ಕಪ್ಪು ಬಿಳುಪು) | .. | ರೂ. | 10,000/= |
| 5. | ಒಳ ಅರ್ಧ ಪುಟ (ಕಪ್ಪು ಬಿಳುಪು) | .. | ರೂ. | 5,000/= |
| 6. | ಒಳ ಕಾಲು ಪುಟ (ಕಪ್ಪು ಬಿಳುಪು) | .. | ರೂ. | 2,500/= |
| 7. | ಎರಡು ಸಾಲಿನ ಪ್ರಕಟಣೆ | .. | ರೂ. | 1,000/= |
| 8. | ಒಂದು ಪುಟ ಪ್ರಾಯೋಜಕತ್ವ | .. | ರೂ. | 2,000/= |

# ಯಶಸ್ವಿಯಾಗಿ ನೆರವೇರಿದ ವಾಣಿಜ್ಯೋದ್ಯಮಿಗಳ ಮಂತ್ರಾಲೋಚನಾ ಸಭೆ



ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿರವರ ಮಾರ್ಗದರ್ಶನದಲ್ಲಿ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಮಟ್ಟದ ವಿಭಾಗದಿಂದ ರಾಜ್ಯ ಉಪಾಧ್ಯಕ್ಷರುಗಳಾದ ಶ್ರೀ ಪಿ.ಸಿ. ರಾವ್ ಮತ್ತು ಶ್ರೀಮತಿ ರೂಪಾ ಶಾಸ್ತ್ರಿರವರ ಉಸ್ತುವಾರಿಯಲ್ಲಿ "ವಾಣಿಜ್ಯೋದ್ಯಮಿಗಳ ಮಂತ್ರಾಲೋಚನಾ ಸಭೆಯನ್ನು" ದಿನಾಂಕ 26.07.2023ರ ಬುಧವಾರ ಸಂಜೆ ಎಫ್.ಕೆ.ಸಿ.ಸಿ.ಐ. ಭವನದ ಟ್ಯಾಲಿ ಹಾಲ್‌ನಲ್ಲಿ ಏರ್ಪಡಿಸಲಾಗಿತ್ತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಹವ್ಯಕ ಮಹಾಸಭಾದ ಅಧ್ಯಕ್ಷರು, ವಿಶ್ವವಿಖ್ಯಾತ ಆಯುರ್ವೇದ ವೈದ್ಯರಾದ ಡಾ. ಗಿರಿಧರ್ ಕಜೆ, ಹ್ಯಾಂಗ್ಯೋ ಐಸ್‌ಕ್ರೀಮ್ ಸಂಸ್ಥೆಯ ಸ್ಥಾಪಕರಾದ ಶ್ರೀ ಪ್ರದೀಪ್ ಪೈ, ಬೆಂಗಳೂರು ನಗರ ಮಾಜಿ ಪೊಲೀಸ್ ಕಮಿಷನರ್ ಶ್ರೀ ಭಾಸ್ಕರ್ ರಾವ್ ವೇದಿಕೆ ಮೇಲೆ ಉಪಸ್ಥಿತರಿದ್ದರು. ಈ ವಾಣಿಜ್ಯೋದ್ಯಮಿಗಳ ಸಭೆಯಲ್ಲಿ ವಾಣಿಜ್ಯ ವಿಭಾಗಗಳಲ್ಲಿ ದೊಡ್ಡ ಹೆಸರು ಮತ್ತು ಯಶಸ್ಸನ್ನು ಸಾಧಿಸಿರುವ 120ಕ್ಕೂ ಹೆಚ್ಚಿನ ವಿಪ್ರ ವಾಣಿಜ್ಯೋದ್ಯಮಿಗಳು ಭಾಗವಹಿಸಿದ್ದರು.

ವೇದಘೋಷದೊಂದಿಗೆ ಸಭೆಯು ಪ್ರಾರಂಭವಾಯಿತು. ಸಭೆಗೆ ಆಗಮಿಸಿದ್ದ ಎಲ್ಲಾ ವಾಣಿಜ್ಯೋದ್ಯಮಿಗಳಿಗೆ ಬೃಹತ್ ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರು ಮತ್ತು ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ಪಿ.ಸಿ. ರಾಯರು ಸ್ವಾಗತವನ್ನು ಕೋರಿದರು.

ಮಹಾಸಭಾ ರಾಜ್ಯ ಉಪಾಧ್ಯಕ್ಷರಾದ ಶ್ರೀಮತಿ ರೂಪಾ ಶಾಸ್ತ್ರಿ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಈ ವಾಣಿಜ್ಯೋದ್ಯಮಿಗಳ ಸಭೆಯ ಉದ್ದೇಶ ಮತ್ತು ವಾಣಿಜ್ಯೋದ್ಯಮಿಗಳಿಂದ ಬಯಸುತ್ತಿರುವ ಸಹಕಾರ, ಮಾರ್ಗದರ್ಶನದ ಕುರಿತಾದ ಮಾಹಿತಿಯನ್ನು ಹಂಚಿಕೊಂಡರು. ಮುಂದಿನ ದಿನಗಳಲ್ಲಿ ಇಡೀ ರಾಜ್ಯದಲ್ಲಿ ಸಂಚಾರ ಮಾಡಿ ಉದ್ಯೋಗ ಮತ್ತು ಉದ್ದಿಮೆಯನ್ನು ಪ್ರಾರಂಭಿಸಲು ಪ್ರೋತ್ಸಾಹ, ಸಲಹೆ–ಸಹಕಾರ, ಬ್ಯಾಂಕ್ ಮತ್ತು ವಾಣಿಜ್ಯ ಸಂಸ್ಥೆಯೊಂದಿಗೆ ವ್ಯಾವಹಾರಿಕ ಹಣಕಾಸು ನೆರವು ಮತ್ತು ಅರಿವು ಮೂಡಿಸುವ ಕಾರ್ಯಾಗಾರಗಳನ್ನು ಮತ್ತು ಸಭೆಗಳನ್ನು ಏರ್ಪಡಿಸುವ ಮೂಲಕ ವಾಣಿಜ್ಯೋದ್ಯಮ ವಿಭಾಗ ಸಕ್ರಿಯವಾಗಿ ಕಾರ್ಯ ನಿರ್ವಹಿಸುವುದು ಎಂದು ತಿಳಿಸಿದರು.

ಸಭೆಯ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, 1972 ರಿಂದ ಸಂಸ್ಥೆ ಬೆಳೆದು ಬಂದ ಹಾದಿಯನ್ನು ಉಲ್ಲೇಖಿಸಿದರು. ನಮ್ಮ ಸಮುದಾಯದ ಜ್ವಲಂತ ಸಮಸ್ಯೆಗಳ ಬಗ್ಗೆ ಮನಮುಟ್ಟುವಂತೆ ತಿಳಿಸಿದರು. ಸಮುದಾಯ ಒಂದಾಗಬೇಕಿರುವ ಅನಿವಾರ್ಯತೆಯನ್ನು ವಿವರಿಸಿ, ವಾಣಿಜ್ಯೋದ್ಯಮಗಳ ಸಹಾಯವನ್ನು ಈ ನಿಟ್ಟಿನಲ್ಲಿ ಅಪೇಕ್ಷಿಸಿದರು. ಬ್ರಾಹ್ಮಣ ಸಮಾಜಕ್ಕೆ ಸರ್ಕಾರದಿಂದ ಯಾವುದೇ ಸವಲತ್ತು ಸಿಗುತ್ತಿಲ್ಲ. ಜೊತೆಗೆ ಸಂವಿಧಾನದಿಂದಲೂ ಸಿಗುವ ಸೌಲಭ್ಯಗಳು ದೊರೆಯುತ್ತಿಲ್ಲ. ಯಾವ ಪಕ್ಷಗಳ ಸರ್ಕಾರ ಬಂದರೂ ಹುದ್ದೆಗಳ ನೇಮಕಾತಿಯಲ್ಲಿ ಮೀಸಲಾತಿ ದೊರೆಯುತ್ತಿಲ್ಲ. ನಮ್ಮ ಸಮುದಾಯದಲ್ಲಿ ಆರ್ಥಿಕವಾಗಿ ಹಿಂದುಳಿದವರು ಅಧಿಕವಾಗಿದ್ದಾರೆ. ಮಹಾಸಭಾ ನೀಡುವ ಮಾಸಿಕ ಪಿಂಚಣಿಗೆ 6000 ಅರ್ಜಿಗಳು ಬಂದಿವೆ. ವಿಪ್ರ ವಾಣಿಜ್ಯೋದ್ಯಮಿಗಳಿಂದ ಸಮಾಜ ದೊಡ್ಡ ನಿರೀಕ್ಷೆಯನ್ನು ಕಾಣುತ್ತಿದೆ. ಆದ್ದರಿಂದ ವಿಪ್ರ ವಾಣಿಜ್ಯೋದ್ಯಮಿಗಳು ಸಮಾಜಕ್ಕೆ ಹೆಚ್ಚಿನ ರೀತಿಯಲ್ಲಿ ಸ್ಪಂದಿಸಬೇಕೆಂದು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅತಿಥಿಗಳಾದ ಶ್ರೀ ಗಿರಿಧರ್ ಕಜೆಯವರು ಕರ್ನಾಟಕದಲ್ಲಿ ಬ್ಯಾಂಕುಗಳ ಉಗಮ, ಅನೇಕ ಉದ್ಯಮಗಳು ಮಂಗಳೂರಿನಲ್ಲಿ ಚಾಲನೆಗೊಂಡು ದೇಶ ವಿದೇಶಕ್ಕೆ ವಿಸ್ತರಿಸಿದ ರೀತಿಯನ್ನು ಬಣ್ಣಿಸಿದರು. ಸೆಲೆಬ್ರೇಟಿಂಗ್ ದಿ ಸೆಲೆಬ್ರಿಟಿಸ್ ಎಂಬ ಈ ಕಾರ್ಯಕ್ರಮದ ಅಡಿಯಲ್ಲಿ ಸಾಧನೆ ಮಾಡಿದ ಉದ್ಯಮದಾರರನ್ನು ಗುರುತಿಸಿ ಅವರನ್ನು ಸಮುದಾಯಕ್ಕೆ ಪರಿಚಯ ಮಾಡಿಕೊಟ್ಟಾಗ, ಇತರರು ಇವರಿಂದ ಆಕರ್ಷಿತರಾಗಿ ವ್ಯಾಪಾರದಲ್ಲಿ ತೊಡಗಿಸಿಕೊಳ್ಳಲು

ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಬರೀ ಮಾತಿನಿಂದ ಯಾರೂ ಆಕರ್ಷಿತರಾಗಿರುವುದಿಲ್ಲ, ನಮ್ಮ ಕಾರ್ಯದಿಂದ ಜನರನ್ನು ಆಕರ್ಷಿಸಬೇಕು ಎಂದು ತಿಳಿಸಿದರು.

ಶ್ರೀಯುತ ಭಾಸ್ಕರ್ ರಾವ್ ಅವರು ಬ್ರಾಹ್ಮಣ ಎಂಬ ಹೆಸರೇ ಅತ್ಯಂತ ಗೌರವಕ್ಕೆ ಪಾತ್ರವಾದದ್ದು, ಈ ಹೆಸರಿನ ಬಲದಿಂದ ನಾವು ಮುಂದೆ ನುಗ್ಗುವ ಚಾಣಾಕ್ಷತನ ನಮ್ಮ ಸಮುದಾಯದಿಂದ ಆಗಬೇಕು ಎಂದು ತಿಳಿಸಿದರು.

1200ಕ್ಕೂ ಹೆಚ್ಚಿನ ಉದ್ಯೋಗಿಗಳನ್ನು ಹೊಂದಿರುವ, 800 ಕೋಟಿಗೂ ಮಿಗಿಲಾದ ವ್ಯವಹಾರವನ್ನು ನಡೆಸುತ್ತಿರುವ ಹ್ಯಾಂಗ್ಯೋ ಐಸ್‌ಕ್ರೀಮ್‌ನ ಸಂಸ್ಥಾಪಕರಾದ ಶ್ರೀ ಪ್ರದೀಪ್ ಪೈರವರು ಮಾತನಾಡುತ್ತ, ಬ್ರಾಹ್ಮಣರಲ್ಲಿ ನೂರಾರು ಉಪ ಪಂಗಡಗಳಿವೆ, ಆ ಉಪ ಪಂಗಡಗಳಿಗೆ ಅವರದೇ ಆದ ಇತಿಹಾಸ, ಆಚರಣೆ, ಮಠ–ಗುರು ಪರಂಪರೆಯಿದೆ. ಈಗಿನ ಕಾಲಮಾನಕ್ಕೆ ತಕ್ಕಂತೆ ಕೆಲವು ವಿಷಯಗಳಲ್ಲಿ ನಾವೆಲ್ಲರೂ ಬ್ರಾಹ್ಮಣತ್ವದಡಿಯಲ್ಲಿ ಒಂದಾಗಬೇಕಾಗಿದೆ ಮತ್ತು ಉಳಿಸಬೇಕಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಯಶಸ್ವಿ ಉದ್ಯಮಿ ವಿಶಾಲ್ ಕನ್‌ಸ್ಟ್ರಕ್ಷನ್ ಸಂಸ್ಥೆಯ ಶ್ರೀ ವಿ.ಜಿ ಕಿರಣ್ ಕುಮಾರ್ ಮಾತನಾಡಿ, ಸಮುದಾಯದ ಕೆಲಸಗಳಿಗೆ ತಮ್ಮ ಸಂಸ್ಥೆಯ ವತಿಯಿಂದ ನೆರವು ನೀಡಲು ಸದಾ ಸಿದ್ಧ, ವ್ಯಾಪಾರಸ್ಥರನ್ನು ಒಂದೆಡೆ ಸೇರಿಸಿ, ಕಾರ್ಯಾಗಾರ ಮತ್ತು ಸಭೆಗಳನ್ನು ನಡೆಸಲು ತಮ್ಮದೇ ಹೋಟೆಲ್‌ನಲ್ಲಿ ಅವಕಾಶ ಕಲ್ಪಿಸಿಕೊಡಲು ತಾವು ಸಿದ್ಧ ಎಂದು ತಿಳಿಸಿದರು. ವಿದೇಶಗಳಿಂದ ಸಮುದಾಯದ ಏಳಿಗೆಗಾಗಿ ಧನ ಸಹಾಯ ತರುವ ನಿಟ್ಟಿನಲ್ಲಿ ಕೆಲಸವಾಗಬೇಕು ಎಂದು ತಿಳಿಸಿದರು.

ಯುವ ಉದ್ಯಮಿ ಶ್ರೀ ಕೃಷ್ಣನ್ ಅಯ್ಯರ್, **'ಅಯ್ಯರ್ ಇಡ್ಲಿ'** ಎಂಬ ಉದ್ಯೋಗ ಆರಂಭಿಸಿ ತಾವು ಪಡೆದ ಅನುಭವಗಳನ್ನು ತಿಳಿಸುತ್ತಾ ತಂತ್ರಜ್ಞಾನ ಮತ್ತು ಕೃತಕ ಬುದ್ಧಿಮತ್ತೆ ಉಪಯೋಗಿಸಿಕೊಂಡು ಯುವಕರು ವ್ಯಾಪಾರವನ್ನು ಮಾಡಲು ಧೈರ್ಯವಹಿಸಿ ಮುಂದೆ ಬರಬೇಕು ಎಂದು ತಿಳಿಸಿದರು.

ಈ ವಾಣಿಜ್ಯೋದ್ಯಮಿಗಳ ಮಂತ್ರಾಲೋಚನಾ ಸಭೆಗೆ ಪ್ರಮುಖರಾಗಿ ಕಾಮತ್ ಹೋಟೆಲ್ ಗ್ರೂಪಿನ ಮಾಲೀಕರಾದ ಶ್ರೀ ವೀರೇಂದ್ರ ಕಾಮತ್, ಕರ್ನಾಟಕ ಟ್ಯಾಕ್ಸಿ ಮಾಲೀಕರ ಸಂಘದ ಅಧ್ಯಕ್ಷರಾದ ಶ್ರೀ ರಾಧಾಕೃಷ್ಣ ಹೊಳ್ಳ, ಕರ್ನಾಟಕ ರಾಜ್ಯ ವಿಪ್ರ ಚೇಂಬರ್ ಆಫ್ ಕಾಮರ್ಸ್ ನ ಅಧ್ಯಕ್ಷರಾದ ಶ್ರೀ ವಿಶ್ವನಾಥ ದೀಕ್ಷಿತ್, ಭಗವಾನ್, ಬಡಗನಾಡು ಸಂಘದ ಅಧ್ಯಕ್ಷರಾದ ಶ್ರೀ ಚಿದಾನಂದ, ದಕ್ಷಿಣ ಕನ್ನಡ ಬ್ರಾಹ್ಮಣ ಸಂಘಗಳ ಪದಾಧಿಕಾರಿಗಳು, ಆನಂದ ಬಳಗದ ಶ್ರೀ ಗುರುಮೂರ್ತಿ, ಶ್ರೀ ಕೃಷ್ಣಪ್ರಸಾದ್, ಎಫ್.ಕೆ.ಸಿ.ಸಿ.ಐ, ಕಾಸಿಯಾ, ಲಘು ಉದ್ಯೋಗ ಭಾರತಿ, ಕೆಐಎಡಿಬಿ, ಕರ್ನಾಟಕ ಬ್ಯಾಂಕ್, ವಿಪ್ರ ಸಮಾನ ಮನಸ್ಕರ ತಂಡದ ಅಬ್ಬಿಗೆರೆ ರಾಮು, ವಿಪ್ರ ಬಿಸಿನೆಸ್ ಫಾರ್ಮ್‌ನ ಶ್ರೀ ಜಯತೀರ್ಥ, ಬಿ ಟು ಬಿ ಮತ್ತು ವಿದ್ಯುತ್‌ನ ಪದಾಧಿಕಾರಿಗಳು, ಬೆಂಗಳೂರಿನ ಹಲವಾರು ವಾಣಿಜ್ಯೋದ್ಯಮ ಸಂಘದ ಪದಾಧಿಕಾರಿಗಳು ಆಗಮಿಸಿ ತಮ್ಮ ಕ್ಷೇತ್ರದ ಬಗ್ಗೆ ಮಾಹಿತಿ ಮತ್ತು ದೊರಕುವ ವಿಪುಲ ಅವಕಾಶಗಳ ಬಗ್ಗೆ ಮಾಹಿತಿಯನ್ನು ನೀಡಿ, ಮುಂದಿನ ದಿನಗಳಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಮಹಾಸಭಾ ವಾಣಿಜ್ಯೋದ್ಯಮ ವಿಭಾಗಕ್ಕೆ ತಮ್ಮ ಸಹಕಾರವನ್ನು ನೀಡುವುದಾಗಿ ತಿಳಿಸಿದರು.

ಮಹಾಸಭಾದ ಉಪಾಧ್ಯಕ್ಷರುಗಳು, ಸಂಘಟನಾ ಕಾರ್ಯದರ್ಶಿಗಳು, ಜಂಟಿ ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಭಾಗವಹಿಸಿದ್ದರು. ಈ ಸಭೆಯ ಸಮನ್ವಯವನ್ನು ಶ್ರೀ ನಟರಾಜ ಉಪಾಧ್ಯರು ನೆರವೇರಿಸಿ ಕೊಟ್ಟರು.

ವಂದನಾರ್ಪಣೆಯನ್ನು ಸಂಘಟನಾ ಕಾರ್ಯದರ್ಶಿಗಳಾದ ಶ್ರೀ ರವಿಕುಮಾರ್‌ರವರು ನೆರವೇರಿಸಿಕೊಟ್ಟರು. ಶಾಂತಿ ಮಂತ್ರದೊಂದಿಗೆ ಸಭೆಯು ಮುಕ್ತಾಯವಾಯಿತು.



# "ಒಗ್ಗಟ್ಟಿನಿಂದ ಮಾತ್ರ ಬ್ರಾಹ್ಮಣರ ಉಳಿವು"

## – ಅಶೋಕ್ ಹಾರನಹಳ್ಳಿ

### ವಿಪ್ರ ವಾಣಿಜ್ಯೋಧ್ಯಮಿಗಳು ಮಂತ್ರಾಲೋಚನಾ ಸಭೆಯಲ್ಲಿ ಅಧ್ಯಕ್ಷರ ಭಾಷಣದ ಸಾರಂಶ –



ಮುಂದಿನ ದಿನಗಳಲ್ಲಿ ಬ್ರಾಹ್ಮಣರು ಎದುರಿಸುತ್ತಿರುವ ಸಮಸ್ಯೆಗಳು ಪ್ರತಿದಿನ ಬೇರೆ ಬೇರೆ ರೀತಿಯಾಗಿ ಬದಲಾಗುತ್ತಾ ಬರುತ್ತಿದೆ. ನಾನು ಅಧ್ಯಕ್ಷನಾಗಿ ಅಧಿಕಾರ ವಹಿಸಿದ ಮೇಲೆ ನಮ್ಮ ವಿಪ್ರರು ತಾವು ತರುತ್ತಿರುವ ಸಮಸ್ಯೆಗಳನ್ನು ನೋಡಿದಾಗ, ಅಷ್ಟು ಕಷ್ಟಗಳು ಇವೆಯೇ, ಇದನ್ನು ಯಾರ ಬಳಿ ಕೇಳುವುದು ಹಾಗೂ ಯಾವುದಾದರೂ ಸಂಘಟನೆಗಳಿಂದ ಪರಿಹಾರ ಕಾಣುವುದು ಸಾಧ್ಯವೇ ಎನ್ನಿಸುತ್ತದೆ.

ನಮ್ಮ ಬ್ರಾಹ್ಮಣ ಸಮಾಜ ಜಾತಿ ಭೇದವಿಲ್ಲದೆ ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಾ ಬಂದಿದೆ. ಆದರೆ ಸಮಾಜದಲ್ಲಿ ನಮ್ಮನ್ನು ಗುರುತಿಸಿರುವ ರೀತಿಯೇ ಬೇರೆಯದಾಗಿದೆ. ನಾವೇ ಸಮಾಜದ ಎಲ್ಲ ಸಮಸ್ಯೆಗಳಿಗೆ ಕಾರಣ ಎನ್ನುವಂತೆ ನಮ್ಮನ್ನು ಕಾಣಲಾಗುತ್ತಿದೆ.

ಬಹಳಷ್ಟು ಜನ ನಮ್ಮ ಬ್ರಾಹ್ಮಣರ ಸಂಘಟನೆಯಲ್ಲಿ ಗುರುತಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ. ಕೆಲವರು ನಾವು ಬ್ರಾಹ್ಮಣರು ಎಂದು ಹೇಳಿಕೊಳ್ಳಲು ಒದ್ದಾಡುತ್ತಿದ್ದಾರೆ. ಹಾಗಾಗಿ ನಾವೆಲ್ಲರೂ ಒಗ್ಗೂಡದಿದ್ದರೆ ಸರ್ಕಾರದಿಂದ ಯಾವುದೇ ಸವಲತ್ತು ಪಡೆಯುವುದಾಗಲೀ ಕೇಳಲೂ ಕೂಡ ಜನಬಲವಿರುವುದಿಲ್ಲ.

ಹಿಂದಿನ ಸರ್ಕಾರವಿದ್ದಾಗ ಹಲವಾರು ಬಾರಿ ಅನುಮೋದನೆಯಾದ ಅನುದಾನದ ಹಣದ ಬಿಡುಗಡೆಗಾಗಿ ಹೋರಾಡಿದರೂ ಕೂಡ ಅ ಹಣ ನಮಗೆ ದೊರೆಯಲಿಲ್ಲ. ಇನ್ನು ಈಗ ಬಂದಿರುವ ಸರ್ಕಾರ ಅಲ್ಪಸಂಖ್ಯಾತರನ್ನು ಓಲೈಸುವುದೇ ಆಗಿದೆ. ಬ್ರಾಹ್ಮಣರಿಂದ ಏನು ನಮಗೆ ಪ್ರಯೋಜನ ಎಂಬ ಭ್ರಮೆಯಲ್ಲಿದ್ದಾರೆ. ಇದೇ ಸರ್ಕಾರ ಮುಸ್ಲಿಂರಿಗೆ ಹಾಗೂ ಕ್ರಿಶ್ಚಿಯನ್ನರಿಗೆ ಸುಮಾರು 100 ಕೋಟಿ ಅನುದಾನಗಳನ್ನು ನೀಡಲು ಮುಂದಾಗಿದೆ. ಹಾಗೆಯೇ ಸರ್ಕಾರಿ ಹುದ್ದೆಗಳಿಗೆ ಉದಾಃ ಐ.ಎ.ಎಸ್. ಮತ್ತು ಐ.ಪಿ.ಎಸ್ ಹಾಗೂ ಇನ್ನೂ ಉತ್ತಮವಾದ ನ್ಯಾಯಾಂಗ ವಿಭಾಗಗಳಲ್ಲಿಯೂ ಬ್ರಾಹ್ಮಣರು ಬರುವುದು ಕಡಿಮೆಯಾಗುತ್ತಿದೆ. ಏಕೆಂದರೆ ನ್ಯಾಯ ದೊರಕಿಸಲು ಮತ್ತು ನ್ಯಾಯಾಲಯದ ತೀರ್ಮಾನ ನೀಡಲು ಆಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರೊಂದಿಗೆ ಬೇಸತ್ತ ವಿದ್ಯಾವಂತ ಯುವಕರು ದೇಶವನ್ನು ತೊರೆದು ಹೊರದೇಶಗಳಿಗೆ ಕೆಲಸಗಳಿಗಾಗಿ ಹೋಗುತ್ತಿದ್ದಾರೆ. ಅವರ ತಂದೆ ತಾಯಿಯರ ಗೋಳು ನೋಡಲು ಸಾಧ್ಯವಿಲ್ಲ. ಅಂಥವರು ನಮ್ಮಲ್ಲಿ ಬಂದು ಮಕ್ಕಳು ನಮ್ಮನ್ನು ತೊರೆದು ಹೋಗುತ್ತಿದ್ದಾರೆ, ನಮ್ಮ ಜೀವನ ಅಭದ್ರವಾಗುತ್ತಿದೆ ಎನ್ನುತ್ತಿದ್ದಾರೆ. ನಮ್ಮಲ್ಲಿ ಮಾಸಿಕ 500/= ರೂ.ಗಳ ಮಾಸಾಶನ ಕೊಡಲು ಅರ್ಜಿ ಆಹ್ವಾನಿಸಿದಾಗ ನಂಬಲು ಅಸಾಧ್ಯವಂತೆ ಸುಮಾರು 10000 ಅರ್ಜಿಗಳು ಬಂದಿದೆ. ಕೆಲಸವಿಲ್ಲದೆ ಅಡಿಗೆ ಕೆಲಸ ಮಾಡಲು ಹೋಗುತ್ತಿದ್ದೇವೆ, ಮನೆಗೆಲಸ ಮಾಡುತ್ತಿದ್ದೇವೆ ಎನ್ನುತ್ತಿದ್ದಾರೆ. ಏನಾದರೂ ಸಹಾಯ ನೀಡಿ ಎನ್ನುತ್ತಿದ್ದಾರೆ., ಅಂದರೆ ಬ್ರಾಹ್ಮಣರೆಲ್ಲರೂ ಕ್ಷೇಮವಾಗಿದ್ದಾರೆ ಎಂದರೆ ಅದು ನಿಜವಲ್ಲ. ಕಷ್ಟಪಡುತ್ತಿರುವ ಹಲವಾರು ಜನ ನಮ್ಮಲ್ಲಿದ್ದಾರೆ.

ಜೊತೆಗೆ ಬ್ರಾಹ್ಮಣ ಹುಡುಗರಿಗೆ ಮದುವೆಗೆ ಹೆಣ್ಣು ಸಿಗುತ್ತಿಲ್ಲ. ಬ್ರಾಹ್ಮಣ ಸಂಪ್ರದಾಯ ಕುಸಿಯುತ್ತಿದೆ. ಹೀಗೆ ಆದರೆ ನಮ್ಮ ಸಮುದಾಯದ ಗತಿಯೇನು?

ನಮ್ಮ ಬಣಗಳಲ್ಲಿ ಪರಸ್ಪರ ನಿಂದನೆ. ದ್ವೈತ, ಅದ್ವೈತ, ವಿಶಿಷ್ಠಾದ್ವೈತ ಅಂತ ಹೊಡೆದಾಡುವುದು ಬಿಡಬೇಕು. ಬೇರೆಯವರು ನಮ್ಮನ್ನು ಟೀಕಿಸುವಾಗ ಕೇವಲ ಬ್ರಾಹ್ಮಣ್ಯ, ಬ್ರಾಹ್ಮಣ ಎಂಬುದಾಗಿ ಗುರುತಿಸಿ ಟೀಕಿಸುತ್ತಿದ್ದಾರೆ. ಹೀಗಾಗಿ ನಾವು ಹಲವಾರು ಯತಿವರೇಣ್ಯರಿಗೆ ಕೇಳಿದ್ದೇವೆ ನಾವೆಲ್ಲ ಐಕ್ಯತೆಯಿಂದಿರಲು ಸುಲಭವಾದ ಮಾರ್ಗವನ್ನು ತಿಳಿಸಿ.

ಬ್ರಾಹ್ಮಣರು ಸ್ಥಾಪಿಸಿದ, ಬ್ರಾಹ್ಮಣರೇ ಹೆಚ್ಚಿರುವ ಬ್ಯಾಂಕ್ ಪರಿಸ್ಥಿತಿಯನ್ನು ನೋಡಿದರೆ ಬೇಸರವಾಗುತ್ತಿದೆ. ಬ್ರಾಹ್ಮಣರನ್ನು ಬಿಟ್ಟು. ಹೀಗೆ ಎಲ್ಲಾ ಕಡೆಯೂ ಬ್ರಾಹ್ಮಣರ ಸ್ಥಿತಿ ಶೋಚನೀಯವಾಗಿದೆ. ಹೀಗಿರುವಾಗ ನಾವು ಇನ್ನು ಮುಂದಾದರೂ ನಮ್ಮವರಿಗೆ ಸಹಾಯಹಸ್ತ ನೀಡದಿದ್ದರೆ ನಮ್ಮ ಸಮಾಜ ಕೆಡುತ್ತದೆ.

ಈಗಾಗಲೇ ಬ್ಯುಸಿನೆಸ್ ಟು ಬ್ಯುಸಿನೆಸ್, ಬಿ.ಎಫ್.ಬಿ. "ಬ್ರಾಹ್ಮಿನ್ಸ್ ಟು ಬ್ಯುಸಿನೆಸ್" ಜಯತೀರ್ಥರವರು ಚಿಂತನೆ ಮಾಡಿದ್ದಾರೆ. ಬ್ರಾಹ್ಮಣರಿಗಾಗಿ ಆರೋಗ್ಯ ಸಹಾಯವಾಣಿಗೆ ಡಾ. ಮುರಳೀಧರ್‌ರವರು ಕಾರ್ಯಪ್ರವೃತ್ತರಾಗಿದ್ದಾರೆ. ರಿಯಾಯಿತಿ ದರದಲ್ಲಿ ಚಿಕಿತ್ಸೆ ಮತ್ತು ಮಾರ್ಗದರ್ಶನ ನೀಡುವುದು. ಜುಪಿಟರ್ ಹಾಸ್ಪಿಟಲ್, ಮಣಿಪಾಲ್ ಅಪೋಲೊ ಪ್ರಸಿದ್ಧ ಆಸ್ಪತ್ರೆಗಳು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ.

ಕೈಗಾರಿಕೋದ್ಯಮಿಗಳು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಹಾಯಹಸ್ತ ನೀಡುವುದು ಅವಶ್ಯಕವಾಗಿದೆ.

ಆದ್ದರಿಂದ ನಾವೆಲ್ಲರೂ ಸಂಘಟನಾತ್ಮಕವಾಗಿ ಹೋರಾಟ ಮಾಡಬೇಕಾಗಿದೆ. ಅದಕ್ಕೆ ನಮ್ಮ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭ ಸದೃಢವಾಗಬೇಕಾಗಿದೆ. ನಾವೆಲ್ಲರೂ ಸೇರಿ ಒಗ್ಗಟಿನಿಂದ ಹೋರಾಟ ಮಾಡೋಣ. ಮುಂದಿನ ದಿನಗಳಲ್ಲಿ ಎನ್.ಆರ್.ಐ. ಗಳನ್ನು ಸಂಪರ್ಕಿಸಿ ಸಹಾಯಹಸ್ತ ಪಡೆದು ಎಂಬುದಾಗಿ ತಿಳಿಸಿದರು. ಸಂಘಟನೆಯನ್ನು ಬ್ರಾಹ್ಮಣ ಸಮಾಜವನ್ನು ಬಲಿಷ್ಠವಾಗಿಸೋಣ ಎಂದರು.

## ತುರುವೇಕೆರೆಯಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ
# “ಇಂದು ಪ್ರತಿಭೆಯೇ ಬ್ರಾಹ್ಮಣರ ಆಸ್ತಿ”
### – ಮಹಾಸಭಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ




ಪ್ರತಿಭೆಯೆ ಬ್ರಾಹ್ಮಣರಿಗೆ ಆಸ್ತಿ. ತಮ್ಮ ಪ್ರತಿಭೆಯಿಂದಲೇ ತಮ್ಮ ಜೀವನವನ್ನು ರೂಪಿಸಿಕೊಳ್ಳುವುದು ಅನಿವಾರ್ಯವಾಗಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿಯವರು ಹೇಳಿದರು.

ಪಟ್ಟಣದ ಗಾಯತ್ರಿ ಭವನದಲ್ಲಿ ತಾಲ್ಲೂಕು ವಿಪ್ರ ಸಂಘ ಹಾಗೂ ತಲ್ಲೂಕು ಸರ್ಕಾರಿ ಬ್ರಾಹ್ಮಣ ನೌಕರರ ಸಂಘದ ಆಶ್ರಯದಲ್ಲಿ ನಡೆದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ನೀಡಿದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದರು. ಸಾವಿರಾರು ವರ್ಷಗಳ ಹಿಂದೆ ಆಗಿರುವ ಘಟನೆಯನ್ನು ತಪ್ಪಾಗಿ ಕಂಡು ಈಗ ಆ ಘಟನೆಗೆ ಈಗಿನ ಸಮುದಾಯದವರು ಕಾರಣ ಎಂದು ಭಾವಿಸಿ ಬ್ರಾಹ್ಮಣ ಸಮುದಾಯವನ್ನು ವಿರೋಧಿಸುವ ಪ್ರವೃತ್ತಿ ಹೆಚ್ಚುತ್ತಿದೆ. ಇದು ಸರಿಯಲ್ಲ. ಸರಿಯಾಗಿ ಇತಿಹಾಸ ಓದದೇ ದುರುದ್ದೇಶಪೂರ್ವಕ ಚಿಂತನೆಗಳಿಂದ ದೂರುವುದು ಸರಿಯಲ್ಲ. ಮುಂಬರುವ ದಿನಗಳಲ್ಲಿ ಬ್ರಾಹ್ಮಣ ಸಮುದಾಯದವರನ್ನು ವಿನಾಕಾರಣ ಅಪಮಾನಿಸಿದಲ್ಲಿ ಟಿ.ವಿ. ಚಲನಚಿತ್ರ ಸೇರಿದಂತೆ ಇತರೆ ಯಾವುದೇ ಮಾಧ್ಯಮಗಳಲ್ಲಿ ಬ್ರಾಹ್ಮಣರನ್ನು ಅಪಮಾನಿಸಿದ್ದನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದಿಂದ ರಚಿತವಾಗಿರುವ ಕಾನೂನು ವಿಭಾಗ ಆ ಘಟನೆಗಳಿಗೆ ಕಾನೂನಾತ್ಮಕವಾಗಿ ತಕ್ಕ ಉತ್ತರ ಕೊಡಲಿದೆ ಎಂದು ಹೇಳಿದರು.

**ಬ್ರಾಹ್ಮಣರು ಒಂದಾಗಿ :** ಬ್ರಾಹ್ಮಣ ಸಮುದಾಯದಲ್ಲೂ ಹಲವಾರು ಪಂಗಡಗಳು ಇವೆ. ಅವೆಲ್ಲವನ್ನೂ ಒಂದೇ ವೇದಿಕೆಗೆ ಕರೆತರುವ ಕಾರ್ಯ ಪ್ರಗತಿಯಲ್ಲಿದೆ. ಉಪಪಂಗಡದಲ್ಲಿರುವ ಹಿರಿಯರು, ಮಠಾಧಿಪತಿಗಳನ್ನು ಒಮ್ಮೆ ಒಟ್ಟಾಗಿ ಸೇರಿಸಿ ಎಲ್ಲರ ಅಭಿಪ್ರಾಯವನ್ನು ಪಡೆದು ಎಲ್ಲ ಒಳಪಂಗಡದ ಬ್ರಾಹ್ಮಣರನ್ನು ಒಂದೇ ವೇದಿಕೆಗೆ ತರಲು ಪ್ರಾಮಾಣಿಕ ಪ್ರಯತ್ನ ಸಾಗಿವೆ. ನಾಗಮೋಹನ್ ವಿಷಯದಲ್ಲಿ ಬ್ರಾಹ್ಮಣರನ್ನು ಹಂಗಿಸುವ ಅಂಶಗಳಿವೆ. ಎಂದೋ ನಡೆದ ಅನಿಷ್ಠ ಪದ್ಧತಿಗಳಿಗೆ ಯಾರು ಕಾರಣ? ಈಗ ಎಲ್ಲವೂ ಬದಲಾಗಿದೆ. ಎಲ್ಲ ಅನಿಷ್ಠ ಪದ್ಧತಿಗಳು ಕೊನೆಯಾಗಿವೆ. ಎಲ್ಲಾ ಸಮುದಾಯಗಳೂ ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮುಂದುವರೆದಿವೆ. ವಿಷಯವನ್ನು ಸರಿಯಾಗಿ ಅರಿಯದೇ ತಮ್ಮ ಮನಸ್ಸಿಗೆ ಬಂದಂತೆ ವರದಿ ನೀಡುವುದು ತರವಲ್ಲ. ಸಮಾಜದ, ಸರ್ವರ ಅಭಿಪ್ರಾಯವೇ ಬ್ರಾಹ್ಮಣ ಸಮುದಾಯದ ಉದ್ದೇಶವಾಗಿದೆ. ಬ್ರಾಹ್ಮಣ ಸಮುದಾಯದವರು ಹೊಂದಿರುವ ಸಮಾಧಾನ, ಶಾಂತತೆಯ ಮನೋಭಾವವನ್ನು ಕೆಲವರು ನಮ್ಮ ಋಣಾತ್ಮಕ ಅಂಶ ಎಂದು ಪರಿಗಣಿಸಿದ್ದಾರೆ. ಬ್ರಾಹ್ಮಣ ಎಲ್ಲ ನೋವನ್ನು ನುಂಗಿ ಎಲ್ಲರಿಗೂ ಒಳಿತು ಬಯಸುವವನು. ಅವನನ್ನು ಅಪಮಾನಿಸುವುದು ಒಳ್ಳೆಯ ಬೆಳವಣಿಗೆಯಲ್ಲ ಎಂದರು.

ರಾಜ್ಯಾದ್ಯಂತ ಬ್ರಾಹ್ಮಣ ಸಂಘಕ್ಕೆ ನೋಂದಣಿ ಪ್ರಕ್ರಿಯೆ ಆರಂಭಗೊಂಡಿದೆ. ಈ ಸಂಘಟನೆಗೆ ಸದಸ್ಯರಾದಲ್ಲಿ ಎಲ್ಲ ಕ್ಷೇತ್ರಗಳಲ್ಲಿರುವ ಮಹನೀಯರ ಪರಿಚಯ ಆಗುವುದರೊಂದಿಗೆ ತಮ್ಮನ್ನು ವ್ಯಾಪಾರ ವ್ಯವಹಾರ ಸೇರಿದಂತೆ ಇನ್ನಿತರ ವಿಷಯಗಳ ಅರಿವು ದೊರೆಯಲಿದೆ ಎಂದು ಸಂಘಟನಾ ಕರ್ಯದರ್ಶಿ ಎಸ್.ಎಸ್. ರಾಘವೇಂದ್ರರವರು ಹೇಳಿದರು. ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ವಿಪ್ರ ನೌಕರರ ಸಂಘದ ಅಧ್ಯಕ್ಷ ಟಿ.ವಿ. ರಂಗನಾಥ್ ವಹಿಸಿದ್ದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಶ್ರೀ ಅಶೋಕ ಹಾರನಹಳ್ಳಿ, ಉಪಾಧ್ಯಕ್ಷರಾದ ಶ್ರೀ ಹೆಚ್.ಆರ್. ಸುರೇಶ್, ಸಂಘಟನಾ ಕಾರ್ಯದರ್ಶಿ ಶ್ರೀ ಹೆಚ್.ಎಸ್. ರಾಘವೇಂದ್ರರವರನ್ನು ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲ್ಲೂಕು ಬ್ರಾಹ್ಮಣ ಸಭಾದ ಅಧ್ಯಕ್ಷ ಎಂ.ಆರ್. ಸತ್ಯನಾರಾಯಣ್, ಲಲಿತಾ ವಿಪ್ರ ಮಂಡಲಿಯ ಸದಸ್ಯರು ಸೇರಿದಂತೆ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು.



# ರಾಯಚೂರಿನಲ್ಲಿ ಪ್ರತಿಭಾ ಪುರಸ್ಕಾರ, ವಿದ್ಯಾ ಪ್ರೋತ್ಸಾಹ ನಿಧಿ ವಿತರಣೆ ಹಾಗೂ ವಿಪ್ರಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ

## ಬ್ರಾಹ್ಮಣರೆಲ್ಲ ಒಂದೇ ಎಂಬ ಮನೋಭಾವ ಅಗತ್ಯ

– **ಅಶೋಕ ಹಾರನಹಳ್ಳಿ**



ಬ್ರಾಹ್ಮಣ ಸಮಾಜ ಸಂಘಟಿತವಾಗಿ ತಮ್ಮ ಸಮಾಜವನ್ನು ನಾವೇ ರಕ್ಷಣೆ ಮಾಡಬೇಕಾಗಿದೆ. ಪ್ರತಿಭೆಯೇ ನಮ್ಮ ಆಸ್ತಿ. ನ್ಯಾಯ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಬ್ರಾಹ್ಮಣರು ಪ್ರಬಲರಾಗಿದ್ದಾರೆ. ಚಾರ್ಟೆಡ್ ಅಕೌಂಟೆಂಟ್ ವೃತ್ತಿಯಲ್ಲಿ ಕೂಡ ಶೇ.50% ಕ್ಕಿಂತ ಹೆಚ್ಚು ಬ್ರಾಹ್ಮಣ ಸಮುದಾಯದವರಿದ್ದಾರೆ ಎಂಬುದು ಹೆಮ್ಮೆಯ ವಿಷಯ ಎಂದು ತಿಳಿಸಿದರು.

ಈ ಹಿಂದೆ ಬ್ರಾಹ್ಮಣ ಸಮಾಜವು ಕೃಷಿ ಹಾಗೂ ಪೌರೋಹಿತ್ಯದ ಮೇಲೆ ಅವಲಂಬಿತವಾಗಿತ್ತು. ಈಗ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವಂಥ ಬ್ರಾಹ್ಮಣರ ಸಂಖ್ಯೆಯೂ ಕಡಿಮೆಯಾಗಿದೆ. ಬ್ರಾಹ್ಮಣರು ಸ್ವತಂತ್ರವಾಗಿ ಜೀವನ ರೂಪಿಸಿಕೊಳ್ಳಲು ಮುಂದಾಗಬೇಕೆಂದು ಎಂದು ತಿಳಿಸಿದರು.

ಬ್ರಾಹ್ಮಣರೆಲ್ಲರೂ ಒಂದೇ ಮನೋಭಾವನೆ ಸಮಾಜದ ಪ್ರತಿಯೊಬ್ಬರಲ್ಲಿ ಮೂಡಬೇಕು. ತ್ರಿಮತಸ್ಥರು ಒಗ್ಗೂಡಬೇಕು. ಇಲ್ಲದೇ ಇದ್ದರೆ ಬ್ರಾಹ್ಮಣ ಸಮಾಜಕ್ಕೆ ಉಳಿಗಾಲವಿಲ್ಲ. ಈ ದೆಸೆಯಲ್ಲಿ ಮಾರ್ಗದರ್ಶನ ಪಡೆಯಲು ಬ್ರಾಹ್ಮಣ ಸಮಾಜದ ಎಲ್ಲ ಯತಿಗಳನ್ನು ಒಂದೆಡೆ ಸೇರಿಸಿ, ಬ್ರಾಹ್ಮಣರೆಲ್ಲರೂ ಒಂದೇ ಎಂಬ ನಿರ್ಧಾರಕ್ಕೆ ಬರಲು ಚಿಂತನೆ ನಡೆಸಲಾಗುತ್ತಿದೆ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರನಹಳ್ಳಿ ತಿಳಿಸಿದರು.

ಇಲ್ಲಿನ ಜವಹರ ನಗರದ ಬಡಾವಣೆಯ ರಾಘವೇಂದ್ರ ಸ್ವಾಮಿ ಕಲ್ಯಾಣ ಮಂಟಪದಲ್ಲಿ ಭಾನುವಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಘಟಕದಿಂದ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ವಿಪ್ರಶ್ರೀ ಪ್ರಶಸ್ತಿ ಪ್ರದಾನ ಹಾಗೂ ವಿದ್ಯಾನಿಧಿ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚೆಗೆ ಬ್ರಾಹ್ಮಣ ಸಮುದಾಯವನ್ನು ಟೀಕಿಸುವಂಥ ಪ್ರವೃತ್ತಿ ಹೆಚ್ಚಾಗಿದೆ. ಸನಾತನ ಧರ್ಮ ಹಾಗೂ ಬ್ರಾಹ್ಮಣ ಎಂಬ ವಿಷಯಗಳ ಮೇಲೆ ಟೀಕಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಇಂತಹ ಟೀಕೆಗಳನ್ನು ಕಾನೂನು ಪ್ರಕಾರ ಎದುರಿಸಲು ಕಾನೂನು ಘಟಕವನ್ನು ಸ್ಥಾಪನೆ ಮಾಡಲಾಗಿದೆ ಎಂದರು.

ಸಚಿವ ಭೋಸರಾಜುರವರು ಪ್ರತಿಭೆಗಳನ್ನು ಪುರಸ್ಕರಿಸುವ ಕಾರ್ಯ ತುಂಬಾ ಶ್ರೇಷ್ಠವಾದದ್ದು. ಬ್ರಾಹ್ಮಣ ಸಮಾಜದ ಅಭಿವೃದ್ಧಿಗೆ ಸರ್ಕಾರದಿಂದ ಅಗತ್ಯ ನೆರವು ದೊರಕಿಸಲು ಪ್ರಯತ್ನಿಸುವುದಾಗಿ ತಿಳಿಸಿದರು. ಸಮಾರಂಭದಲ್ಲಿ ಜಿಲ್ಲೆಯ ಎಸ್.ಎಸ್.ಎಲ್.ಸಿ. ಯಿಂದ ಪಿ.ಹೆಚ್.ಡಿ.ಯವರಿಗೆ ಅಪೂರ್ವ ಸಾಧನೆ ಮಾಡಿದ 150ಕ್ಕೂ ಹೆಚ್ಚು ಪ್ರತಿಭಾವಂತರನ್ನು ಹಾಗೂ ಜೊತೆಯಲ್ಲಿ ಅವರ ಪೋಷಕರನ್ನು ಸಹ ಸನ್ಮಾನಿಸಿದದ್ದು ವಿಶೇಷವಾಗಿತ್ತು.

ಅಧ್ಯಕ್ಷತೆಯನ್ನು ಮಹಾಸಭಾದ ಸಂಚಾಲಕ ಡಿ.ಕೆ. ಮುರಳೀಧರ ವಹಿಸಿದ್ದರು. ಸಚಿವ ಎನ್.ಎಸ್. ಬೋಸ್‌ರಾಜು, ನಗರದ ಶಾಸಕ ಡಾ. ಶಿವರಾಂ ಪಾಟೀಲ್ ಮಾತನಾಡಿದರು. ಹಿರಿಯ ಸದಸ್ಯರ ನರಸಿಂಗರಾವ್ ದೇಶಪಾಂಡೆ, ಉಪಾಧ್ಯಕ್ಷ ಡಾ. ಆನಂದತೀರ್ಥ ಫಡ್ನೀಸ್, ರಾಜ್ಯ ಸಮಿತಿ ಪದಾಧಿಕಾರಿಗಳಾದ ಕಾರ್ತಿಕ್ ಎಸ್. ಬಾಪಟ್, ರಾಜ್ಯ ಮಹಿಳಾ ವಿಭಾಗದ ಸಂಚಾಲಕಿ ಶುಭಮಂಗಳ ಸುನೀಲ್, ಸಾವಿತ್ರಿ ರಮೇಶ್ ಹಾಗೂ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.



# ರಾಯಚೂರ ಜಿಲ್ಲಾ ಬ್ರಾಹ್ಮಣ ಸಭಾ ಸಂಘಟನಾ ಸಭೆ



ಕರ್ನಾಟಕ ಬ್ರಾಹ್ಮಣ ಮಹಾಸಭೆ ರಾಯಚೂರು ಘಟಕದ ವತಿಯಿಂದ ಸಮಾಲೋಚನಾ ಸಭೆ ರಾಯಚೂರಿನಲ್ಲಿ ಶಾರದಾನಿಕೇತನ್ ಶಾಲೆಯಲ್ಲಿ ನಡೆಯಿತು. ಬ್ರಾಹ್ಮಣ ಸಂಘಟನೆಯನ್ನು ಶಕ್ತಿಯುತಗೊಳಿಸಲು ಮುಂದಿನ ಕಾರ್ಯಕ್ರಮಗಳನ್ನು ಆಯೋಜಿಸುವ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಶಾರದಾನಿಕೇತನ್ ಶಾಲೆಯ ಮುಖ್ಯಸ್ಥರಾದ ಮುರುಳೀಧರ್, ಉಪಾಧ್ಯಕ್ಷರಾದ ಡಾ. ಆನಂದ ತೀರ್ಥ ಫಡ್ನಿಸ್, ಹಿರಿಯರಾದ ನರಸಿಂಗರಾವ್ ದೇಶಪಾಂಡೆ, ಪತ್ರಕರ್ತರಾದ ಅರವಿಂದ್ ಕುಲಕರ್ಣಿ ಮತ್ತು ಇತರ ಪ್ರಮುಖರು ಭಾಗವಹಿಸಿದ್ದರು ಕರ್ನಾಟಕ ಬ್ರಾಹ್ಮಣ ಮಹಾಸಭೆ ವತಿಯಿಂದ ಉಪಾಧ್ಯಕ್ಷರಾದ ಶ್ರೀಮತಿ ಸಾವಿತ್ರಿ ರಮೇಶ ಅವರು ಸಂಘಟನಾ ಕಾರ್ಯದರ್ಶಿಗಳಾದ ಕಾರ್ತಿಕ್ ಬಾಪಟ್ ಅವರು, ವಿಪ್ರ ನುಡಿಯ ಸುಬ್ಬರಾವ್ ಅವರು, ಮಹಿಳಾ ಸಂಘಟನೆಯ ಶ್ರೀಮತಿ ಶುಭ ಮಂಗಳ ಸುನೀಲ್ ಭಾಗವಹಿಸಿದ್ದರು.

# ರಾಯಚೂರ ಮಹಿಳಾ ವಿಭಾಗದಿಂದ ಸಮಾಲೋಚನಾ ಸಭೆ

ರಾಯಚೂರಿನ ರಾಘವೇಂದ್ರಸ್ವಾಮಿ ಕಲ್ಯಾಣ ಮಂಟಪದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಘಟಕದಿಂದ ಭಾನುವಾರ ಏರ್ಪಡಿಸಿದ್ದ ಪ್ರತಿಭಾ ಪುರಸ್ಕಾರ, ವಿಪ್ರಶ್ರೀ ಪ್ರಶಸ್ತಿ ಪ್ರದಾನ ಹಾಗು ವಿದ್ಯಾನಿಧಿ ವಿತರಣಾ ಕಾರ್ಯಕ್ರಮದ ಸಂದರ್ಭದಲ್ಲಿ ಭಾಗವಹಿಸಿದ್ದ ರಾಜ್ಯ ಮಹಿಳಾ ವಿಭಾಗದ ಸಂಚಾಲಿ ಶ್ರೀಮತಿ ಶುಭಮಂಗಳ ಸುನೀಲ್‌ರವರು ಜಿಲ್ಲಾ ಮಹಿಳಾ ವಿಭಾಗದ ಪದಾಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ಸಭೆಯಲ್ಲಿ ಉಪಾಧ್ಯಕ್ಷರಾದ ಶ್ರೀಮತಿ ಸಾವಿತ್ರಿ ರಮೇಶ್ ಹಾಗು ರಾಯಚೂರಿನ ಜಿಲ್ಲಾ ಸಂಚಾಲಕಿ ರೇಖಾ ಮತ್ತಿತರರು ಉಪಸ್ಥಿತರಿದ್ದರು.



### ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.) ಮಹಿಳಾ ವಿಭಾಗ

# ಸಾಮೂಹಿಕ ವಿಷ್ಣುಸಹಸ್ರನಾಮ ಪಠಣ – ಲಲಿತಾ ಕುಂಕುಮಾರ್ಚನೆ





ಅಧಿಕ ಮಾಸದ ಪ್ರಯುಕ್ತ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕಾರ್ಯಾಲಯದ ಗಾಯತ್ರಿ ಭವನದಲ್ಲಿ ಇದೇ ಶುಕ್ರವಾರ(04.08.2023) ವಿಷ್ಣು ಸಹಸ್ರನಾಮ ಹಾಗೂ ಲಲಿತಾ ಸಹಸ್ರನಾಮ ಪಾರಾಯಣ, ಕುಂಕುಮಾರ್ಚನೆ ನಡೆಸಲಾಯಿತು. ಅಪಾರ ಮಹಿಳಾ ಸದಸ್ಯರು ಹಾಗೂ ಮಹಾಸಭಾ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು.

# ಮೈಸೂರಿನಲ್ಲಿ ಪ್ರತಿಭಾ ಪುರಸ್ಕಾರ ಸಮಾರಂಭ



ಶ್ರೀ ಗಾಯತ್ರಿ ಎಜುಕೇಷನಲ್ ಕಲ್ಚರಲ್ ಮತ್ತು ಚಾರಿಟಬಲ್ ಟ್ರಸ್ಟಿನ ಆಶ್ರಯದಲ್ಲಿ ದಿನಾಂಕ 08.07.2023ರಂದು ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇ.70ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಡೆಸಲಾಯಿತು. ಅಧ್ಯಕ್ಷತೆಯನ್ನು ಶ್ರೀಮತಿ ವನಜ ಟಿ. ಪಂಡಿತ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಹೆಚ್.ಸಿ. ಶಿವಶಂಕರ್, ಆಯುರ್ವೇದ ವೈದ್ಯರು, ಮೈಸೂರು ಹಾಗೂ ಶ್ರೀ ಗುರುರಾಜ್ ಕುಮಾರ್, ಕರ್ನಾಟಕ ಬ್ಯಾಂಕಿನ ವ್ಯವಸ್ಥಾಪಕರು, ಸಿದ್ದಾರ್ಥನಗರ ಶಾಖೆ, ಮೈಸೂರು ಇವರುಗಳು ಆಗಮಿಸಿದ್ದರು. ಟ್ರಸ್ಟಿನ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾದ ಡಾ. ಹೆಚ್.ಸಿ. ಶಿವಶಂಕರ್‌ರವರು ಎಸ್.ಎಸ್.ಎಲ್.ಸಿ. ಪ್ರಭಾವಂತ ಮಕ್ಕಳಿಗೆ ನೆನೆಪಿನ ಕಾಣಿಕೆಯನ್ನು ನೀಡಿದರು. ಮಕ್ಕಳು ಪ್ರತಿಭಾವಂತರಾಗಿ ಹೊಮ್ಮಲು ಓದಿನ ಜೊತೆಗೆ ಆರೋಗ್ಯವು ಮುಖ್ಯ. ಆರೋಗ್ಯವನ್ನು ವೃದ್ಧಿಸಿಕೊಳ್ಳಲು ಉತ್ತಮ ಆಹಾರ ಪದ್ಧತಿ ರೂಢಿಸಿಕೊಳ್ಳುವಂತೆ ತಿಳಿಸಿದರು. ಮತ್ತೊಬ್ಬ ಅತಿಥಿಗಳಾದ ಶ್ರೀ ಗುರುರಾಜ್ ಕುಮಾರ್ ರವರು ದ್ವಿತೀಯ ಪಿ.ಯು.ಸಿ. ಮಕ್ಕಳಿಗೆ ನೆನಪಿನ ಕಾಣಿಕೆಯನ್ನು ನೀಡಿ, ತಮ್ಮ ಬ್ಯಾಂಕಿನಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಇರುವ ಕೆಲವು ಸಾಲ-ಸೌಲಭ್ಯಗಳನ್ನು ತಿಳಿಸಿದರು ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಿ ನೌಕರರಿಗಳಾಗಿ ಇರುವ ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಪ್ರಸ್ತಾಪಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ವನಜ ಟಿ. ಪಂಡಿತ್‌ರವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು ಹಾಗೂ ಗಣ್ಯರು ನೀಡಿದ ಸಲಹೆಗಳನ್ನು ಪ್ರಶಂಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ವೀಣಾ ಡೋಂಗ್ರೆಯವರು ಅಚ್ಚುಕಟ್ಟಾಗಿ ನಿರೂಪಿಸಿದರು.

# ಕೊಡಗು ಜಿಲ್ಲಾ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆ ಪ್ರತಿಭಾ ಪುರಸ್ಕಾರ ವಿತರಣೆ





ತಾ.28-05-2023 ರಂದು ಕೊಡಗು ಜಿಲ್ಲಾ ಬ್ರಾಹ್ಮಣರ ಕ್ಷೇಮಾಭಿವೃದ್ಧಿ ಸಂಘದ ಮಹಾಸಭೆಯು ಕೈಕೇರಿಯಾ ವಿಪ್ರ ಸಭಾ ಭವನದಲ್ಲಿ ಜರಗಿತು. ಇದೇ ಸಂದರ್ಭ ಮಹಾಸಭೆಯಲ್ಲಿ ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅತ್ಯಧಿಕ ಅಂಕ ಪಡೆದ ವಿಪ್ರ ವಿದ್ಯಾರ್ಥಿಗಳಿಗೆ, ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ಶಾಲು ಹೊದಿಸಿ ಫಲತಾಂಬೂಲ ನೀಡಿ ಕಿರು ಕಾಣಿಕೆ ಅರ್ಪಿಸಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಸಭಾದ ಸಹ ಕಾರ್ಯದರ್ಶಿಗಳಾದ ಶ್ರೀಮತಿ ಚೇತನಾ ದತ್ತಾತ್ರೇಯ ಉಪಸ್ಥಿತರಿದ್ದು ಪ್ರತಿಭಾನ್ವಿತರನ್ನು ಗೌರವಿಸಿ ಮಾತನಾಡಿದರು ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಬಗ್ಗೆ ಮಾಹಿತಿ ನೀಡಿ ಸದಸ್ಯರಾಗಲು ಮನವಿಯನ್ನು ಮಾಡಿದರು.

ಈ ಕಾರ್ಯಕ್ರಮವು ಕೈಕೇರಿಯಾ ವಿಪ್ರ ಸಭಾ ಭವನದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರಾಘವೇಂದ್ರ ವೈಲಯರವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಲಲಿತಾ ಹರಿನಾರಾಯಣ ಸ್ವಾಗತಿಸಿದರು, ಯೋಗೀಶ್ ಪಡಂತ್ತಾಯ ವಂದಿಸಿದರು, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ, ವಿಪ್ರ ಯುವ ಸಂಘ ಕೊಡಗಿನ ಸ್ಥಾಪಕ ಅಧ್ಯಕ್ಷರಾದ ಶ್ರೀಧರ ನೆಲ್ಲಿತ್ತಾಯ ಮತ್ತಿತರರು ಉಪಸ್ಥಿತರಿದ್ದರು.

# ದಾವಣಗೆರೆಯಲ್ಲಿ ಪ್ರತಿಭಾ ಪುರಸ್ಕಾರ




ದಾವಣಗೆರೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ 2022–23ನೇ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ., ದ್ವಿತೀಯ ಪಿಯುಸಿ ಮತ್ತು ಇಂಜಿನಿಯರಿಂಗ್ ಪರೀಕ್ಷೆ ಗಳಲ್ಲಿ ಅತ್ಯುತ್ತಮ ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿದ, ಮತ್ತು ಕ್ರೀಡಾ ವಿಭಾಗದಲ್ಲಿ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿದ ಪ್ರತಿಭಾವಂತ ವಿಪ್ರ ವಿದ್ಯಾರ್ಥಿ /ವಿದ್ಯಾರ್ಥಿನಿಯರನ್ನು ದಾವಣಗೆರೆ ತಾಲ್ಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘವು ಪ್ರಶಸ್ತಿಪತ್ರ,ಸ್ಮರಣಿಕೆ,ನಗದು ಬಹುಮಾನವನ್ನು ನೀಡಿ ಗೌರವಿಸಲಾಯಿತು.

ಮುಖ್ಯ ಅತಿಥಿಗಳಾಗಿ ಮೈಸೂರಿನ ಬ್ಯುಸಿನೆಸ್ ಬೈ ಬ್ರಾಹ್ಮಿನ್ಸ್‌ನ ಅಧ್ಯಕ್ಷರಾದ ಶ್ರೀ ಅನಂತ್ ನಾಗರಾಜ್ ಮತ್ತು ನಿರ್ದೇಶಕರಾದ ಶ್ರೀ ನರಸಿಂಹ ಪ್ರಸ ಾದ್ ಭಾಗವಹಿಸಿದಗದರು.

ಮೈಸೂರು ನಗರದ ಶ್ರೀಯುತ ಅನಂತ ನಾಗರಾಜ್ ಅವರು ಮಾತನಾಡಿ, ಸ್ವಂತ ಉದ್ಯಮ ನಡೆಸುವವರು ಒಂದೇ ವೇದಿಕೆಯ ಅಡಿಯಲ್ಲಿ ಒಗ್ಗೂಡಿ, ಸದಸ್ಯರುಗಳಾಗಿ ವ್ಯವಹಾರದಲ್ಲಿ ಪರಸ್ಪರ ಸಹಕಾರ ನೀಡಿ ವ್ಯವಹಾರದಲ್ಲಿ ಹೇಗೆ ಅಭಿವೃದ್ಧಿ ಹೊಂದಬಹುದು ಎಂಬುದನ್ನು ಅಂಕಿ ಅಂಶಗಳ ಸಮೇತ ಸಭೆಗೆ ತಿಳಿಸಿದರು.

ಶ್ರೀ ಅನಂತ ನಾಗರಾಜ್ ಹಾಗೂ ಅವರ ತಂಡದವರು 2017 ರಲ್ಲಿ ಮೈಸೂರು ನಗರದಲ್ಲಿ (BBB Trust) ಸಂಸ್ಥೆಯನ್ನು ಹುಟ್ಟುಹಾಕಿ, ಅವರ ಮಾರ್ಗದರ್ಶನದಲ್ಲಿ ಈ ಸಂಸ್ಥೆಯು ದಕ್ಷಿಣ ಭಾರತದ ಅನೇಕ ಪ್ರಮುಖ ನಗರಗಳಲ್ಲಿ ವ್ಯವಹಾರಸ್ಥರ ಸಂಘಗಳನ್ನು ಹೊಂದಲು ಅನುವು ಮಾಡಿಕೊಟ್ಟಿದ್ದು, ಆ ಸಂಘಗಳ ಸದಸ್ಯರ ವ್ಯವಹಾರ ಅಗಣಿತ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದೆ ಎಂಬ ಸತ್ಯವನ್ನು ಸಭೆಗೆ ಮನದಟ್ಟು ಮಾಡಿಕೊಟ್ಟರು.



ಅಲ್ಲದೇ ದಾವಣಗೆರೆ ತಾಲ್ಲೂಕು ಬ್ರಾಹ್ಮಣ ಸಮಾಜ ಸೇವಾ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಪಿ. ಸತ್ಯನಾರಾಯಣರಾವ್ ಅವರ ಸುದೀರ್ಘ ಸಮಾಜಮುಖಿ ಸೇವೆಯನ್ನು ಪರಿಗಣಿಸಿ ಅವರಿಗೆ ಶುಭ ಹಾರೈಸಿ, ಶ್ರೀಮತಿ ಎಸ್. ರಾಜಲಕ್ಷ್ಮಿ, ಶ್ರೀ ಎಸ್. ಪಿ. ಸತ್ಯನಾರಾಯಣ ರಾವ್ ದಂಪತಿಗಳನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ॥ ಎಂ ಸಿ ಶಶಿಕಾಂತ್ ಅವರು ವಿಪ್ರ ಬ್ಯುಸಿನೆಸ್ ದಾರರ ಕೈಪಿಡಿ ಹೊರತರುವ ಉದ್ದೇಶವಿದೆ, ಅದಕ್ಕಾಗಿ ವ್ಯಾಪಾರ, ವ್ಯವಹಾರ, ಸ್ವಯಂ ಉದ್ಯೋದಸ್ಥರು ನಿಗದಿತ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸಲು ತಿಳಿಸಿದರು. ವಿದ್ಯಾರ್ಥಿಗಳಿಗೆ ಗುರಿ ಇಟ್ಟು ಸಾಧನೆ ಮಾಡಿ ಸಮಾಜದ ಗೌರವ ಹೆಚ್ಚಿಸಿ ಎಂದು ಹೇಳಿದರು. ಹೆಣ್ಣುಮಕ್ಕಳು ಲವ್ ಜಿಹಾದ್ ಇತ್ಯಾದಿ ಕುತಂತ್ರಗಳಿಗೆ



ಬಲಿಯಾಗದೆ ಭವಿಷ್ಯದ ಕಡೆ ಗಮನ ಇರಲಿ ಎಂದು ಹೇಳಿದರು. ತಂದೆ ತಾಯಿಗಳನ್ನು ಮರೆಯದೆ, ಅವರು ವೃದ್ಧಾಶ್ರಮಗಳಿಗೆ ಎಂದೂ ಸೇರುವ ಪರಿಸ್ಥಿತಿ ಬರದಂತೆ ಚೆನ್ನಾಗಿ ನೋಡಿಕೊಳ್ಳಿ ಎಂದು ಹೇಳಿದರು. ವಿದ್ಯಾರ್ಥಿಗಳು ಬ್ರಾಹ್ಮಣ ನಿತ್ಯಕರ್ಮಗಳಾದ ಸಂಧ್ಯಾವಂದನೆ,ಪೂಜೆ ಇತ್ಯಾದಿಗಳನ್ನು ಬಿಡದೆ ಅನುಷ್ಠಾನ ಮಾಡಬೇಕು ಎಂಬ ಕಿವಿಮಾತುಗಳನ್ನ ಹೇಳಿದರು.

ಶ್ರೀ ಸತ್ಯನಾರಾಯಣ ರಾವ್, ಮೋತಿ ಆರ್ ಸುಬ್ರಮಣ್ಯ, ಉಮಾಕಾಂತ್ ದೀಕ್ಷಿತ್, ಪಿ.ಜಿ. ನಿರಂಜನ್, ಬಾಲಕೃಷ್ಣ ವೈದ್ಯ, ಶೇಷಾಚಲ, ರಾಮಚಂದ್ರರಾವ್, ಉಮೇಶ್ ಕುಲಕರ್ಣಿ, ಸಾರ್ವಜನಿಕರು, ವಿದ್ಯಾರ್ಥಿಗಳು ಮೊದಲಾದವರು ಭಾಗವಹಿಸಿದ್ದರು.

ಸಭಾ ಕಾರ್ಯಕ್ರಮವನ್ನುಸಮಾಜದ ಕಾರ್ಯದರ್ಶಿಗಳಾದ ಶ್ರೀ ಯುತ ಗೋಪಾಲ್ ದಾಸ್ ರವರು ನಿರೂಪಿಸಿದರು.

ಸಿ.ಎ. ಗಿರೀಶ್ ನಾಡಿಗ್ ರವರು ಸ್ವಾಗತಿಸಿದರು, ಭಾಸ್ಕರ್ ಭಟ್ ರವರು ಎಲ್ಲರಿಗೂ ವಂದಿಸಿದರು.

## ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ



ಬಸವನಗುಡಿ ಕ್ಷೇತ್ರ ಬ್ರಾಹ್ಮಣ ಸಂಘದ ವತಿಯಿಂದ ದಿನಾಂಕ. 23.07.2023 ರಂದು ಪ್ರತಿಭಾ ಪುರಸ್ಕಾರ ಮತ್ತು ವೇ.ಬ್ರ.ಶ್ರೀ ಧಾಳಿ ಲಕ್ಷ್ಮಿನರಸಿಂಹ ಭಟ್ಟರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀಮತಿ ಶಾರದಾ ಸುಬ್ರಮಣ್ಯ, ಐ.ಎ.ಎಸ್. ಅಧಿಕಾರಿಯಾದ ಶ್ರೀ. ಎ.ಟಿ. ರಮೇಶ್, ಜನಪ್ರಿಯ ಶಾಸಕರಾದ ಶ್ರೀ. ರವಿಸುಬ್ರಮಣ್ಯ, ಕರ್ನಾಟಕ ರಾಜ್ಯ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಶ್ರೀ. ಚಂದ್ರಶೇಖರ ಹೆಬ್ಬಾರ್, ವಿದ್ಯಾರ್ಥಿ ಭವನ್ ಮಾಲೀಕರಾದ ಶ್ರೀ.ಅರುಣ್ ಅಡಿಗ, ಆಡನ್ ವಿದ್ಯಾಸಂಸ್ಥೆಯ ಶ್ರೀ ರಾಮಣ್ಣ, ಟಿ.ಎಲ್.ಎಸ್. ಕುಮಾರ್, ಪ್ರಧಾನ ಕಾರ್ಯದರ್ಶಿಗಳು ಉಪಸ್ಥಿತರಿದ್ದರು.

## ಕೆಜಿಎಫ್ ಬ್ರಾಹ್ಮಣ ಸಂಘದಲ್ಲಿ ಪ್ರತಿಭಾ ಪುರಸ್ಕಾರ

ಕೋಲಾರದ ಬೆಮೆಲ್ ನಗರದ ಬ್ರಾಹ್ಮಣಸಂಘವು ಹಮ್ಮಿಕೊಂಡಿದ್ದ ವಿಷ್ಣುಸಹಸ್ರನಾಮ ಹೋಮ ಸಮಾರಂಭದಲ್ಲಿ ಬೆಮೆಲ್ ಮುಖ್ಯಸ್ಥರಾದ ಈಶ್ವರ ಭಟ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸಂಘಟನಾ ಕಾರ್ಯದರ್ಶಿ ಅರುಣ್ ಹಿರಿಯಣ್ಣ, ಸಂಘದ ಅಧ್ಯಕ್ಷ ಶೇಷಗಿರಿರಾವ್ ಉಪಸ್ಥಿತರಿದ್ದರು. ಇದೇ ಸಮಯದಲ್ಲಿ ಶಿಕ್ಷಣದಲ್ಲಿ ಸಾಧನೆಗೈದ ಪ್ರತಿಭಾನ್ವಿತ ವಿಪ್ರ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಯಿತು.




## ಮಹಾಸಭಾ ಉಪಾಧ್ಯಕ್ಷ ನಟರಾಜ್ ಜೋಯಿಸ್‌ರವರ ಷಷ್ಟ್ಯಾಬ್ಧಿ ಸಮಾರಂಭ – ಮಹಾಸಭೆಗೆ 10 ಸಾವಿರ ರೂ. ದೇಣಿಗೆ



ದಿನಾಂಕ 16/7/2023ರಂದು ಮೈಸೂರಿನ ಎ.ಕೆ.ಬಿ.ಎಂ.ಎಸ್‌ನ ರಾಜ್ಯ ಉಪಾಧ್ಯಕ್ಷರಾದ ನಟರಾಜ್ ಜೋಯಿಸ್‌ರವರ ಸ್ವಗೃಹದಲ್ಲಿ ನಡೆದ ಚಂಡೀಹೋಮ ಹಾಗೂ ನಟರಾಜ ಜೋಯಿಸ್ ರವರ 60ನೆ ಜನ್ಮದಿನ ಮತ್ತು 25ನೆಯ ವಿವಾಹ ವಾರ್ಷಿಕೋತ್ಸವದ ಸಂದರ್ಭದಲ್ಲಿ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರ ಪಾದಪೂಜೆ. ಭಿಕ್ಷಾವಂದನೆಯಲ್ಲಿ ಕೃಷ್ಣರಾಜ ಕ್ಷೇತ್ರದ ಶಾಸಕರಾದ ಶ್ರೀ ಟಿ.ಎಸ್.ಶ್ರೀವತ್ಸ, ಮಹಾಸಭಾ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ದಂಪತಿಗಳು. ನಿವೃತ್ತ ಎಡಿಜಿಪಿ ಆದ ಶ್ರೀ ಭಾಸ್ಕರ ರಾವ್ ಮಹನೀಯರುಗಳಾದ ಶ್ರೀ ರಘುರಾಂ ವಾಜಪೇಯಿ ಮತ್ತು ಜೋಯಿಸ್ ರವರ ಅಭಿಮಾನಿಗಳು, ಹಿತೈಷಿಗಳು, ಸಂಬಂಧಿಕರು ಭಾಗವಹಿಸಿ ಶ್ರೀ ನಟರಾಜ್ ಜೋಯಿಸ್‌ರನ್ನು ಅಭಿನಂದಿಸಿ ಆಶೀರ್ವದಿಸಿದರು. ಈ ಶುಭ ಕಾರ್ಯದಲ್ಲಿ ಮಹಾಸಭೆಗೆ ವಿದ್ಯಾವಾಹಿನಿ ಮಹಿಳಾ ವಸತಿ ನಿಲಯಕ್ಕೆ 10 ಸಾವಿರ ರೂ.ಗಳ ದೇಣಿಗೆಯನ್ನು ಮಹಾಸಭಾ ಅಧ್ಯಕ್ಷರಿಗೆ ನೀಡಿ ಆಶೀರ್ವಾದ ಪಡೆದರು. ಶ್ರೀ ಜೋಯಿಸ್ ದಂಪತಿಗಳಿಗೆ ಮಹಾಸಭೆ ಹಾರ್ದಿಕ ಅಭಿನಂದನೆಗಳು.



# ಅಕ್ಷಯ ವಿಪ್ರ ಮಹಾಸಭಾದ ವಿಜೃಂಭಣೆಯ ಸರ್ವಸದಸ್ಯರ ಸಭೆ





ಅಕ್ಷಯ ವಿಪ್ರ ಮಹಾಸಭಾದ ಸರ್ವ ಸದಸ್ಯರ ಸಭೆಯು ಜೂಲೈ ತಿಂಗಳ 16 ನೇ ತಾರೀಖಿನ ಬಾನವಾರ ದಂದು 16 ನೇ ಸರ್ವಸದಸುರ ಸಭೆಯನ್ನು ವಿಜೃಂಭಣೆಯಿಂದ ನಡೆಸಲಾಯಿತು ಅಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ಸಂಜೆ 4 ಗಂಟೆಯ ವರೆಗೆ ವಿವಿಧ ಕಾರ್ಯಕ್ರಮ ಗಳಿಂದ ಅದ್ದೂರಿಯಾಗಿ ಜರುಗಿತು ಲೋಕ ಕಲ್ಯಾಣಕಾಗಿ ಆಯೋಜಿಸಿದ್ದ



ಸಾಮೂಹಿಕ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆಯಲ್ಲಿ 28 ದಂಪತಿ ಗಳು ಭಾಗವಹಿಸಿದ್ದರು ಇದೆ ಸಂದರ್ಭದಲ್ಲಿ ಮುಳುಬಾಗಿಲು ಶ್ರೀಪಾದ ರಾಜರ ಮಠದ ಮಠಾಧೀಶರಾದ ಶ್ರೀ ಶ್ರೀ ಶ್ರೀ 1008 ಸುಜಯ ನಿದಿ ಶ್ರೀಗಳು ಸಭೆಗೆ ಆಹ್ವಾನದ ಮೇರೆಗೆ ಆಗಮಿಸಿ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜೆ ಯಲ್ಲಿ ಬಾಗವಹಿಸಿ ಸಭೆಗೆ ಆಗಮಿಸಿದ್ದ ಸಭಿಕರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವಚನದ ಮೂಲಕ ಶುಭ ಹಾರೈಸಿದರು. ಹಾಗೂ ಇದೇ ಸಂದರ್ಭ ದಲ್ಲಿ ಸಂಘದ ಆಹ್ವಾನದ ಮೇರೆಗೆ ಸಭೆಗೆ ಆಗಮಿಸಿದ ಬ್ರಾಹ್ಮಣ ಸಮಾಜದ ರಾಜಕೀಯ ನಾಯಕರಾದ ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರಾದ ಶ್ರೀ ತೇಜಸ್ವಿ ಸೂರ್ಯ ಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ರಾಮಮೂರ್ತಿ ಮತ್ತು ಬಸವನಗುಡಿಯ ಶಾಸಕರಾದ ಶ್ರೀ ರವಿಸುಬ್ರಮಣ್ಯ ರವರನ್ನು ಅಕ್ಷಯ ವಿಪ್ರ ಮಹಾಸಭಾದ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ತೇಜಸ್ವಿ ಸೂರ್ಯ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಬ್ರಾಹ್ಮಣರ ಶ್ರೇಯಸ್ಸಿಗಾಗಿ ಮತ್ತು ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಸಂಸದರ ನಿಧಿಯಿಂದ ಹಣಕಾಸಿನ ನೆರವು ನೀಡುವುದಾಗಿ ಭರವಸೆ ನೀಡಿದರು.

ಸಭೆಗೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಛಾಯಾಪತಿಯವರು ಆಗಮಿಸಿದ್ದರು ಅವರನ್ನು ಸ್ವಾಗತಿಸಿ ಸನ್ಮಾನಿಸಲಾಯಿತು ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಮಾಲತಿ ಮಣಿಪಾಲ್ ಹಾಸ್ಪಿಟಲ್ ವತಿಯಿಂದ ಉಚಿತ ವೈದ್ಯಕೀಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು.ನಮ್ಮ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಂಡರು.



ಅಕ್ಷಯ ವಿಪ್ರ ಮಹಾಸಭಾದ ಪದಾಧಿಕಾರಿಗಳು ಕಾರ್ಯಕಾರಿ ಸಮಿತಿಯ ಸದಸ್ಯರು ಕಾರ್ಯಕರ್ತರು ಅತಿ ಉತ್ಸಾಹದಿಂದ ಪಾಲ್ಗೊಂಡು ಸಭೆಯ ಯಶಸ್ವಿಗೆ ಕಾರಣ ಕರ್ತರಾದರು ಹಾಗೂ ಸುಮಾರು 400 ಕ್ಕು ಅಧಿಕ ಸಭಿಕರು ಸಭೆಯಲ್ಲಿ ಭಾಗವಹಿಸಿದ್ದು ಸಭೆಗೆ ವಿಶೇಷ ಮೆರುಗು ತಂದು ಕೊಟ್ಟಿತು.



# ಟಿ. ದಾಸರಹಳ್ಳಿ ಬ್ರಾಹ್ಮಣ ಸಂಘದ ಸರ್ವಸದಸ್ಯರ ಸಭೆ



ದಿನಾಂಕ 09.07.2023ರಂದು 2023-24ನೇ ಸಾಲಿನ ಬ್ರಾಹ್ಮಣ ಸಂಘ, ಟಿ.ದಾಸರಹಳ್ಳಿಯ 26ನೇ ಸರ್ವಸದಸ್ಯರ ಸಭೆಯು ಶ್ರೀಮತಿ ಲಕ್ಷ್ಮೀರಘುರವರ ಪ್ರಾರ್ಥನೆಯೊಂದಿಗೆ ಹಾಗೂ ಶ್ರೀ ಕೆ. ಸುಬ್ರಾಯ ನಾಡಿಗ್‌ರವರು ಸ್ವಾಗತ ಕೋರುವ ಮೂಲಕ ಪ್ರಾರಂಭವಾಯಿತು.

ಸಂಘದ ಅಧ್ಯಕ್ಷರಾದ ಶ್ರೀ ಎಸ್.ಜಿ. ಶ್ರೀಧರಮೂರ್ತಿರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಶೇಕಡ 90%ಕ್ಕಿಂತ ಹೆಚ್ಚು ಅಂಕ ಪಡೆದ ಎಸ್.ಎಸ್.ಎಲ್.ಸಿ. ಮತ್ತು ದ್ವಿತಿಯ ಪಿ.ಯು.ಸಿ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಶಸ್ತಿ, ಪ್ರೋತ್ಸಾಹ ಧನ ಹಾಗೂ ಶ್ರೀ ಗಾಯತ್ರಿ ದೇವಿ ಸ್ಮರಣಿಕೆ ಕೊಟ್ಟು ಗೌರವಿಸಲಾಯಿತು. ಸಂಘದ 80+ ವಯಸ್ಸಿನ ಹಿರಿಯ ಸದಸ್ಯರುಗಳನ್ನು ಮತ್ತು ಸಂಘದ ಹಿಂದಿನ ಕಾರ್ಯಕಾರಿ ಮಂಡಳಿಯಲ್ಲಿದ್ದು ಸಂಘದ ಅಭಿವೃದ್ಧಿಗೆ ಶ್ರಮಿಸಿದವರಿಗೂ, ಸಂಘಕ್ಕೆ ಹಣದ ರೂಪದಲ್ಲಿ, ವಸ್ತು ರೂಪದಲ್ಲಿ ಸಹಾಯ ಮಾಡಿದ ಸೇವಾ ದಾನಿ ಸದಸ್ಯರುಗಳನ್ನು ಸನ್ಮಾನಿಸಲಾಯಿತು.

ನಾವೆಲ್ಲರೂ ಸಂತೋಷದಿಂದ ಸಭೆ, ಸಮಾರಂಭಗಳನ್ನು ನಡೆಸುತ್ತಿರುವುದಕ್ಕೆ ಈ ಸಂಘದ ಕಟ್ಟಡಕ್ಕೆ ಕೊಟ್ಟಿರುವ ಸ್ಥಳ ದಾನಿಗಳಾದ ಶ್ರೀಮತಿ ಅನುರಾಧ ಡಾ. ನಾಗೇಂದ್ರರವರನ್ನು ನೆನಪಿಸಿಕೊಳ್ಳುವುದು ಪ್ರತಿ ಸದಸ್ಯರ ಜವಾಬ್ದಾರಿಯಾಗಿರುತ್ತದೆ. ಪ್ರತಿ ವಿಪ್ರ ಬಾಂಧವರು ಸಂಘಟನೆಗೆ ಸಹಕಾರ ನೀಡಬೇಕೆಂದು ಶ್ರೀ ಶ್ರೀಧರಮೂರ್ತಿಯವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ತಿಳಿಸಿದರು. ಸಂಘದ ವತಿಯಿಂದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ವಯೋವೃದ್ಧರಿಗೆ ನೀಡುತ್ತಿರುವ ಮಾಸಾಶನ ನಿಧಿಗೆ ರೂ.6,000=00ಗಳನ್ನು ನೀಡಲಾಯಿತು.

ಈ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎಲ್. ಜ್ವಾಲಾಪತಯ್ಯ, ಉಪಾಧ್ಯಕ್ಷರಾದ ಶ್ರೀಮತಿ ಬಿ.ಆರ್. ಭಾನುಮತಿ, ಖಜಾಂಚಿಯವರಾದ ಶ್ರೀ ಎನ್. ಚಂದ್ರಶೇಖರ್‌ರವರು ಹಾಗೂ ಜಂಟಿ ಕಾರ್ಯದರ್ಶಿಯವರಾದ ಶ್ರೀ ಟಿ.ಕೆ. ಮಂಜುನಾಥ್‌ರವರು, ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಾಧ್ಯಕ್ಷೆ ಶ್ರೀಮತಿ ಬಿ.ಆರ್. ಭಾನುಮತಿಯವರ ವಂದನಾರ್ಪಣೆಯೊಂದಿಗೆ ಸಭೆ ಸಂಪನ್ನವಾಯಿತು. ನಂತರ ಶ್ರೀ ಸತ್ಯನಾರಾಯಣ ಸ್ವಾಮಿಗೆ ಮಹಾಮಂಗಳಾರತಿ ಪ್ರಸಾದ ವಿನಿಯೋಗ ಮತ್ತು ಊಟದ ವ್ಯವಸ್ಥೆ ಮಾಡಲಾಗಿತ್ತು.



# ಬಸವನಗುಡಿ ಬ್ರಾಹ್ಮಣ ಮಹಾಸಭಾಗೆ ನೂತನ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು ಮಹಾನಗರದಲ್ಲಿ ಅತಿ ಹೆಚ್ಚಿನ ಬ್ರಾಹ್ಮಣ ಸಮುದಾಯ ಇರುವ ಬಸವನಗುಡಿಯಲ್ಲಿ ಹಲವು ವರ್ಷಗಳಿಂದ ನಿರಂತರವಾಗಿ ಸಮುದಾಯದ ಸಂಘಟನೆಯನ್ನು ಮಾಡುತ್ತ ಹಲವಾರು ಕಾರ್ಯಕ್ರಮ ಮಾಡುತ್ತಿರುವ ಬಸವನಗುಡಿ ಬ್ರಾಹ್ಮಣ ಮಹಾಸಭಾಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಮಾಡಲು ಸಂಘಕ್ಕೆ ಉತ್ಸಾಹಿ, ಯುವಕರ, ಮಹಿಳೆಯರ ಹಾಗೂ ಆಸಕ್ತಿ ಇರುವವರನ್ನು ಪದಾಧಿಕಾರಿಯಾಗಿ ಆಯ್ಕೆ ಮಾಡಲಾಗಿದೆ.

## ನೂತನ ಪದಾಧಿಕಾರಿಗಳು

ಅಧ್ಯಕ್ಷರು : ಎಸ್.ಆರ್. ಕೃಷ್ಣಮೂರ್ತಿ
ಕಾರ್ಯಾಧ್ಯಕ್ಷರು : ಎಲ್.ವಿ. ಸುನಿಲ್ ಲಕ್ಯ
ಉಪಾಧ್ಯಕ್ಷರು : ಬಿ.ಎನ್. ಜಯಸಿಂಹ, ಬಿ.ಎಸ್. ರವಿಶಂಕರ್
ಪ್ರಧಾನ ಕಾರ್ಯದರ್ಶಿ : ರಥಯಾತ್ರೆ ಸುರೇಶ್
ಖಜಾಂಚಿ : ಡಾ. ಮುರಳೀಧರ ಶರ್ಮಾ,
ಸಂಘಟನಾ ಕಾರ್ಯದರ್ಶಿ : ಹೆಚ್.ಎಸ್. ಶಂಕರ್ ಪ್ರಸಾದ್, ಗೋಪಿನಾಥ್ ಅಯ್ಯಂಗಾರ್, ಹೆಚ್.ಎಸ್. ರಾಘವೇಂದ್ರ, ಹೆಚ್.ಎಸ್. ಸುಧೀಂದ್ರ
ಸಹ ಕಾರ್ಯದರ್ಶಿ : ಬಿ. ರವಿ ಶಂಕರ್, ಜಿ.ದತ್ತಾತ್ರೇಯ, ವೇ॥ಬ್ರ॥ಶ್ರೀ ಮಂಜುನಾಥ ಶಾಸ್ತ್ರಿ, ಕೆ. ಶ್ರೀಧರ್ ಬಾಬು ಭಟ್ಟರ್,
ಅಂತರಿಕ ಲೆಕ್ಕಪರಿಶೋಧಕರು : ಪ್ರಭಾಕರ್
ಮಾಧ್ಯಮ ಸಂಯೋಜಕರು : ಬಿ.ಎಸ್.ಮಲ್ಲಿಕಾರ್ಜುನ್

## ಮಹಿಳಾ ವಿಭಾಗ

ಅಧ್ಯಕ್ಷರು : ಡಾ. ಎಂ.ವಿ. ನಾಗಲಕ್ಷ್ಮಿ
ಕಾರ್ಯದರ್ಶಿ : ಶ್ರೀಮತಿ ಪೂರ್ಣಿಮಾ
ಉಪಾಧ್ಯಕ್ಷರು : ಶ್ರೀಮತಿ ಹೆಚ್.ಎಸ್. ಭಾರತಿ
ಸಹ ಕಾರ್ಯದರ್ಶಿ : ಶ್ರೀಮತಿ ಶ್ರೀಲಕ್ಷ್ಮೀ

## ಯುವ ವಿಭಾಗ

ಅಧ್ಯಕ್ಷರು : ಕೆ.ಎನ್. ರಾಘವೇಂದ್ರ ವಸಿಷ್ಠ
ಕಾರ್ಯದರ್ಶಿ : ಕೆ.ವಿ. ವಿನೀತ್ ಭಾರದ್ವಾಜ್
ಉಪಾಧ್ಯಕ್ಷರು : ಭಾರ್ಗವ ಶರ್ಮಾ
ಸಂಘಟನಾ ಕಾರ್ಯದರ್ಶಿ : ವೆಂಕಟೇಶ್ ಪ್ರಸಾದ್
ಸಹ ಕಾರ್ಯದರ್ಶಿ : ಎಸ್.ಎಸ್. ಅನಿರುದ್ಧ, ಶ್ರೀಕಾಂತ್ ಶರ್ಮಾ,

**ನೂತನ ಪದಾಧಿಕಾರಿಗಳಿಗೆ ಮಹಾಸಭೆಯ ಹಾರ್ದಿಕ ಅಭಿನಂದನೆಗಳು**

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ,
ಸುರತ್ಕಲ್, ಮಂಗಳೂರು.




ತಾ. 23.07.2023 ಭಾನುವಾರದಂದು ಸುರತ್ಕಲ್‌ನಲ್ಲಿ ನಡೆದ ಹಲಸು ಮೇಳದಲ್ಲಿ ಶಿವಳ್ಳಿ ಸ್ಪಂದನದ ಆಹಾರ ಮಳಿಗೆಯ ಉದ್ಘಾಟನೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸಹ ಕಾರ್ಯದರ್ಶಿ ಶ್ರೀಮತಿ ಚೇತನಾ ದತ್ತಾತ್ರೇಯ ಭಾಗವಹಿಸಿದರು. ಮಹಾಸಭಾ ಸದಸ್ಯರಾದ ಶ್ರೀ ದತ್ತಾತ್ರೇಯ, ಶ್ರೀ ಕಿಶೋರ್ ಕುಮಾರ್, ಶ್ರೀ ಕೃಷ್ಣರಾಜ ಭಟ್ ಮತ್ತು ಶ್ರೀಮತಿ ಸುಮಿತ್ರಾ ಜಯರಾಮ್ ಉಪಸ್ಥಿತರಿದ್ದರು.

ನಮ್ಮ ಬ್ರಾಹ್ಮಣರ ಅಡುಗೆಯ ರುಚಿಯನ್ನು ಪ್ರದರ್ಶಿಸುವ, ಮಾರಾಟ ಮಾಡುವ ಒಂದು ಸೂಕ್ತ ವೇದಿಕೆ ಒದಗಿ ಬಂತು .ಮನೆಯಿಂದ ತಯಾರಿಸಿದ ಆರೋಗ್ಯಕರ ಹಾಗೂ ರುಚಿಕರ ಖಾದ್ಯಗಳನ್ನು ಮಹಿಳೆಯರು ಒಟ್ಟು ಸೇರಿ ತಯಾರಿಸಿ ಆಹಾರ ಮಳಿಗೆಯಲ್ಲಿ ಮಾರಾಟ ಮಾಡಿದರು.

## ಚಿಕ್ಕಬಳ್ಳಾಪುರ ಜಿಲ್ಲಾ ಬ್ರಾಹ್ಮಣ ಸಭಾ

ಚಿಕ್ಕಬಳ್ಳಾಪುರ ಜಿಲ್ಲಾ ಬ್ರಾಹ್ಮಣ ಸಭಾ ಕಾರ್ಯಕಾರಿಣಿ ಸಭೆ 15.08.23 ಗುಡಿಬಂಡೆ ತಾಲೂಕ ಎಲ್ಲೋಡು ಶ್ರೀ ಆದಿನಾರಾಯಣ ಸ್ವಾಮಿ ದೇವಸ್ಥಾನ ಸಭಾ ಭವನದಲ್ಲಿ ಅದ್ದೂರಿಯಾಗಿ ಶ್ರೀ ನಾಗಭೂಷಣ ರಾವ್ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭಾದ ಸದಸ್ಯತ್ವ ಹಾಗು ಇತರೆ ವಿಷಯಗಳು ಚರ್ಚಿಸಿ ಮುಂದಿನ ದಿನಗಳಲ್ಲಿ ಜಿಲ್ಲೆಯೇ ಎಲ್ಲಾ ತಾಲೂಕ ಸಂಘಗಳು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ತೀರ್ಮಾನಿಸಲಾಯಿತು, ಮಹಾಸಭಾ ಉಪಾಧ್ಯಕ್ಷರು, ಶ್ರೀ ಶ್ರೀನಾಥ್ ಸಂಘಟನಾ ಕಾರ್ಯದರ್ಶಿ ಶ್ರೀ ಮುರಳೀಧರ, ಸಹ ಕಾರ್ಯದರ್ಶಿ ಪ್ರಕಾಶ್ ಇತರೆ ಎಲ್ಲಾ ಕಾರ್ಯಕಾರಿಣಿ ಸದಸ್ಯರು ಭಾಗವಹಿಸಿದ್ದರು

## ಮಹಾಸಭೆಯ ಉಪಾಧ್ಯಕ್ಷರಾಗಿ
## ಶ್ರೀ ಭಾಸ್ಕರ್ ರಾವ್



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷರಾಗಿ ನಿವೃತ್ತ ADGP ಹಾಗೂ ಮಾಜಿ ಬೆಂಗಳೂರು ಮಹಾನಗರ ಪೋಲೀಸ್ ಕಮಿಷನರ್ ಆಗಿದ್ದ ಶ್ರೀ ಭಾಸ್ಕರ್ ರಾವ್ ಅವರನ್ನು ಮಹಾಸಭಾದ ಅಧ್ಯಕ್ಷರಾದ ಶ್ರೀ ಅಶೋಕ್ ಹಾರನಹಳ್ಳಿ ಅವರು ನೇಮಿಸಿದ್ದಾರೆ, ದಕ್ಷ ಆಡಳಿತಗಾರರಾಗಿದ್ದ ಇವರಿಗೆ ಮೈಸೂರು ಜಿಲ್ಲಾ ಉಸ್ತುವಾರಿ ಜವಾಬ್ದಾರಿಯನ್ನು ನೀಡಲಾಗಿದೆ.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ನೂತನ ಉಪಾಧ್ಯಕ್ಷರಾಗಿ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿಯಾಗಿ ನೇಮಕರಾದ ಶ್ರೀ ಭಾಸ್ಕರ್ ರಾವ್ ಅವರಿಗೆ ಹಾರ್ದಿಕ ಅಭಿನಂದನೆಗಳು.

## ಸಂಸೇವಾ ಸಂಸ್ಥೆ – ಮಲೆ ಮಹದೇಶ್ವರ ಬೆಟ್ಟ 'ಸನಾತನ ಸಂಸ್ಕೃತಿಯ ಪುನರುತ್ಥಾನ ದಿನಾಚರಣೆ'



ದಿನಾಂಕ 21/06/2023 ರಂದು ಮಲೆ ಮಹದೇಶ್ವರ ಬೆಟ್ಟದಲ್ಲಿ ಸಂಸೇವಾ ಸಂಸ್ಥೆಯ ವತಿಯಿಂದ ನಡೆದ "ಸನಾತನ ಸಂಸ್ಕೃತಿಯ ಪುನರುತ್ಥಾನ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಲಕ್ಷ ಸಸಿಗಳನ್ನ ನೆಡುವ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಈ ಸಂದರ್ಭದಲ್ಲಿ ಹೆಸರಾಂತ ಪರಿಸರವಾದಿ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಪರಿಸರ ಚಂದ್ರಶೇಖರ್ ಅವರಿಗೆ ಮೈಸೂರಿನ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್‌ರವರು ಗೌರವಿಸಿ ಸನ್ಮಾನಿಸಿದರು, ಇದು ನಮ್ಮ ಸಮಾಜಕ್ಕೆ ಹೆಮ್ಮೆಯ ವಿಷಯ.

# ಶ್ರೀ ಕ್ಷೇತ್ರ ಮೈಲಾರಲಿಂಗೇಶ್ವರ, ಶ್ರೀ ಶಂಕರ ಸೇವಾ ಸಮಿತಿ ಟ್ರಸ್ಟ್
## ಅಧಿಕ ಮಾಸ ಪ್ರಯುಕ್ತ ಅಖಂಡ ವೀಣಾ ಸಪ್ತಾಹ ಮತ್ತು ಹೋಮಾನುಷ್ಠಾನ ಸಮಾರಂಭ


ಶ್ರೀ ಮೈಲಾರಲಿಂಗೇಶ್ವರ ಸನ್ನಿಧಿಯಲ್ಲಿ


ವಿಶೇಷ ಸನ್ಮಾನಿತರಾದ ದೇವಸ್ಥಾನ ಜೀರ್ಣೋದ್ಧಾರ ಮಾಡಿದ ಶ್ರೀ ಅರುಣ್ ಕುಮಾರ್ ಮುದ್ರಿ ಹಾಗೂ ಉಪಾಧ್ಯಕ್ಷ ಶ್ರೀ ರಾಘವೇಂದ್ರ ಭಟ್

ಶ್ರೀ ಕ್ಷೇತ್ರ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ ಶ್ರೀ ಶಂಕರ ಸೇವಾ ಸಮಿತಿ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಅಧಿಕ ಮಾಸ ಪ್ರಯುಕ್ತ ಅಖಂಡ ವೀಣಾ ಸಪ್ತಾಹ ಮತ್ತು ಹೋಮಾನುಷ್ಠಾನ ಸಮಾರಂಭ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷರಾದ ಅಶೋಕ ಹಾರನಳ್ಳಿ ಅವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸುರೇಶ್ ಪಾಟೀಲ್ ಅವಧೂತರು ಮತ್ತು ಹೊರನಾಡು ಕ್ಷೇತ್ರದ ಧರ್ಮದರ್ಶಿಗಳಾದ ಶ್ರೀ ಭೀಮೇಶ್ವರ ಜೋಶಿ ದಂಪತಿಗಳು ಹಾಗೂ ಮಹಾಸಭಾದ ಉಪಾಧ್ಯಕ್ಷರಾದ ಶ್ರೀ ಬಿಎಸ್ ರಾಘವೇಂದ್ರ ಭಟ್ ಮತ್ತು ಹುವಿನ ಹಡಗಲಿ ತಾಲ್ಲೂಕು ವಿಪ್ರ ಮುಖಂಡರು ಉಪಸ್ಥಿತರಿದ್ದರು.

---



# ಮಹಾಸಭಾಧ್ಯಕ್ಷರಿಗೆ ಅಭಿನಂದನೆ

ಬೇಲೂರು : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ರಾಜ್ಯಾಧ್ಯಕ್ಷರಾದ ಶ್ರೀ ಅಶೋಕ ಹಾರನಹಳ್ಳಿ ಅವರನ್ನು ಬೇಲೂರಿನ ಪುರಸಭಾ ಮಾಜಿ ಅಧ್ಯಕ್ಷ ಶ್ರೀನಿಧಿ ಟಿ.ಎ. ಇತ್ತೀಚೆಗೆ ಭೇಟಿಯಾಗಿ ಅಭಿನಂದನೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ಬ್ರಾಹ್ಮಣ ಯುವ ಸಂಘಟನೆಯ ಕುರಿತಾಗಿ ಹಾಗೂ ಮುಂದಿನ ದಿನಗಳಲ್ಲಿ ಆಯೋಜಿಸಬಹುದಾದ ಕಾರ್ಯಕ್ರಮಗಳ ಕುರಿತು ಚರ್ಚಿಸಿದರು.

ಉದ್ಯಮಿ ಸಮಾಜಸೇವಕ ಹಾಗೂ ಪತ್ರಕರ್ತರಾಗಿರುವ ಶ್ರೀನಿಧಿ ಟಿ.ಎ. ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಯುವ ಘಟಕದ ಸಹ ಸಂಚಾಲಕರನ್ನಾಗಿ ನೇಮಕ ಮಾಡಲಾಗಿತ್ತು. ಅವರ ನೇಮಕಕ್ಕೆ ಸಹಕರಿಸಿದ ವಲಯ ಉಪಾಧ್ಯಕ್ಷರಾದ ಶ್ರೀ ಯಸಳೂರು ಚಂದ್ರಶೇಖರ್ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸಿದ್ದಾರೆ.

---

# ಎಲೆಮರೆಯ ಕಾಯಿ ಗಾಯಕ ಶ್ರೀ ರಾಮಚಂದ್ರ ಡೋಂಗ್ರೆ



'ಮಿಸ್ ಲೀಲಾವತಿ' ಕನ್ನಡ ಚಲನಚಿತ್ರದ ಮಧುರವಾದ, ರಾಷ್ಟ್ರಕವಿ ಕುವೆಂಪು ವಿರಚಿತ 'ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲೀ...' ಎಂಬ ಚಿತ್ರಗೀತೆಯಲ್ಲಿ ಮಹಾನ್ ಗಾಯಕಿ ಎಸ್.ಜಾನಕಿಯವರ ಜೊತೆಯಲ್ಲಿ ಹಾಡಿದ ಎಲೆಮರೆಯಕಾಯಿ ಶ್ರೀ ರಾಮಚಂದ್ರ ಡೋಂಗ್ರೆ.

ಮೂಲತಃ ಕಾರ್ಕಳ ಸಮೀಪದ ಮಾಳದವರಾದ ಇವರು ಮದರಾಸಿನಲ್ಲಿ ದೇವಾಲಯದಲ್ಲಿ ಹಾಗೂ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಸಂಗೀತ ನಿರ್ದೇಶಕರ ಪರಿಚಯದಿಂದ. ಶಿವಮೊಗ್ಗದಲ್ಲಿ ಸಂಗೀತ ಜೂನಿಯರ್ ಸಹ ಮಾಡಿದ್ದ ಇವರಿಗೆ ಆಕಸ್ಮಿಕವಾಗಿ ಈ ಚಿತ್ರಗೀತೆ ಹಾಡುವ ಅವಕಾಶ ಸಿಕ್ಕಿತು. ಸುಮಾರು 1996 ರಿಂದ ದುರ್ಗದಹಳ್ಳಿ ಕಾಲಭೈರವ ದೇವಸ್ಥಾನದಲ್ಲಿ ಅರ್ಚಕರಾಗಿದ್ದ ಇವರು ಈಗ ಅವರಿಗೆ 82 ವರ್ಷ. ಪತ್ನಿ ಸೀತಮ್ಮನವರೊಡನೆ ಈಗ ಜಾವಳಿ ಮೇಲುಕುಡಿಗೆ ಕಾಲಭೈರವ ದೇವಸ್ಥಾನದ ಅರ್ಚಕರಾಗಿ ಸಂತೃಪ್ತ ಜೀವನ ನಡೆಸುತ್ತಿದ್ದಾರೆ.

# ಎಸ್.ಪಿ. ಸತ್ಯನಾರಾಯಣ್ ಅವರಿಗೆ ಸನ್ಮಾನ



ದಾವಣಗೆರೆಯ ಶ್ರೀ ಶಂಕರ ಸಮುದಾಯ ಭವನದಲ್ಲಿ ಬ್ರಾಹ್ಮಣ ಸಮಾಜ ಸೇವಾ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಪಿ. ಸತ್ಯನಾರಾಯಣರಾವ್ ಅವರು ಸಮಾಜದ ಅಭಿವೃದ್ದಿಗಾಗಿ ಮಾಡಿದ ಕೆಲಸ, ಹಾಸ್ಟಲ್ ಕೊಠಡಿಗಳ ನವೀಕರಣ, ಕರೋನಾ ಸಂಕಷ್ಟದಲ್ಲಿ ದಿನಸಿ ಕಿಟ್ ವಿತರಣೆ, ಸದಸ್ಯತ್ವ ನೋಂದಣಿ ಇತ್ಯಾದಿ ಸಮಾಜದ ಅಭಿವೃದ್ದಿಗಾಗಿ ಮಾಡಿದ ನಿರಂತರ ಸೇವೆ ಮತ್ತು 2014 ರಿಂದ 2020ರ ವರೆಗೆ ಸಮಾಜದ ಕಾರ್ಯದರ್ಶಿಯಾಗಿ, 2020ರಿಂದ 2022ರ ವರೆಗೆಅಧ್ಯಕ್ಷರಾಗಿ ಅವರ ಸುದೀರ್ಘ ಸಮಾಜಮುಖಿ ಸೇವೆಯನ್ನು ಪರಿಗಣಿಸಿ ಅವರಿಗೆ ಶುಭ ಹಾರೈಸಿ, ಶ್ರೀಮತಿ ಎಸ್. ರಾಜಲಕ್ಷ್ಮಿ, ಶ್ರೀ ಎಸ್.ಪಿ. ಸತ್ಯನಾರಾಯಣ ರಾವ್ ದಂಪತಿಗಳನ್ನು ಸಮಾಜದ ವತಿಯಿಂದ ಸನ್ಮಾನಿಸಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಡಾ॥ ಎಂ.ಸಿ. ಶಶಿಕಾಂತ್ ರವರು ಸತ್ಯನಾರಾಯಣ್ ರಾವ್ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳನ್ನು ತಿಳಿಸಿ, ಅವರ ಚಟುವಟಿಕೆ ಭರಿತ ಸಮಾಜಮುಖಿ ಕೆಲಸಗಳನ್ನು ಸ್ಮರಿಸಿದರು.

ಬಾಲಕೃಷ್ಣ ವೈದ್ಯ, ಮೋತಿ ಆರ್. ಸುಬ್ರಮಣ್ಯ, ಶೇಷಾಚಲ, ರಾಮಚಂದ್ರ ರಾವ್, ಉಮಾಕಾಂತ ದೀಕ್ಷಿತ್, ಉಮೇಶ್ ಕುಲಕರ್ಣಿ, ಪಿ.ಜಿ. ನಿರಂಜನ್ ಮೊದಲಾದವರು ಪಾಲ್ಗೊಂಡಿದ್ದರು.



## ಟಿ.ಆರ್. ನಿಖಿಲ್‌ಗೆ ಪಿ.ಹೆಚ್.ಡಿ. ಪದವಿ

ತುಮಕೂರಿನ ಸಪ್ತಗಿರಿ ಬಡಾವಣೆ ನಿವಾಸಿ ಟಿ.ಆರ್. ನಿಖಿಲ್ ಅವರು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ ಪಿ.ಹೆಚ್.ಡಿ. ಪದವಿಗೆ ಪಾತ್ರರಾಗಿದ್ದಾರೆ.

"ಎ ಸ್ಟಡಿ ಆಫ್ ಸ್ಟ್ರಂಚ್, ಡ್ಯುರಬಲಿಟಿ ಅಂಡ್ ಥೆಟಿಗ್ ಕ್ಯಾರೆಕ್ಟರಿಸ್ಟಿಕ್ಸ್ ಆಫ್ ಸೆಲ್ಫ್ ಹೀಲಿಂಗ್ ವ್ಯಾಕ್ಟೀರಿಯಲ್ ಕಾಂಕ್ರೀಟ್ ಫಾರ್ ರಿಜಿಡ್ ಪೇವ್‌ಮೆಂಟ್ಸ್" ಎಂಬ ವಿಷಯವಾಗಿ ಇವರು ಮಹಾಪ್ರಬಂಧ ಮಂಡಿಸಿದ್ದರು.

ಟಿ.ಆರ್. ನಿಖಿಲ ಅವರು ತುಮಕೂರಿನ ಹೇಮಾವತಿ ಯೋಜನೆಯ ನಿವೃತ್ತ ಎ.ಇ.ಇ. ಹಾಗೂ ಆರ್ಯನ್ ಹೈಸ್ಕೂಲ್ ಅಸೋಸಿಯೇಷನ್ ನಿರ್ದೇಶಕ ಟಿ.ಎಸ್. ರಾಮಶೇಷ ಮತ್ತು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿ ಸಮಿತಿ ಸದಸ್ಯರೆ ಶ್ರೀಮತಿ ಛಾಯಾ ರಾಮಶೇಷ ದಂಪತಿಯು ಪುತ್ರರು.


ಜಾಹಿರಾತು

**ಅಕ್ಷಯ ವಿಪ್ರ ಮಹಾಸಭಾ**

**ನಂ. 13–1, 12ನೇ ಅಡ್ಡರಸ್ತೆ, ಸಾರಕ್ಕಿ ಜೆಪಿ ನಗರ 1ನೇ ಹಂತ, ಬೆಂಗಳೂರು–78.**

**ಮೇಲ್ವಿಚಾರಕರು ಬೇಕಾಗಿದ್ದಾರೆ**

**25 ರಿಂದ 45 ವರ್ಷದ ವಯೋಮಿತಿಯಲ್ಲಿರುವ ಪುರುಷ ಬ್ರಾಹ್ಮಣ ಅಭ್ಯರ್ಥಿಯು ಕೆಲಸಕ್ಕೆ ಬೇಕಾಗಿದ್ದಾರೆ.**

**ನಿರ್ವಹಿಸಬೇಕಾಗಿರುವ ಕೆಲಸಗಳು :**

ಸಂಘದ ವೆಬ್ಸೈಟ್ ಮತ್ತು ವಧು–ವರಾನ್ವೇಷಣ ಕೇಂದ್ರದ ನಿರ್ವಹಣೆ, ಸಂಘದ ಲೆಕ್ಕಪತ್ರಗಳನ್ನು ನೋಡಿಕೊಳ್ಳುವುದು ಹಾಗೂ ಸಂಘದ ಇತರೆ ಆಡಳಿತಾತ್ಮಕ ಕೆಲಸಗಳ ನಿರ್ವಹಣೆ.


## ಹಾವೇರಿಯಲ್ಲಿ "ಮಹಾಸಭಾ ಭವನ" ಕ್ಕೆ ಉದಾರ ದೇಣಿಗೆ ನೀಡಲು ಮನವಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಹಾವೇರಿ ಜಿಲ್ಲಾ ಘಟಕಕ್ಕೆ ಸರ್ಕಾರದಿಂದ ನಿವೇಶನ ಮಂಜೂರಾಗಿದ್ದು, ರೂ.26 ಲಕ್ಷ ಶುಲ್ಕವನ್ನು ಈಗಾಗಲೇ ಪಾವತಿಸಲಾಗಿದೆ. ಈ ನಿವೇಶನದಲ್ಲಿ "ಸಭಾ ಭವನ" ನಿರ್ಮಾಣ ಮಾಡಲು ಯೋಚಿಸಲಾಗಿದ್ದು, ಜಿಲ್ಲೆಯ ವಿಪ್ರರು, ಸಂಘ–ಸಂಸ್ಥೆಗಳು ಉದಾರವಾಗಿ ದೇಣಿಗೆ ನೀಡಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಮಹಾಸಭಾ ಪ್ರಧಾನ ಕಾರ್ಯದರ್ಶಿಗಳನ್ನು ಸಂಪರ್ಕಿಸಲು ಕೋರಿದೆ.

– ಪ್ರಧಾನ ಕಾರ್ಯದರ್ಶಿಗಳು

| | | |
|---|---|---|
| ಬ್ಯಾಂಕಿನ ವಿವರಗಳು | : | **A/C DETAILS** |
| **A/C NAME** | : | SAPTHARSHI FOUNDATION DONATION |
| **BANK** | : | KARNATAKA BANK LTD. |
| **A/C NO.** | : | 1072500102061901 |
| **IFSC** | : | KARB0000107 |
| **BRANCH** | : | BANASHANKARI 2ND STAGE |

# ಮಹಾಸಭಾ ಕೊಪ್ಪಳ ಜಿಲ್ಲಾ ಘಟಕದ ಸಭೆ

## ಬ್ರಾಹ್ಮಣ ಎನ್ನುವದೇ ಮೊದಲಾಗಲಿ



ನಿಮ್ಮ ಮಠಗಳಿಗೆ ಅನುಗುಣವಾಗಿ ಸಂಪ್ರದಾಯಗಳ ಆಚರಣೆ ಮನೆಗೆ ಸೀಮಿತಗೊಳಿಸಿ ನಾನು ಬ್ರಾಹ್ಮಣ ಎನ್ನುವುದನ್ನು ಸಾರ್ವತ್ರಿಕವಾಗಿ ಗಟ್ಟಿಯಾಗಿ ಪ್ರತಿಪಾದಿಸಿದರೆ ಮಾತ್ರ ನಮ್ಮ ಸಮಾಜ ಸಂಘಟಿತವಾಗಲು ಸಾಧ್ಯ. ಆಗ ಎಲ್ಲ ರೀತಿಯಿಂದಲೂ ಸ್ಥಾನಮಾನಗಳು ಲಭಿಸುತ್ತವೆ. ಆದ್ದರಿಂದ ಬ್ರಾಹ್ಮಣ ಎನ್ನುವುದೇ ಮೊದಲಾಗಬೇಕು ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ಡಿ.ಕೆ. ಮುರಳೀಧರ ಹೇಳಿದರು. ನಗರದಲ್ಲಿ ಮಹಾಸಭಾದ ಮತ್ತು ಘಟಕದ ವತಿಯಿಂದ ನಡೆದ ಬ್ರಾಹ್ಮಣ ಸದಸ್ಯತ್ವ ಅಭಿಯಾನ, ಸಂಘಟನೆ ಕುರಿತು ಸಭೆಯಲ್ಲಿ ಮಾತನಾಡಿದರು.

ನಾವೆಲ್ಲ ಒಂದಾಗಿ ಸಂಘಟನೆ ಮಾಡಿದರೆ ಚುನಾವಣೆ ಸಮಯದಲ್ಲಿ ನಮ್ಮ ಶಕ್ತಿ ತೋರಿಸಲು ಸಾಧ್ಯವಾಗುತ್ತದೆ. ಕಡ್ಡಾಯವಾಗಿ ಮತ ಹಾಕಿದರೆ ಮಾತ್ರ ಬ್ರಾಹ್ಮಣ ಸಮುದಾಯವೂ ಮತಬ್ಯಾಂಕ್ ಆಗಿ ಬೆಳೆಯಲು ಸಾಧ್ಯ. ಸಮಾಜದ ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗೆ ವಿದ್ಯಾನಿಧಿ, ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ಮಹಾಸಭಾ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಮಟ್ಟದಲ್ಲಿಯೂ ಈ ರೀತಿಯ ಕಾರ್ಯಕ್ರಮಗಳನ್ನು ನಡೆಸಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಮಾಜದ ಮುಖಂಡ ವಸಂತ ಪೂಜಾರ ಅವರು 'ಸಂಘಟನೆ ಬಲಗೊಂಡರೆ ಮಾತ್ರ ಸಮಾಜದ ಅಭಿವೃದ್ಧಿ ಸಾಧ್ಯ. ಸಂಘಟನೆಯಿಂದ ನನಗೇನು ಲಾಭ ಎನ್ನುವುದಕ್ಕಿಂತ, ಸಂಘಟನೆಗಾಗಿ ನಾನು ಎನ್ನುವ ಭಾವನೆ ಬಲಗೊಳ್ಳಲಿ. ಪ್ರಸ್ತುತ ಪರಿಸ್ಥಿತಿಯಲ್ಲಿ ಬ್ರಾಹ್ಮಣರು ಅಳಿವಿನಂಚಿಗೆ ಸಾಗುತ್ತಿದ್ದು, ನಮ್ಮ ಸಮುದಾಯ ಉಳಿಯಲು ಎಲ್ಲರೂ ಒಂದಾಗಬೇಕಾದ ಅಗತ್ಯತೆಯಿದೆ ಎಂದು ಪ್ರತಿಪಾದಿಸಿದರು.

ಮಹಾಸಭಾದ ರಾಜ್ಯ ಉಪಾಧ್ಯಕ್ಷ ಡಾ॥ ಆನಂದ್ ಫಡ್ನೀಸ್, ರಾಮರಾವ್ ಗಣಕೆಲ್, ರಾಯಚೂರಿನ ವಿನೋದ ಹಕ್ಕೇರಿ, ಜಿಲ್ಲಾ ಘಟಕದ ಸಂಚಾಲಕ ಹನುಮಂತರಾವ್ ದೇಶಪಾಂಡೆ, ರಾಜ್ಯ ಕಾರ್ಯಕಾರಿ ಸದಸ್ಯರಾದ ಗುರುರಾಜ ಜೋಶಿ, ರಾಘವೇಂದ್ರ ಜಹಗೀರದಾರ, ಸಮಾಜದ ಮುಖಂಡರಾದ ಜಗನ್ನಾಥ ಹುನಗುಂದ, ಕೆ.ಜಿ. ಕುಲಕರ್ಣಿ, ಅನಿಲ ಕುಲಕರ್ಣಿ, ರಮೇಶ್ ಜಹಗೀರದಾರ್ ಹಾಗೂ ವೇಣುಗೋಪಾಲಾಚಾರ್ ಜಹಗೀರದಾರ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

ಜಾಹಿರಾತು

**ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ**

**Sri Srinivasa Nilaya Dharmika Sabha Mandira**

ಸೀತಾ ಸರ್ಕಲ್‌ನಿಂದ ಗಿರಿನಗರಕ್ಕೆ ಹೋಗುವ ಮಾರ್ಗ
ಶ್ರೀ ವಿವೇಕಾನಂದ ಪಾರ್ಕ್ ಎದುರು, ಬೆಂಗಳೂರು-560085

ಶ್ರೀ ಶ್ರೀನಿವಾಸ ನಿಲಯ ಧಾರ್ಮಿಕ ಸಭಾ ಮಂದಿರ ಎಂಬ ನೂತನ ಕಟ್ಟಡದಲ್ಲಿ ಉಪನಯನ, ಮದುವೆ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮ-ಹವನ ಸತ್ಯನಾರಾಯಣ ಪೂಜೆ ಇನ್ನಿತರ ದೇವತಾ ಕಾರ್ಯಗಳು, ವೈಕುಂಠ ಸಮಾರಾಧನೆ, ಅನ್ನ ದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು ಇತರ ಶುಭ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.

ಸ್ಥಳದ ಬಾಡಿಗೆ ಇರುವುದಿಲ್ಲ.

ದಕ್ಷಿಣ ಮತ್ತು ಉತ್ತರ ಭಾರತದ
ಅಡುಗೆಯನ್ನು ಮಡಿಯಲ್ಲಿ ಮಾಡಲಾಗುವುದು
ವಿವರಗಳಿಗಾಗಿ ಕಾರ್ಯಾಲಯವನ್ನು ಸಂಪರ್ಕಿಸಿ
ದೂರವಾಣಿ : 2672 2267, 98866 55755

## ಹರಿಹರಪುರ ಶ್ರೀಗಳ ಚಾತುರ್ಮಾಸ್ಯ ಮಹೋತ್ಸವ – ಯತಿ ಸಮ್ಮೇಳನ

# ನಮ್ಮ ಮಕ್ಕಳಿಗೆ ನಮ್ಮ ಸಂಸ್ಕೃತಿ ಪರಂಪರೆ, ಸದಾಚಾರ ಕಲಿಸಿ


**– ಸ್ವಾಮಿ ವೀರೇಶಾನಂದ ಸ್ವಾಮಿಗಳು**




ದಿನಾಂಕ 11.07.2023ರಂದು ಬೆಂಗಳೂರಿನಲ್ಲಿ ನಡೆಯುತ್ತಿರುವ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮಿಗಳ ಚಾತುರ್ಮಾಸ್ಯ ಮಹೋತ್ಸವ ಸಂದರ್ಭದಲ್ಲಿ ಚಾತುರ್ಮಾಸ್ಯ ಸಮಿತಿ ಆಯೋಜಿಸಿದ ಯತಿ ಸಮ್ಮೇಳನದಲ್ಲಿ ನಾಡಿನ ಹನ್ನೊಂದು ಶ್ರೀ ರಾಮಕೃಷ್ಣ ಮಠಗಳ ಸನ್ಯಾಸಿಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಉದ್ಘಾಟನಾ ಭಾಷಣ ಮಾಡಿದ ತುಮಕೂರು ಶ್ರೀ ರಾಮಕೃಷ್ಣ ಮಠದ ಮುಖ್ಯಸ್ಥರಾದ ಶ್ರೀ ವೀರೇಶಾನಂದರು ಸನಾತನ ಧರ್ಮದ ಸಂರಕ್ಷಣೆಯಲ್ಲಿ ಹರಿಹರಪುರ ಶ್ರೀಮಠವು ಹಮ್ಮಿಕೊಂಡಿರುವ ಕಾರ್ಯಯೋಜನೆಗಳು ಅರ್ಥಪೂರ್ಣ ಹಾಗೂ ಶ್ಲಾಘನೀಯವೆಂದು ತಿಳಿಸಿದರು.

1987 Economic ಎಂಬ ಪತ್ರಿಕೆಯಲ್ಲಿ ಭಾರತದಲ್ಲಿ ಸೆಕ್ಯೂಲರ್ Life ಬಗ್ಗೆ ಲೇಖನ ಹೀಗೆ ಬರೆದಿದ್ದಾರೆ. The Secular Life in India is a big Fraud.

ಸಂಗೀತ ಭಾರತೀಯರ ಆಧ್ಯಾತ್ಮಿಕ ಜೀವನದ ಬಹುಮುಖ್ಯ ಅಂಗವಾಗಿರುವಂತೆ ಹಾಗೂ ಧರ್ಮ, ಅರ್ಥ, ಕಾಮ, ಮೋಕ್ಷಗಳ ಸಾಧನೆಗೆ ಸಂಗೀತವು ಒಂದು ಮಾರ್ಗ ಎಂಬುದಾಗಿ ತ್ಯಾಗರಾಜರಂತ ಮಹಾತ್ಮರು ಹೇಳಿದ್ದಾರೆ. ಪಾಶ್ಚಾತ್ಯ ಸಂಗೀತವು ಇಂದ್ರಿಯಗಳನ್ನು ಪ್ರಚೋದಿಸುವಂತಹ ಕೆಲಸ ಮಾಡುತ್ತಿದೆ. ಶಂಕರಾಚಾರ್ಯರು ಭಗವದ್ಗೀತೆಗೆ ಮುನ್ನುಡಿ ಬರೆಯುತ್ತಾ ಸಂಕ್ಷಿಪ್ತವಾಗಿ,. ಮನುಷ್ಯನ ಸಮಗ್ರ ಬದುಕಿನ ಆಯಾಮದಲ್ಲಿ 2 ಅದ್ಭುತವಾದ ವಿಂಗಡನೆ ಮಾಡಿಕೊಡುತ್ತಾರೆ. ಮನುಷ್ಯನ ಪ್ರವೃತ್ತಿ ಲಕ್ಷಣ ಮತ್ತೊಂದು ನಿವೃತ್ತಿ ಲಕ್ಷಣ. ಪ್ರವೃತ್ತಿ ಜೀವನ ಲಕ್ಷಣ ಎಂದರೆ ಹ್ಯಾಗೆಂದರೆ ಹಾಗೆ ಬದುಕುವುದಲ್ಲ.. ಉದ್ಧಾರೇತ್ ಆತ್ಮ ನಾತ್ಮನಂ. . . ಎಂದಿರುವಂತೆ ತನ್ನನ್ನು ತಾನು ಉದ್ಧಿರಿಸಿಕೊಳ್ಳಬೇಕೆ ಹೊರತು, ಅಧಃಪತನಗೊಳಿಸುವುದಲ್ಲ. ವಿಜ್ಞಾನ ನಿಮ್ಮ ಭೌತಿಕ ಜೀವನ ಮತ್ತು ನಿಮ್ಮ ಲೌಕಿಕ ಜೀವನವನ್ನು ಶ್ರೀಮಂತಗೊಳಿಸಬಹುದು. ಆದರೆ ನಿಮ್ಮ ಮನಸ್ಸಿನಲ್ಲಿ ಮನೆ ಮಾಡಿರುವ ದೋಷ, ದೌರ್ಬಲ್ಯಗಳಿಗೆ ವಿಜ್ಞಾನದಲ್ಲಿ ಪರಿಹಾರವಿಲ್ಲ. ಯಶಸ್ವಿ ಜೀವನಕ್ಕಿಂತ ಮೌಲ್ಯ ಪೂರ್ಣ ಜೀವನವನ್ನು ನಾವು ಗೌರವಿಸುತ್ತೇವೆ. ನಿಮ್ಮ ಮಕ್ಕಳು ಅಂಕ ಪಡೆಯುವುದು ಮುಖ್ಯವೋ ಅಥವಾ ಬದುಕನ್ನು ಅಂಕೆಯಲ್ಲಿಟ್ಟುಕೊಳ್ಳುವುದು ಮುಖ್ಯವೋ ? ನಾವು



ಸನಾತನಿಗಳು, ಹಿಂದೂ ಧರ್ಮೀಯರು ಮೌಲ್ಯಗಳಿಗೆ ಬದುಕಿನ ರೀತಿನೀತಿಗಳಿಗೆ, ಆಚಾರ ವಿಚಾರಗಳಿಗೆ ಮಹತ್ವ ಕೊಡಬೇಕಾಗಿದೆ. ಆದರೆ ನಾವು ಆಸ್ತಿಕರೂ ಅಲ್ಲ, ದ್ವೈತಿಗಳೂ ಅಲ್ಲ. ಅದ್ವೈತಿಗಳೂ ಅಲ್ಲ, ನಾವು ದೇಶಾಚಾರ, ಕಂದಾಚಾರಗಳಲ್ಲಿ ನಲುಗುತ್ತಾ ಇದ್ದೇವೆ. ನಮ್ಮ ಎಲ್ಲಾ ಧಾರ್ಮಿಕ ಚಹರೆಗಳು ಹೊರಗಡೆಯವು. ಸನಾತನ ಧರ್ಮದ ಮೂಲ ತತ್ವ,, ಆಚರಣೆಗಳು ಮಾಯವಾಗಿವೆ. ಅನ್ಯ ವಂಚನೆಗಿಂತ ಆತ್ಮ ವಂಚನೆ ಆಘಾತಕಾರಿಯಾದದ್ದು ನಮ್ಮ ಧರ್ಮದಲ್ಲಿ ನಿಯತ್ತಾದ ಜೀವನ ಕ್ರಮವಿದೆ. ಧಾರ್ಮಿಕ ಕರ್ತವ್ಯವಿದೆ ಈ ಕ್ರಮವನ್ನೇ ಸಂಹಿತೆ ಎಂದು ಕರೆದದ್ದು. ಬಾಲ್ಯ, ಯೌವ್ವನ, ವೃದ್ಧಾಪ್ಯದಲ್ಲಿ ಹೇಗೆ ಬದುಕಬೇಕೆಂಬ ನಿಯಮವಿದೆ. ಅದರಲ್ಲಿ ಬ್ರಹ್ಮಚಾರಿ ಜೀವನ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಇದರ ಸಂರಕ್ಷಣೆ ಮಾಡಬೇಕು. ಸರ್ವ ಸಂಘ ಪರಿತ್ಯಾಗಿಗಳಾದ ಸನ್ಯಾಸಿಗಳ ಮಾರ್ಗದರ್ಶನ ಪಡೆದು ಬದುಕಬೇಕು ಎಂದರು.

ಗೃಹಸ್ಥರಿಗೆ ಶಂಕರರು ಮುಖ್ಯವಾದ ಎರಡು ವಿಷಯಗಳನ್ನು ತಿಳಿಸಿದ್ದಾರೆ. ಧರ್ಮ ಸಂರಕ್ಷಣೆಯಲ್ಲಿ ಗೃಹಸ್ಥನ ಕ್ಷಾತ್ರ ತೇಜಸ್ಸು ಬಹಳ ದೊಡ್ಡ ಪಾತ್ರ ವಹಿಸುತ್ತೆ. ಆದ್ದರಿಂದ ನಿಮ್ಮ ಮಕ್ಕಳನ್ನು ದೈವಶ್ರದ್ಧೆ ಮತ್ತು ದೇಶ ಪ್ರೇಮ ಬದ್ಧರನ್ನಾಗಿಸಿರಿ ಬೆಳೆಸಬೇಕು. ಬ್ರಹ್ಮಸತ್ಯ ಜಗನ್‌ಮಿಥ್ಯ ಎಂಬುದನ್ನು ಹ್ಯಾಗ್ಯಾಗೋ ಅರ್ಥೈಸಿಕೊಂಡು, ನಿರ್ವೀರ್ಯ ಮತ್ತು ನಿಷ್ಕ್ರಿಯವಾಗಿ ಬದುಕುವುದಕ್ಕಿಂತ ಸನಾತನ ಧರ್ಮ ಹೇಳುವ ಸದಾಚಾರ ಸಂಪ್ರದಾಯಗಳನ್ನು ಮಕ್ಕಳಿಗೆ ತಿಳಿಸಿ ಅರ್ಥಪೂರ್ಣವಾಗಿ ಬದುಕುವುದನ್ನು ಕಲಿಸಿ ಎಂದು ಕರೆ ನೀಡಿದರು.

# ಮಹಾಸಭೆಯಲ್ಲಿ 7ನೇ ಉಚಿತ ಆರೋಗ್ಯ ತಪಾಸಣಾ ಶಿಬಿರ



ದಿನಾಂಕ 29.07.2023ರ ಶನಿವಾರದಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಪಿ.ಎಂ. ಸಂತೋಷ್ ಆಸ್ಪತ್ರೆ, ಕೆಂಗೇರಿ, ಬೆಂಗಳೂರು ಇವರ ಸಹಯೋಗದಲ್ಲಿ ವಿಪ್ರ ಮಹಿಳೆಯರಿಗೆ ಉಚಿತವಾಗಿ ಆರೋಗ್ಯ ತಪಾಸಣಾ ಶಿಬಿರವನ್ನು ಮಹಾಸಭೇಯಲ್ಲಿ ಏರ್ಪಡಿಸಲಾಗಿತ್ತು.

ಶಿಬಿರವು ಮಹಾಸಭೆಯ ಆರೋಗ್ಯ ಸೇವೆಗಳ ಉಪಾಧ್ಯಕ್ಷರಾದ ಮತ್ತು ಖ್ಯಾತ ರಕ್ತನಾಳ ತಜ್ಞರಾದ ಶ್ರೀ ಮುರಳೀಧರರವರ ಮಾರ್ಗದರ್ಶನದಲ್ಲಿ ಮತ್ತು ಆರೋಗ್ಯ ಸೇವೆಗಳ ಸಂಚಾಲಕರಾದ ಶ್ರೀ ವೆಂಕಟೇಶ್ ದ್ವಾರಕಾನಾಥ್‌ರವರ ಮುಂದಾಳತ್ವದಲ್ಲಿ ಗಾಯತ್ರೀ ಭವನದ 3ನೇ ಮಹಡಿಯಲ್ಲಿ ಅತ್ಯಂತ ವ್ಯವಸ್ಥಿತವಾಗಿ ನಡೆಯಿತು ಮತ್ತು ವ್ಯವಸ್ಥೆಗೆ ಮಾರ್ಗದರ್ಶನ ಮತ್ತು ಸಹಾಯವನ್ನು ಮಹಾಸಭೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಯುತ ಎಸ್. ಶ್ರೀಧರಮೂರ್ತಿಯವರು ಮತ್ತು ಮುಖ್ಯ ವ್ಯವಸ್ಥಾಪಕರಾದ ಶ್ರೀ ನಾಗರಾಜ್‌ರವರು ನಡೆಸಿಕೊಟ್ಟಿರುತ್ತಾರೆ.



## ತುಮಕೂರಿನಲ್ಲಿ ಸದಸ್ಯತ್ವ ಅಭಿಯಾನ



ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಎಂ.ಆರ್.ಶಿವಶಂಕರ್ ಅವರು ತುಮಕೂರು ಜಿಲ್ಲಾ ಉಸ್ತುವಾರಿಯಾಗಿ ನೇಮಕಗೊಂಡ ನಂತರ ಜಿಲ್ಲಾ ಬ್ರಾಹ್ಮಣ ಸಂಘದ ಸಭೆಯನ್ನು ಸಂಘಟನೆ ಬಲಪಡಿಸುವ ಉದ್ದೇಶದಿಂದ ನಡೆಸಿದರು, ಜಿಲ್ಲೆಯ ಬ್ರಾಹ್ಮಣ ಸಂಘ, ಜಿಲ್ಲೆಯ ಎಲ್ಲಾ ತಾಲ್ಲೂಕಿನ ಬ್ರಾಹ್ಮಣ ಸಂಘಗಳ ಪ್ರಮುಖರು ಭಾಗವಹಿಸಿದ್ದ ಸಭೆಯಲ್ಲಿ ಮಾತನಾಡಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಾಸಭಾಗೆ ಸದಸ್ಯರನ್ನು ಮಾಡಿದರೆ ಮುಂದಿನ ಅಧ್ಯಕ್ಷರ ಚುನಾವಣೆಯಲ್ಲಿ ಇಲ್ಲಿಯೇ ಮತದಾನ ಕೇಂದ್ರ ತೆರೆಯಲಾಗುವುದು ಎಂದು ಉಪಾಧ್ಯಕ್ಷರಾದ ಎಂ.ಆರ್. ಶಿವಶಂಕರ್ ತಿಳಿಸಿದರು, ಇಂದು ಸುಮಾರು 80 ಸದಸ್ಯರನ್ನು ಮಹಾಸಭಾಗೆ ನೋಂದಾಯಿಸಿದ್ದು ಆರು ತಿಂಗಳಲ್ಲಿ ಒಂದು ಸಾವಿರ ಸದಸ್ಯರನ್ನು ನೋಂದಣಿ ಮಾಡಲು ಸಭೆಯಲ್ಲಿ ಎಂ.ಆರ್. ಶಿವಶಂಕರ್, ಜಿಲ್ಲೆಯ ಪದಾಧಿಕಾರಿಗಳಿಗೆ ಮನವಿ ಮಾಡಿದರು, ಜಿಲ್ಲಾ ಅಧ್ಯಕ್ಷರಾದ ಚಂದ್ರಶೇಖರ್, ಮಹಾನಗರ ಪಾಲಿಕೆ ಸದಸ್ಯರಾದ ಸಿ.ಎನ್. ರಮೇಶ್, ರಾಜ್ಯ ಸಂಘಟನಾ ಕಾರ್ಯದರ್ಶಿ ಹೆಚ್.ಎಸ್.ರಾಘವೇಂದ್ರ ಹಾಗೂ ಪ್ರಮುಖ ಪದಾಧಿಕಾರಿಗಳು ಭಾಗವಹಿಸಿದ್ದರು.


## ಸುಮುಖ ಜಾಬ್ಸ್ SUMUKHA JOBS

ಜಾಹಿರಾತು

- ಅಡುಗೆ ಕೆಲಸದವರು (Cook).
- ವೃದ್ಧ ತಂದೆ-ತಾಯಿಯರ ಆರೈಕೆ ಮಾಡುವವರು (Patient Care).
- ಬಾಣಂತಿ ಆರೈಕೆ ಮತ್ತು ಮಗುವಿನ ಆರೈಕ ಮಾಡುವವರು (Nanny).
- ಪೂಜೆ ಸಮಾರಂಭಗಳಿಗೆ ಪುರೋಹಿತರು.
- ಕೇಟರಿಂಗ್ ಸೇವೆ.

ಈ ರೀತಿಯಾದ ಯಾವುದೇ ಸೇವೆಗಳು ಅಗತ್ಯವಿದ್ದಲಿ ಈ ಕೂಡಲೇ ನಮ್ಮನ್ನು ಸಂಪರ್ಕಿಸಿ. ನಮ್ಮಲ್ಲಿ ಕುಶಲ, ಶುಭ್ರ ಮತ್ತು ನಿಮಗೆ ಹೊಂದುವ ಕೆಲಸಗಾರರು ಲಭ್ಯವಿದ್ದಾರೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ.
ಫೋ ನಂ. : 99722-50128/94828-35942

## MATRIMONY ALLIANCE

Required for A kashapa Smartha Boy - Science Graduate - 38 Years - 5.8"-Fair-Legally Divorced-No Issues, Owning Industry at Mysore - Well Settled .
Suitable Girls - Contact : Mob. : 9845114321, Ph : 080-26674312

ಜಾಹಿರಾತು

# ಕೇಂದ್ರ ನಿಧಿಗೆ ದೇಣಿಗೆ



ಬ್ರಾಹ್ಮಣ ಸಂಘ (ಟಿ.ದಾಸರಹಳ್ಳಿ) ಪದಾಧಿಕಾರಿಗಳು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಉಪಾಧ್ಯಕ್ಷರಾದ ಶ್ರೀ ಹೆಚ್.ಎನ್. ಹಿರಿಯಣ್ಣಸ್ವಾಮಿ ಮತ್ತು ಸಂಘಟನಾ ಕಾರ್ಯದರ್ಶಿ ಶ್ರೀ ವೆಂಕಟೇಶ್ ದ್ವಾರಕನಾಥ್ ರವರ ಸಮ್ಮುಖದಲ್ಲಿ ಮಹಾಸಭೆಯ ಕೇಂದ್ರ ನಿಧಿಯಡಿಯಲ್ಲಿ ಅಶಕ್ತ ಮಹಿಳೆಯರಿಗೆ, ವೃದ್ಧರಿಗೆ ನೀಡುತ್ತಿರುವ ಮಾಸಾಶನ ನಿಧಿಗೆ ರೂ.6,000/= ಗಳ ದೇಣಿಗೆ ನೀಡಿದರು. ಮಹಾಸಭೆಯು ಸಂಘಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತದೆ.

# ರಾಜ್ಯದ ಬ್ರಾಹ್ಮಣ ಸಂಘ-ಸಂಸ್ಥೆಗಳ ಬಗ್ಗೆ ಮಾಹಿತಿ ನೀಡಲು ಮನವಿ

ಮಾನ್ಯ ಅಧ್ಯಕ್ಷರು / ಪ್ರಧಾನ ಕಾರ್ಯದರ್ಶಿಗಳು, ಬ್ರಾಹ್ಮಣ ಸಂಘಸಂಸ್ಥೆಗಳು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾಗೆ ಅಧ್ಯಕ್ಷ ರಾಗಿ ಶ್ರೀ ಅಶೋಕ್ ಹಾರನಹಳ್ಳಿ ಅವರು ಆಯ್ಕೆಯಾದ ನಂತರ ರಾಜ್ಯಾದ್ಯಂತ ಬ್ರಾಹ್ಮಣ ಸಂಘಟನೆಗೆ ಎಲ್ಲಾ ಕ್ಷೇತ್ರಗಳಲ್ಲಿ ಚಾಲನೆ ನೀಡಿದ್ದಾರೆ,ವಿವಿಧ ವಿಭಾಗಗಳ ಮೂಲಕ ರಾಜ್ಯದಲ್ಲಿ ಬ್ರಾಹ್ಮಣ ಸಂಘಟನೆಯನ್ನು ಬಲಿಷ್ಠವಾಗಿ ಮಾಡುತ್ತಿದ್ದಾರೆ, ಆದರಂತೆ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬ್ರಾಹ್ಮಣ ಸಂಘಸಂಸ್ಥೆಗಳ ಜೊತೆ ಸಹ ನಿರಂತರವಾಗಿ ಸಂಪರ್ಕ ಸಾಧಿಸಿ, ರಾಜ್ಯ ಮಟ್ಟದ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ನೀಡಲು ಉಪಾಧ್ಯಕ್ಷರಾದ ಹೆಚ್.ಆರ್.ಸುರೇಶ್ ಅವರ ನೇತೃತ್ವದಲ್ಲಿ ಉಸ್ತುವಾರಿಗಳನ್ನು ನೇಮಿಸಿರುತ್ತಾರೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜೊತೆ ಸಂಪರ್ಕ ಇರಲು ತಮ್ಮ ತಮ್ಮ ಸಂಘಗಳ ಪ್ರಸಕ್ತ ವಿಳಾಸ, ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರ ವಿಳಾಸ, ದೂರವಾಣಿ ಸಂಖ್ಯೆ, ಇಮೇಲ್ ಹಾಗೂ ವಿಶೇಷವಾದ ವೃತ್ತಿಯಲ್ಲಿ ಇದ್ದರೆ ಅದರ ಬಗ್ಗೆ ಮಾಹಿತಿಯನ್ನು ಮಹಾಸಭಾಗೆ ನೀಡಬೇಕಾಗಿ ವಿನಂತಿ, ಮಹಾಸಭಾದ ಚಟುವಟಿಕೆಗಳ ಬಗ್ಗೆ ಹಾಗೂ ಅಧ್ಯಕ್ಷರ ಜಿಲ್ಲಾ ಪ್ರವಾಸದ ಸಂದರ್ಭದಲ್ಲಿ ಮಾಹಿತಿಯನ್ನು ನೀಡಲು ಅನುಕೂಲವಾಗುತ್ತದೆ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯರ ಪಟ್ಟಿಯನ್ನು ಪರಿಷ್ಕರಿಣೆ ಮಾಡಲಾಗುತ್ತಿದ್ದು, ತಮ್ಮ ಪ್ರದೇಶದ ಸದಸ್ಯರ ಪಟ್ಟಿಯನ್ನು ಮಹಾಸಭಾದ ವತಿಯಿಂದ ಕಳಿಸಿಕೊಡಲಿದ್ದು, ಸದಸ್ಯರ ಈಗಿನ ವಿಳಾಸ, ಮೊಬೈಲ್ ಸಂಖ್ಯೆ, ಇಮೇಲ್, ಅವರ ವೃತ್ತಿ ಬಗ್ಗೆ ಹಾಗೂ ಸದಸ್ಯರು ನಿಧನರಾಗಿದ್ದರೆ ಅವರ ಬಗ್ಗೆ ಮಾಹಿತಿಯನ್ನು ನೀಡಿದರೆ ಮಹಾಸಭಾದ ಸದಸ್ಯರ ಪಟ್ಟಿಯನ್ನು ಪರಿಷ್ಕರಿಸಿ ಯಾವುದೇ ಗೊಂದಲಕ್ಕೆ ಅವಕಾಶ ಇಲ್ಲದಂತೆ ಸದಸ್ಯರ ಪಟ್ಟಿಯನ್ನು ಪರಿಷ್ಕರಣೆ ಮಾಡಲಾಗುವುದು, ದಯವಿಟ್ಟು ಮಾನ್ಯ ಮಹಾಸಭಾದ ಪದಾಧಿಕಾರಿಗಳು, ಕಾರ್ಯಕಾರಿಣಿ ಸಮಿತಿ ಸದಸ್ಯರು, ಸಂಘಸಂಸ್ಥೆಗಳ ಅಧ್ಯಕ್ಷರು / ಕಾರ್ಯದರ್ಶಿರವರು ನಮಗೆ ಸಂಪೂರ್ಣವಾದ ಮಾಹಿತಿಯನ್ನು ನೀಡಿ ಸಹಕರಿಸಬೇಕಾಗಿ ವಿನಂತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಸಂಘಸಂಸ್ಥೆಗಳ ಹಾಗೂ ಸದಸ್ಯತ್ವ ಪರಿಶ್ಕರಣೆ, ಉಸ್ತುವಾರಿಗಳು, ರಥಯಾತ್ರೆ ಸುರೇಶ್, ರಾಜ್ಯ ಸಂಘಟನಾ ಕಾರ್ಯದರ್ಶಿ, ಮೊ.7353776660, ಟಿ..ಎಲ್.ಎಸ್. ಕುಮಾರ್, ರಾಜ್ಯ ಸಹ ಕಾರ್ಯದರ್ಶಿ, ಮೊ. 9448508080, ಸಿ.ಆರ್. ಅನಂತ ರಾಮ್, ಸಹ ಕಾರ್ಯದರ್ಶಿ, ಮೊ. 9845315999

## ಯಲಹಂಕ ಬ್ರಾಹ್ಮಣ ಸಮಾಜ
## ಶ್ರೀ ಲಲಿತಾ ಲಕ್ಷಾರ್ಚನೆ ಕಾರ್ಯಕ್ರಮ



ದಿನಾಂಕ 06/08/2023 ರಂದು ಬೆಂಗಳೂರಿನ ಯಲಹಂಕದ ಬಿ.ಡಿ.ಕೆ. ಕಲ್ಯಾಣ ಮಂಟಪದಲ್ಲಿ ವಿಶೇಷ ಅತಿಥಿಗಳಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯಾಧ್ಯಕ್ಷರಾದ ಅಶೋಕ್ ಹಾರನಹಳ್ಳಿ, ಉಪಾಧ್ಯಕ್ಷರಾದ ಹಿರಣ್ಣಯ್ಯ ಸ್ವಾಮಿ, ವೈ.ಎ.ಸುಧಾಕರ್ ಬಾಬು, ಕಾರ್ತಿಕ್ ಬಾಪಟ್, ಶಂಕರ್ ಪ್ರಸಾದ್, ಬಿ.ಕೆ. ಪ್ರಕಾಶ್ ಭಾರಧ್ವಾಜ್ ಇತರ ಪದಾಧಿಕಾರಿಗಳು ಯಲಹಂಕ ತಾಲ್ಲೂಕು ಬ್ರಾಹ್ಮಣ ಸಮಾಜದ ವತಿಯಿಂದ ಆಯೋಜಿಸಿದ ಶ್ರೀ ಲಲಿತಾ ಲಕ್ಷಾರ್ಚನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು .

ಈ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯತ್ವದ ಅಭಿಯಾನಕ್ಕೆ ವಿಪ್ರರಿಂದ ಅಭೂತಪೂರ್ವ ಪ್ರತಿಕ್ರಿಯೆ ದೊರಯಿತು.

## ಗುರುಗಳ ದರ್ಶನ ಮತ್ತು ಭಿಕ್ಷಾವಂದನೆ



ಮಹಾಸಭಾ ಉಪಾಧ್ಯಾಕ್ಷ ಶ್ರೀ ಮಹಬಲರಾವ್ ಹಾಗೂ ಕಾರ್ಯಕಾರಿ ಸದಸ್ಯ ಸತೀಶ್‌ರವರ ನೇತೃತ್ವದಲ್ಲಿ ಕೊಪ್ಪ ತಾಲ್ಲೂಕು ವಿಪ್ರ ವೃಂದವು
ಶ್ರೀ ಕ್ಷೇತ್ರ ಶೃಂಗೇರಿ ಶಾರದಾ ಪೀಠ
ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಮಹಾಸ್ವಾಮಿಗಳು
ಹಾಗೂ
ಶಕಾಟ ಪುರ ಮಠದ ಶ್ರೀಗಳಾದ ಶ್ರೀ ವಿದ್ಯಾಭಿನವ ಕೃಷ್ಣಾನಂದ ತೀರ್ಥ ಸ್ವಾಮಿಗಳನ್ನು ಸಂದರ್ಶಿಸಿ,
ಭಿಕ್ಷಾ ಸಮರ್ಪಣೆ ಮಾಡಿ ಆಶೀರ್ವಾದ ಪಡೆದರು.

## ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ.)

### ವಧು-ವರ ಮಾಹಿತಿ ಕೇಂದ್ರ, ಬೆಂಗಳೂರು

**ಸ್ಥಳ : ಗಾಯತ್ರಿ ಭವನ**

ನಂ.3070, 14ನೇ ಅಡ್ಡರಸ್ತೆ, 9ನೇ ಮುಖ್ಯರಸ್ತೆ,
ಬನಶಂಕರಿ 2ನೆ ಹಂತ, ಬೆಂಗಳೂರು-70.
ದೂರವಾಣಿ : 080-26770066/26771695
ಸಮಯ : ಸಂಜೆ 5.00 ರಿಂದ 7.00 ರವರೆಗೆ
ಮಂಗಳವಾರ ಮತ್ತು ಶನಿವಾರ

**ನಿಯಮಗಳು :**

1. ವರ/ವಧು ಅಥವಾ ತಾಯಿ ತಂದೆ ಯಾರಾದರು ಒಬ್ಬರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಸದಸ್ಯರಾಗಿರಬೇಕು.
2. ವಧು/ವರರ ಪೋಸ್ಟ್ ಕಾರ್ಡ್ ಫೋಟೋ ಮತ್ತು ವಿವರ ತರಬೇಕು.
3. ಶುಲ್ಕ ರೂ. 500/=

**ಸಂಚಾಲಕರು** : ಶ್ರೀಮತಿ ಜಯಲತಾ ಸತ್ಯನಾರಾಯಣ್
ಮೊ. : 9916325902

**ಸದಸ್ಯರು**

ಶ್ರೀಮತಿ ನಳಿನಿ ನಟರಾಜ್, ಮೊ. : 9481788495
ಶ್ರೀಮತಿ ಗಾಯತ್ರಿ ರಾವ್, ಮೊ>9980481245

ಜಾಹಿರಾತು

ELEGANT TOURS

ಕಾಶಿ ಯಾತ್ರೆ
(5 ರಾತ್ರಿ - 6 ಹಗಲು)
ಪ್ರತಿ ವಾರ ಕಾಶಿ ಪ್ರವಾಸ ವಿರುತ್ತದೆ



ಹೋಗುವ ಸ್ಥಳಗಳು
ಅಯೋಧ್ಯ
ಪ್ರಯಾಗ್‌ರಾಜ್
ಕಾಶಿ
ಗಯ
ಬೋಧ್‌ಗಯಾ

ಒಬ್ಬರಿಗೆ
Rs. 35000/-
ವಿಮಾನ ದರ ಸಹಿತ




ಕೆಳಕಂಡವು ಒಳಗೊಂಡಿರುತ್ತದೆ
- ಬೆಂಗಳೂರಿನಿಂದ ಹೋಗಲು ಮತ್ತು ಬರಲು ವಿಮಾನ ದರ
- ಎ/ಸಿ ಡೀಲಕ್ಸ್ ರೂಮ್‌ಗಳು (ಇಬ್ಬರಿಗೆ 1 ರೂಮ್)
- ದಿನಕ್ಕೆ 3 ಬಾರಿ ಸಸ್ಯಹಾರಿ ಊಟ ನಮ್ಮದೇ ಅಡುಗೆಯವರಿಂದ

ನಮ್ಮಲ್ಲಿ ಕೈಗೊಳ್ಳುವ ಇತರ ಪ್ರವಾಸಗಳು ಶಿರಡಿ, ಮುಕ್ತಿನಾಥ್, ಚಾರ್‌ಧಾಮ್, ಗುಜರಾತ್, ಮಧ್ಯಪ್ರದೇಶ್, ಅಂಡಮಾನ್ ಮತ್ತು ಅಂತರಾಷ್ಟ್ರೀಯ ಪ್ರವಾಸಗಳು

Call : 90358 05575 | 96060 52828 | 97317 95641

# ಕರ್ನಾಟಕ ಬ್ಯಾಂಕಿನ ಮಾಜಿ ಅಧ್ಯಕ್ಷ ಪಿ. ಜಯರಾಂ ಭಟ್ ನಿಧನ



ಕರ್ನಾಟಕ ಬ್ಯಾಂಕ್ ಮಾಜಿ ಅಧ್ಯಕ್ಷ ಪಿ. ಜಯರಾಂ ಭಟ್ (72) ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಪತ್ನಿ, ಒಬ್ಬ ಪುತ್ರ ಹಾಗೂ ಒಬ್ಬಳು ಪುತ್ರಿಯನ್ನು ಅಗಲಿದ್ದಾರೆ.

1973 ರಿಂದ 2018ರ ನಡುವೆ ಕರ್ನಾಟಕ ಬ್ಯಾಂಕ್‌ವೊಂದರಲ್ಲೇ ನಿರ್ದೇಶಕ ಸೇರಿ ವಿವಿಧ ಹುದ್ದೆಗಳನ್ನು ಕಾರ್ಯನಿರ್ವಹಿಸಿದ ಜಯರಾಮ ಭಟ್ ಅವರು ಬ್ಯಾಂಕಿಂಗ್ ಕ್ಷೇತ್ರದ ವಿಶ್ವಕೋಶದಂತಿದ್ದರು. ಅವರ ಆಡಳಿತ ಅವಧಿಯಲ್ಲೇ ಬ್ಯಾಂಕ್‌ಗೆ ಕಾರ್ಪೊರೇಟ್ ಸ್ಪರ್ಶ ನೀಡಿದ್ದಲ್ಲದೆ, ಸ್ಥಾಪಕರ ದಿನಾಚರಣೆಗೆ ಅಂತರಾಷ್ಟ್ರೀಯ ಮನ್ನಣೆ ತಂದುಕೊಟ್ಟರು.

1951 ನವೆಂಬರ್ 14ರಂದು ಪೊಳಲಿಯಲ್ಲಿ ಜನಿಸಿದ ಜಯರಾಮ ಭಟ್ ಅವರು ವೇದಶಾಸ್ತ್ರಗಳನ್ನು ಕರಗತ ಮಾಡಿಕೊಂಡಿದ್ದರು. ಆದರೆ ವೃತ್ತಿಜೀವನ ನಡೆಸಿದ್ದು ಬ್ಯಾಂಕಿಂಗ್ ಕ್ಷೇತ್ರವನ್ನು 2009ರ ಜುಲೈ 14ರಂದು ಮೊದಲ ಬಾರಿಗೆ ಬ್ಯಾಂಕಿಗೆ ಮುಖ್ಯಕಾರ್ಯ ನಿರ್ವಹಕಾಧಿಕಾರಿ ಆದರು. ಸತತ ಮೂರನೇ ಅವಧಿಗೆ ಮುಖ್ಯಕಾರ್ಯ ನಿರ್ವಹಕಾಧಿಕಾರಿ ಆಗಿ ಮರು ನೇಮಕವಾಗಿ ನಿವೃತ್ತರಾಗಿದ್ದರು. ಪ್ರಸ್ತುತ ಅವರು ಚಿಲ್ಲರೆ ಬ್ಯಾಂಕಿಂಗ್‌ನ ಐಬಿಎ ಸಮಿತಿ ಸದಸ್ಯರಾಗಿದ್ದರು.

ಶ್ರೀಯುತರ ನಿಧನದ ದುಃಖವನ್ನು ಸಹಿಸುವ ಶಕ್ತಿಯನ್ನು ಕುಟುಂಬದವರಿಗೆ ಮತ್ತು ಅವರ ಅಪಾರ ಅಭಿಮಾನಿಗಳಿಗೆ ನೀಡಲೆಂದೂ, ಅವರ ಆತ್ಮಕ್ಕೆ ಸದ್ಗತಿ ದಯಪಾಲಿಸಲೆಂದು ವೇದಮಾತೆ ಗಾಯತ್ರಿ ದೇವಿಯನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯು ಪ್ರಾರ್ಥಿಸುತ್ತದೆ.

ಜಾಹಿರಾತು

## ಶ್ರೀ ವಾದಿರಾಜ ವಿಜಯ ಧಾರ್ಮಿಕ ಮಂದಿರ

# 124, 2ನೇ ಮುಖ್ಯರಸ್ತೆ, ಶ್ರೀ ಮಂಜುನಾಥ ದೇವಸ್ಥಾನದ ಎದುರು, ಸೀತಾ ಸರ್ಕಲ್,
ಬ್ಯಾಂಕ್ ಕಾಲೋನಿ, ಬೆಂಗಳೂರು–560 050.

**ಸ್ಥಳದ ಬಾಡಿಗೆ ಇರುವುದಿಲ್ಲ**

ಉಪನಯನ, ಸೀಮಂತ, ನಾಮಕರಣ, ಹುಟ್ಟುಹಬ್ಬ, ಹೋಮಹವನ,
ಸತ್ಯನಾರಾಯಣ ಪೂಜೆ, ಇನ್ನಿತರ ದೇವತಾ ಕಾರ್ಯಗಳು,
ವೈಕುಂಠ ಸಮಾರಾಧನೆ ಪ್ರಯುಕ್ತ ಅನ್ನದಾನಾದಿಗಳನ್ನು ಹಾಗೂ ಸಂಜೆ ಕಾರ್ಯಕ್ರಮಗಳನ್ನು
ಇತರ ಶುಭ ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಬಹುದಾಗಿದೆ.
ಅಡಿಗೆಯನ್ನು ಮಡಿಯಲ್ಲಿ ಮಾಡಲಾಗುವುದು.

**ವಿವರಗಳಿಗೆ ಕಾರ್ಯಾಲಯವನ್ನು ಸಂಪರ್ಕಿಸಿ :**

**ದೂರವಾಣಿ : 080–26793054 ಮೊಬೈಲ್ 8277433666**

# ದಿವಾನ್ ಸರ್ ಕೆ. ಶೇಷಾದ್ರಿ ಅಯ್ಯರ್

– ಸುರೇಶ್ ಮೂನ



ಕೆ ಶೇಷಾದ್ರಿ ಅಯ್ಯರ್ ಅವರು ಮೈಸೂರು ಸಂಸ್ಥಾನದಲ್ಲಿ ಆಡಳಿತ ನಡೆಸಿದ ಎರಡನೆಯ ದಿವಾನರು. ಹೆಸರಿನಲ್ಲೇ ಇವರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು ಎಂಬುದು ತಿಳಿದುಬರುತ್ತದೆ. ಸಂಸ್ಥಾನದ ಮೊದಲನೆಯ ದಿವಾನರಾಗಿದ್ದ ಸಿ ರಂಗಾಚಾರ್ಲು ಅವರು ಕಲ್ಲಿಕೋಟೆ ಯಲ್ಲಿ ಕಲೆಕ್ಟರ್ ಆಗಿದ್ದಇವರ ಪ್ರತಿಭೆಯನ್ನು ಗುರುತಿಸಿ ಇಲ್ಲಿಗೆ ಕರೆತಂದು ನ್ಯಾಯಾಂಗ ಇಲಾಖೆಯ ಶಿರಸ್ತೇದಾರ್ ರಾಗಿ ನೇಮಕ ಮಾಡಿದರು. ನಂತರ ಹಂತಹಂತವಾಗಿ ಮೇಲೇರಿ 1883 ರ ಡಿಸೆಂಬರ್ 2ನೇ ತಾರೀಕು ಈ ಸಂಸ್ಥಾನದ ದಿವಾನರಾಗಿ ನೇಮಕಗೊಂಡರು. ಆಗ ಅವರಿಗಿನ್ನೂ 36 ವರ್ಷ ವಯಸ್ಸು. ರಾಜ್ಯದ ಆರ್ಥಿಕ ಪರಿಸ್ಥಿತಿ ಅಷ್ಟೇನೂ ಸುಗಮವಾಗಿರಲಿಲ್ಲ. ಮಹಾರಾಜ ಚಾಮರಾಜ ಒಡೆಯರು ಇನ್ನು ಚಿಕ್ಕವರಾಗಿದ್ದರು. ರಾಜಮಾತೆ ಯವರಿಗೆ ಆಡಳಿತದ ವಿಷಯದ ಬಗ್ಗೆ ಹೆಚ್ಚು ಸಂಪರ್ಕವಿರಲಿಲ್ಲ ಹೀಗಾಗಿ, ಎಲ್ಲಿ ಸ್ವಲ್ಪ ತೊಂದರೆಯಾದರೂ ಅದು ದಿವಾನರ ಸಾಮರ್ಥ್ಯಕ್ಕೆ ಸವಾಲಾಗಿ ನಿಲ್ಲುತ್ತಿತ್ತು. ಆದರೆ ಚಿಕ್ಕವಯಸ್ಸಿನ ವರಾದರೂ ಶೇಷಾದ್ರಿ ಅಯ್ಯರ್ ಅವರು ಧೈರ್ಯ ಮತ್ತು ಬುದ್ಧಿವಂತಿಕೆ ಗಳಿಂದ ಬೆಂಗಳೂರು ಮತ್ತು ಕನ್ನಡನಾಡಿನ ಅಭಿವೃದ್ಧಿ ಯೋಜನೆಗಳನ್ನು ಬಹಳ ಸಮರ್ಪಕವಾಗಿ ನಿಭಾಯಿಸಿದರು. ಮಹಾರಾಜ ಚಾಮರಾಜ ಒಡೆಯರ ಕಾಲದಲ್ಲಿ ಹನ್ನೆರಡು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. 1894ರಲ್ಲಿ ಮಹಾರಾಜರು ನಿಧನರಾದರು.

ಆಗ ರಾಜಮಾತೆ ಕೆಂಪನಂಜಮ್ಮಣ್ಣಿಯವರನ್ನು ರೀಜೆಂಟ್ ರಾಣಿಯನ್ನಾಗಿ ಮಾಡಲಾಯಿತು. ವಾಣಿವಿಲಾಸ ಸನ್ನಿಧಾನ ಎಂದೇ ಪ್ರಸಿದ್ಧರಾದ ಇವರು ಇನ್ನೂ 16 ವರ್ಷವಾಗಿದ್ದ ಯುವರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು 1902 ರಲ್ಲಿ ಪಟ್ಟಕ್ಕೇರಲು ಎಲ್ಲ ರೀತಿಯಲ್ಲೂ ಸಿದ್ಧಗೊಳಿಸಬೇಕಾಗಿತ್ತು. ರಾಜ್ಯದ ಆಡಳಿತದ ಕಡೆಯೂ ಗಮನ ಕೊಡಬೇಕಿತ್ತು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಸುಮಾರು 12ವರ್ಷಗಳ ಕಾಲ ಶೇಷಾದ್ರಿ ಅಯ್ಯರ್ ರವರು ಬಹಳ ದಕ್ಷತೆಯಿಂದ ತಮ್ಮ ಕಾರ್ಯವನ್ನು ನಿರ್ವಹಿಸಿ ಸಂಸ್ಥಾನದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಿದರು.

ಇವರು ರಾಜ್ಯದ ಆರ್ಥಿಕ ಪರಿಸ್ಥಿತಿಯ ಸುಧಾರಣೆಯೊಂದಿಗೆ ತಮ್ಮ ಆಡಳಿತವನ್ನು ಪ್ರಾರಂಭಿಸಿದರು. ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾದ ಸಾಲದ ಮರುಪಾವತಿಯನ್ನು 1886 ರವರೆಗೆ ಮುಂದೂಡುವಂತೆ ಬ್ರಿಟಿಷ್ ಸರ್ಕಾರದ ಮನವೊಲಿಸಿದರು. ರೆವಿನ್ಯೂ, ಅಬಕಾರಿ, ಅರಣ್ಯ ಇನ್ನು ಮುಂತಾದ ಇಲಾಖೆಗಳಿಂದ ಹೆಚ್ಚು ಆದಾಯ ಬರುವ ಹಾಗೆ ಸುಧಾರಿತ ಕ್ರಮವನ್ನು ಅನುಸರಿಸಲಾಯಿತು. ರೈಲ್ವೆ ಮಾರ್ಗಗಳನ್ನು ಹೆಚ್ಚು ವಿಸ್ತಾರ ಮಾಡಿದ್ದರಿಂದ ರಾಜಧಾನಿ ಬೆಂಗಳೂರು ಮತ್ತು ರಾಜ್ಯದ ಪ್ರಗತಿಯ ವೇಗ ಹೆಚ್ಚಾಯ್ತು. ಬಟ್ಟೆ ತಯಾರಿಕೆಯ ಬಿನ್ನಿಮಿಲ್, ಯಂತ್ರೋಪಕರಣಗಳ ತಯಾರಿಕೆಯ ಘಟಕ ಮುಂತಾದವುಗಳನ್ನು ಪ್ರಾರಂಭಿಸಿ ಹೆಚ್ಚು ಉದ್ಯೋಗಗಳನ್ನು ಕಲ್ಪಿಸಿ ಉತ್ಪನ್ನಗಳನ್ನು ಜಾಸ್ತಿ ಮಾಡಲಾಯಿತು. ಇವರ ಕಾಲದಲ್ಲಿ ಕೋಲಾರದ ಚಿನ್ನದ ಗಣಿಯ ಪ್ರಾರಂಭ ಹಾಗೂ ವಿದ್ಯುಚ್ಛಕ್ತಿ ಆಗಮನ ನಮ್ಮ ರಾಜ್ಯದ ಪ್ರಗತಿಯ ಇತಿಹಾಸದ ಮೈಲುಗಲ್ಲುಗಳು.

1899ರ ಜೂನ್ ವೇಳೆಗೆ ಶಿವನಸಮುದ್ರದ ಜಲಪಾತದಿಂದ ವಿದ್ಯುತ್ತನ್ನು ಪಡೆಯುವ ಬಗ್ಗೆ ಅಧ್ಯಯನ ಹಾಗೂ ಚರ್ಚೆಗಳು ನಡೆದಿದ್ದವು. ರಾಜ್ಯದ ಡೆಪ್ಯೂಟಿ ಚೀಫ್ ಇಂಜಿನಿಯರ್ ಆಗಿದ್ದ ಕ್ಯಾಪ್ಟನ್ ಎ ಜೆ ಲೋಟ್ ಬಿನೆರೆ ಆರ್.ಇ ಅವರು ನಯಾಗರ ಜಲಪಾತದ ವಿದ್ಯುತ್ ತಯಾರಿಕಾ ಘಟಕದ ಅಧ್ಯಯನ ನಡೆಸಿ ಚಿನ್ನದ ಗಣಿಯ ಯಂತ್ರಗಳನ್ನು ಶಿವನಸಮುದ್ರದಲ್ಲಿ ಉತ್ಪಾದಿಸುವ ವಿದ್ಯುತ್ತಿನಿಂದ ಚಾಲನೆ ಮಾಡುವ ಯೋಜನೆಯನ್ನು ತಯಾರಿಸಿದರು. . ಇದಕ್ಕೆ ರೀಜೆಂಟ್ ರಾಣಿಯವರು ಮತ್ತು ದಿವಾನ್ ಶೇಷಾದ್ರಿ ಅಯ್ಯರ್ ಅವರ ಸಂಪೂರ್ಣ ಬೆಂಬಲವಿತ್ತು. 1900 ರ ಆಗಸ್ಟ್ 10ರಂದು ಯೋಜನೆ ಪ್ರಾರಂಭವಾಗಿ 1902 ರ ಜುಲೈ 30ರಂದು ಕೋಲಾರದ ಚಿನ್ನದ ಗಣಿಗೆ ವಿದ್ಯುತ್ತನ್ನು ಒದಗಿಸಲಾಯಿತು. 1905ರಲ್ಲಿ ವಿದ್ಯುತ್ ಬೀದಿದೀಪಗಳನ್ನು ಬೆಳಗಿಸಿದ ಬೆಂಗಳೂರು ದೇಶದಲ್ಲಿ ಆ ಸೌಲಭ್ಯವನ್ನು ಪಡೆದ ಪ್ರಥಮ ನಗರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ವೇಗವಾಗಿ ವಿಸ್ತಾರಗೊಳ್ಳುತ್ತಿದ್ದ ಬೆಂಗಳೂರಿಗೆ ನೀರನ್ನು ಒದಗಿಸುವುದು ಕಷ್ಟದ ಕೆಲಸವಾಗಿತ್ತು. ಆಗ ದಿವಾನರು ಹೆಸರುಘಟ್ಟದ ದೊಡ್ಡ ಕೆರೆಯಿಂದ ನಗರಕ್ಕೆ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಿದರು. ಇದು ಎಷ್ಟು ಜನಪ್ರಿಯವಾಯಿತೆಂದರೆ ಇದನ್ನು ಜನರು ಶೇಷಾದ್ರಿ ಅಯ್ಯರ್ ಕಾಫಿ ಎಂದೇ ಕರೆಯುತ್ತಿದ್ದರಂತೆ. ಈ ನೀರನ್ನು ಶುದ್ಧಗೊಳಿಸಿ ಮನೆಗಳಿಗೆ ತಲುಪಿಸಲು ಮಲ್ಲೇಶ್ವರದಲ್ಲಿ ಜುಯಲ್ ಫಿಲ್ಟರ್ಸ್ ಎಂಬ ಘಟಕವನ್ನು ಪ್ರಾರಂಭಿಸಿ ಶುದ್ಧಗೊಳಿಸಿದ ನೀರನ್ನು ವಿತರಣೆಗಾಗಿ ಸಂಗ್ರಹಿಸಲು ದೊಡ್ಡ ಸಂಗ್ರಹಗಾರ ವನ್ನು ನಿರ್ಮಾಣ ಮಾಡಲಾಯಿತು. ಇಂದಿಗೂ ಈ ರಚನೆಗಳನ್ನು ಕಾಣಬಹುದಾಗಿದೆ.

ಹಾಗೆಯೇ ಈ ನಾಡಿನ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ತಾಂತ್ರಿಕ ಶಿಕ್ಷಣ ಶಾಲೆಗಳು, ಹೆಣ್ಣುಮಕ್ಕಳ ಶಿಕ್ಷಣ ಶಾಲೆಗಳು ಮುಂತಾದ ಕೇಂದ್ರಗಳನ್ನು ಸ್ಥಾಪಿಸಲಾಯಿತು. ಒಮ್ಮೆ ಆಗಿನ ರೆಸಿಡೆಂಟರು ಸೆಂಟ್ರಲ್ ಕಾಲೇಜಿಗೆ ಭೇಟಿಯಿತ್ತಾಗ ಅಲ್ಲಿ ತೆಗೆದುಕೊಳ್ಳುತ್ತಿದ್ದ ಶುಲ್ಕ ಕಡಿಮೆ ಇದ್ದದ್ದನ್ನು ಕಂಡು ಬೇರೆ ರಾಜ್ಯಗಳಿಂದಲೂ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಿದ್ದರಿಂದ ಅಲ್ಲಿರುವಂತೆ ಇಲ್ಲಿಯೂ ಶುಲ್ಕವನ್ನು ಜಾಸ್ತಿ

ಮಾಡಬೇಕೆಂದು ದಿವಾನರಿಗೆಸೂಚಿಸಿದರು. ಆದರೆ ದಿವಾನರು ಮಹಾರಾಜರಿಗೆ ಆಗಲಿ ತಮಗಾಗಲಿ ನಮ್ಮ ನಾಡಿನ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಹೆಚ್ಚು ಶುಲ್ಕದಿಂದಾಗಿ ಶಿಕ್ಷಣ ಪಡೆಯಲು ಕಷ್ಟವಾಗಬಾರದು ಎಂದು ಈ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಎಂದು ತಿಳಿಸಿದರು. ರೆಸಿಡೆಂಟರು ಸಂತೋಷದಿಂದ ಇಬ್ಬರ ಬಗ್ಗೆಯೂ ಮೆಚ್ಚುಗೆ ಸೂಚಿಸಿದರು.

ಹೀಗೆ ನಮ್ಮ ನಾಡಿನ ಸರ್ವತೋಮುಖ ಪ್ರಗತಿಗಾಗಿ ಇವರು ಕೈಗೊಂಡ ಯೋಜನೆಗಳು ಇನ್ನು ಹಲವಾರಿವೆ. ಹಾಗೆಯೇ ಇವರ ದೀರ್ಘಾವಧಿಯ ಆಡಳಿತದ ಸಮಯದಲ್ಲಿ ಇಲ್ಲಿಗೆ ಅನೇಕ ದೇಶ-ವಿದೇಶಗಳ ಗಣ್ಯಾತಿಗಣ್ಯರು ಆಗಮಿಸಿ ಇಲ್ಲಿನ ಕಾರ್ಯವೈಖರಿಯನ್ನು ಕಂಡು ಅಪಾರ ಮೆಚ್ಚುಗೆ ಸೂಚಿಸಿದ್ದಾರೆ. 1892ರಲ್ಲಿ ಸ್ವಾಮಿ ವಿವೇಕಾನಂದರು ಈ ಸಂಸ್ಥಾನಕ್ಕೆ ಹಾಗೂ ಬೆಂಗಳೂರಿಗೆ ಬಂದದ್ದು ಇವರ ಕಾಲಾವಧಿಯಲ್ಲೇ. ಇವರೊಬ್ಬ ಮಹಾನ್ ಸನ್ಯಾಸಿ ಎಂದು ತಿಳಿದ ಅಯ್ಯರ್ ಚಾಮರಾಜ ಒಡೆಯರಿಗೆ ಸ್ವಾಮೀಜಿಯನ್ನು ಪರಿಚಯಿಸುತ್ತಾರೆ. ಇಬ್ಬರ ಚಿಂತನೆ ಮತ್ತು ಮನೋಭಾವ ಒಂದೇ ರೀತಿ ಇದ್ದಿದ್ದರಿಂದ ಅವರ ನಡುವೆ ಗಾಢವಾದ ಸ್ನೇಹ ಮತ್ತು ಪರಸ್ಪರ ಗೌರವಗಳು ಮೂಡುತ್ತವೆ. ಇದು ಮುಂದೆ ಸ್ವಾಮೀಜಿಯವರು ಶಿಕಾಗೊ ನಗರದಲ್ಲಿ ನಡೆದ ಸರ್ವಧರ್ಮಸಮ್ಮೇಳನದಲ್ಲಿ ಐತಿಹಾಸಿಕ ಭಾಷಣ ಮಾಡಿ ಜಗತ್ಪ್ರಸಿದ್ಧರಾಗಲು ನೆರವಾಯಿತು. ಆಗ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಅಭಿನಂದನಾ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದವರು ಅಯ್ಯರ್‌ರವರೇ .

ಇವರ ಕಾರ್ಯತತ್ಪರತೆ ಮತ್ತು ಮೇಧಾವಿತನವನ್ನು ಮೆಚ್ಚಿ ವಿಕ್ಟೋರಿಯಾ ರಾಣಿಯವರು 1887 ರಲ್ಲಿ ಸಿಎಸ್ ಐ ಬಿರುದನ್ನು 1893 ರಲ್ಲಿ ಕೆಸಿಐ ಬಿರುದನ್ನು ಕೊಟ್ಟು ಸತ್ಕರಿಸಿದರು. ಮೈಸೂರು ಮಹಾರಾಜರು ರಾಜ್ಯ ಧುರಂಧರ ಎಂಬ ಬಿರುದಿನೊಂದಿಗೆ ಸನ್ಮಾನಿಸಿದರು ಡಾ. ಡಿವಿಜಿ ಅವರು ಇವರನ್ನು ಯುರೋಪಿನ ರಾಜ್ಯ ವಿಚಕ್ಷಣರೆಂದು ಪ್ರಸಿದ್ಧರಾದ ಬಿಸ್ಮಾರ್ಕ್ ಮತ್ತು ಕೆವೂರ್ ಅವರಿಗೆ ಹೋಲಿಸಿದ್ದಾರೆ. ಐದನೆಯ ಜಾರ್ಜ್ ದೊರೆ ಇವರ ಸೇವೆಯನ್ನು ಕೊಂಡಾಡಿದ್ದಾರೆ.

ಹೀಗೆ 18 ವರ್ಷಗಳ ಕಾಲ ಸಂಸ್ಥಾನದ ಸೇವೆಸಲ್ಲಿಸಿ 1900 ರ ಆಗಸ್ಟ್ 11ರಂದು ನಿವೃತ್ತರಾಗಿ 1901 ಮಾರ್ಚ್ 18ರಂದು ಅಯ್ಯರ್ ದೈವಾಧೀನರಾದರು. 12 ವರ್ಷಗಳ ನಂತರ ವೈಸ್ ರಾಯ್ ಲಾರ್ಡ್ ಹಾರ್ಡಿಂಜ್ ಕಬ್ಬನ್ ಪಾರ್ಕಿನ ಕೇಂದ್ರ ಗ್ರಂಥಾಲಯದ ಕಟ್ಟಡದ ಮುಂದೆ ಅವರ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಿದರು. ಈ ಕಟ್ಟಡಕ್ಕೆ ಶೇಷಾದ್ರಿ ಅಯ್ಯರ್ ಮೆಮೋರಿಯಲ್ ಸ್ಟೇಟ್ ಸೆಂಟ್ರಲ್ ಲೈಬ್ರರಿ ಎಂದು ಹೆಸರಿಡಲಾಯಿತು ಮೆಜೆಸ್ಟಿಕ್ ಬಳಿಯ ಟಿ ಆನಂದರಾವ್ ವೃತ್ತ ದಿಂದ ಕಬ್ಬನ್ ಪಾರ್ಕ್ ಬಳಿಯ ಕೆಆರ್ ವೃತ್ತದವರೆಗಿನ ಪ್ರಮುಖವಾದ ಮುಖ್ಯರಸ್ತೆಗೆ ಅವರ ಹೆಸರನ್ನೇ ಇಡಲಾಯಿತು. ಒಂದು ಬಡಾವಣೆ ಇವರ ಹೆಸರಿನಲ್ಲಿದೆ. ಇಂದು ಸರ್ಕಾರದ ಅತಿಥಿಗೃಹ ವಾಗಿರುವ ಕುಮಾರಕೃಪಾ ಕಲ್ಲಿನ ಕಟ್ಟಡ ಇವರು ತಮ್ಮ ವಾಸಕ್ಕಾಗಿ ನಿರ್ಮಿಸಿಕೊಂಡಿದ್ದು ಇದರಿಂದಾಗಿ ಆ ಸುತ್ತಲಿನ ಜಾಗಕ್ಕೆ ಕುಮಾರಪಾರ್ಕ್ ಎಂಬ ಹೆಸರೇ ಬಂದಿದೆ. ಒಟ್ಟಿನಲ್ಲಿ ಇವರು ಕನ್ನಡ ನಾಡಿಗೆ ಸಲ್ಲಿಸಿರುವ ಸರ್ವತೋಮುಖ ಸೇವೆಯನ್ನು ಯಾವ ಪೀಳಿಗೆಯವರೂ ಎಂದಿಗೂ ಮರೆಯುವಂತಿಲ್ಲ.

**ಅಖಿಲ ಕರ್ನಾಟಕ ಬ್ರಾಹ್ಮಣ ಮಹಾ ಸಭಾ (ರಿ)**

**ಗಾಯಿತ್ರಿ ಭವನ 3070, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.**

**ಮೊ : 944 26771695**

**ವಿಪ್ರನುಡಿ ಪತ್ರಿಕೆಗೆ ಚಂದಾ ಅರ್ಜಿ**

ಹೆಸರು : ______________________

ವಿಳಾಸ ______________________

______________________

ಸದಸ್ಯತ್ವದ ಸಂಖ್ಯೆ : ____________

ದಯಮಾಡಿ ವಿಪ್ರನುಡಿ ಮಾಸ ಪತ್ರಿಕೆ ಕನ್ನಡ/ಇಂಗ್ಲೀಷ್ – ಅವೃತ್ತಿಗೆ ಮೂರುವರ್ಷದ ಚಂದಾ ಹಣ

**ರೂ. 500/– (ಕನ್ನಡ) ರೂ 1500 (ಇಂಗ್ಲೀಷ್)** ಗಳನ್ನು ನಗದು/ಚೆಕ್/ಯು.ಪಿ.ಐ. ವರ್ಗಾವಣೆ

ಮೂಲಕ ಪಾವತಿಸುತ್ತಿದ್ದೇನೆ.

**ಚಂದಾದಾರರ ಸಹಿ/–**

**AKBMS Membership Account Acc Name :** Akhila Karnataka Brahmana Mahasabha

Bank : Karnataka Bank Ltd A/c No : 1072500102058301I

FSC : KARB0000107BRANCH : BANASHANKARI 2ND STAGE

**ವಿ.ಸೂ. : ಹೆಸರು ವಿಳಾಸ, ಹಣ ಪಾವತಿಸಿದ ದಾಖಲೆ/ಸ್ಕ್ರೀನ್‌ಶಾಟ್/ಯು.ಪಿ.ಐ ಸಂಖ್ಯೆಯನ್ನು**

**ಮೊ.ನಂ. 9945850620 ಸಂಖ್ಯೆಗೆ ವಾಟ್ಸ್ಯಾಪ್ ಕಳುಹಿಸಿ ದೂರವಾಣಿ ಮುಖಾಂತರ ತಿಳಿಸಿ ಚಂದಾದಾರರಾಗಲು ಕೋರಿದೆ.**

# ವೀರಸಾವರ್ಕರ್

**– ಛಾಯಾಪತಿ ಕೆ.ಎನ್.**
(ಮಹಾಸಭಾ ಉಪಾಧ್ಯಕ್ಷರು)



ಅಂಡಮಾನ್ ದ್ವೀಪದಲ್ಲಿರುವ ಕುಖ್ಯಾತ ಸೆಲ್ಯುಲಾರ್ ಜೈಲ್ ಎಂದರೆ ಬ್ರಿಟೀಷರ ಆಳ್ವಿಕೆಯ ಕಾಲದಭಾರತದ ಅವರ ವಿರುದ್ಧಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ ಸಾವಿರಾರು ಅಪ್ರತಿಮ ಹೋರಾಟಗಾರರನ್ನು ಬಂಧನದಲ್ಲಿಟ್ಟು ಪಶುಗಳಿಗಿಂತಲೂ ಕೀಳಾಗಿ ಕಂಡು ಘೋರ ಶಿಕ್ಷೆ ನೀಡುತ್ತಿದ್ದ ಕಾರಾಗೃಹ. ಇಂತಹ ಕುಪ್ರಸಿದ್ಧ ಕಾರಾಗೃಹಕ್ಕೆ ಕೇಂದ್ರ ಸರ್ಕಾರದ ಚುಕ್ಕಾಣಿ ಹಿಡಿದಿರುವ ಪ್ರಧಾನಮಂತ್ರಿ ಸನ್ಮಾನ್ಯ ನರೇಂದ್ರ ಮೋದಿಯವರು ಭೇಟಿ ನೀಡಿದ್ದರು.ಈ ಸೆಲ್ಯುಲಾರ್ ಜೈಲ್ ಮೋದಿ ಅವರಿಗೆ ಒಂದು ಯಾತ್ರಾಸ್ಥಳವಾಗಿತ್ತು.ಕಟ್ಟಾ ರಾಷ್ಟ್ರೀಯವಾದಿ ಹಾಗೂ ಕ್ರಾಂತಿಕಾರಿಗಳೂ ಆದ ವಿನಾಯಕ ದಾಮೋದರ ಸಾವರ್ಕರ್ ಅವರು ಇಡೀ ಒಂದು ದಶಕವನ್ನು ಇಲ್ಲಿನ ಒಂದು ಬೆಳಕುಬೀಳದ ಕೊಳಕು ಕತ್ತಲು ಕೋಣೆಯಲ್ಲಿ ಕಳೆದರು ಎಂದು ನೆನಪಿಸಿಕೊಂಡು ಆ ಕೋಣೆಗೆ ಪ್ರವೇಶಿಸಿ ಸಾವರ್ಕರ್ ಅವರ ಭಾವಚಿತ್ರ ಎದುರಿಗೆ ಕುಳಿತು ಕಣ್ಣು ಮುಚ್ಚಿಕೊಂಡು ಧ್ಯಾನವಂತರಾಗಿ ಸಾವರ್ಕರವನ್ನು ಆಹ್ವಾನಿಸಿಕೊಂಡರು, ನೆನಪಿಸಿಕೊಂಡರು. ಯಾತ್ರಾರ್ಥಿಯ ಭಾವ ಅವರನ್ನು ಆವರಿಸಿತ್ತು. ಭಕ್ತನೊಬ್ಬ ದೇವನ ಮುಂದೆ ಕುಳಿತು ತನ್ನ ಇಷ್ಟ ದೇವತೆಯನ್ನು ಶಾಂತವಾಗಿ ಮೌನವಾಗಿ ಆಹ್ವಾನಿಸಿಕೊಂಡಂತಿತ್ತು.

ಇತ್ತೀಚಿನ ದಿನಗಳಲ್ಲಿ ಬಹು ಚರ್ಚೆಗೆ ಗುರಿಯಾದ ವ್ಯಕ್ತಿ ವೀರ ಸಾವರ್ಕರ್. ಅವರ ತ್ಯಾಗ ಬಲಿದಾನ ರಾಷ್ಟ್ರಭಕ್ತಿ ನಿರಂತರ. ಅಂತರ ಗಂಗಯಂತೆ ಚಿಮ್ಮಿ ಹತ್ತುದಿಕ್ಕಿಗೂ ಹರಿದ ಪ್ರತಿಭೆ ಕರ್ತೃತ್ವ ಅಪಾರ. ವಿದ್ವತ್ತಿನ ಅನುಪಮಾ ಸತ್ವ ,ಮೇರು ವ್ಯಕ್ತಿತ್ವ,ಅಪ್ರತಿಮ ರಾಷ್ಟ್ರಭಕ್ತಿ. ಇದಾವುದನ್ನೂ ಅರಿಯದ, ಅರಿತಿದ್ದರೂ ಬ್ರಾಹ್ಮಣರ ಮೇರು ವೆಕ್ತಿಗಳನ್ನು ಗುರಿಯಾಗಿಸಿ ಅವಹೇಳನ ಮಾಡುವ, ಅಪಮಾನ ಮಾಡುವ ವಿಕೃತ ಬುದ್ಧಿಜೀವಿಗಳು, (Perverted intaligeṇt) ರಾಕೀಯವಾಗಿಯೂ ಬ್ರಾಹ್ಮಣರನ್ನು ದ್ವೇಷಿಸುವ ಬ್ರಹ್ಮದ್ವೇಶಿ ರಾಜಕಾರಣಿಗಳು,ವಾಮಪಂತೀಯರು,ಆಸೆ ಆಮಿಷಗಳಿಗೆ ಬಲಿಯಾಗಿ ಸತ್ಯದರ್ಶನ ವಿಚಾರಗಳನ್ನು ತಿರುಚಿ ಬರೆಯುವ ಲೇಖಕರು ಸಾವರ್ಕರ್ ಅವರನ್ನು ಕೀಳಾಗಿ ಕಂಡಿದ್ದಾರೆ. ಬಿಡುಗಡೆಗಾಗಿ ಬ್ರಿಟೀಷರಿಗೆ ಕ್ಷಮಾಪಣೆ ಪತ್ರ ಬರೆದಿದ್ದರು ಎಂದು ಸುಳ್ಳು ಆಪಾದನೆ ಮಾಡುತ್ತಾರೆ.ಇನ್ನೊಂದಡೆ ಒಬ್ಬರು ಸ್ವಾತಂತ್ರ್ಯ ಹೋರಾಟಗಾರ ಎಂದು ಎದೆಯುಬ್ಬಿಸಿ ಹೇಳುವ ವ್ಯಕ್ತಿ ಅವರೇ ಹೇಳುವಂತೆ ಅವರು ಒಂದು ಇಲಿಯ ಬಾಲಕ್ಕೆ ಬಾಂಬ್ ಕಟ್ಟಿ ಬ್ರಿಟಿಷರ ಸಭೆಗಳಿಗೆ ಬಿಡುತ್ತಿದ್ದರಂತೆ. ಅವರೂ ಸಹ ಸಾವರ್ಕರ್ ಬಗ್ಗೆ ಕೀಳಾಗಿ ಮಾತನಾಡಿದ್ದರು. ಸಾವರ್ಕರರು ಇಲಿಯ ಬಾಲಕ್ಕೆ ಬಾಂಬ್ ಕಟ್ಟಿದವರಲ್ಲ ಬದಲಿಗೆ ಬ್ರಿಟಿಷರ ಎದೆ ನಡಗಿಸುವಂಥ ಅನೇಕ ಕ್ರಾಂತಿಕಾರಿಗಳೆಂಬ ಬಾಂಬನ್ನು ತಯಾರಿಸಿದವರು.ಆ ಇಲಿ ಬಾಲದ ಬಾಂಬಿನ ಮಹಾಶಯರು ಕೂಡ ಸಾವರ್ಕರ್ ಅವರು ಕ್ಷಮಾಪಣೆ ಪತ್ರ ಬರೆದಿದ್ದರು ಎಂದು ಉದ್ಘೂಧಿಸಿದ್ದಾರೆ.ಇದರ ಬಗ್ಗೆ ಎಸ್ ಎಲ್ ಭೈರಪ್ಪನವರು ಸತ್ಯ ಸಂಗತಿಯನ್ನು ಹೊರಗೆಡೆವಿದರು.ಸಾವರ್ಕರರಿಗೆ 50 ವರ್ಷ ಕಾಲ ಪಾನಿ ಜೈಲು ಶಿಕ್ಷೆಯನ್ನು ವಿಧಿಸಲಾಗಿತ್ತು ಆಗ ಬ್ರಿಟಿಷರು ಇನ್ನು ಮುಂದೆ ರಾಜಕೀಯಕ್ಕೆ ಹೋಗುವುದಿಲ್ಲ ಎಂದು ಬರೆದುಕೊಡುವಂತೆ ಕೇಳಿದ್ದರು. ಬಹಳ ವರ್ಷಗಳು ಜೈಲುವಾಸ ಅನುಭವಿಸಿ ಆಗಿದೆ ರಾಜಕೀಯವಾಗಿ ನಾನು ಏನು ಮಾಡುವುದಿದೆ ಎಂದು ಸಾವರ್ಕರ್ ಅವರು ಬರೆದುಕೊಟ್ಟಿದ್ದರು.ಅದನ್ನೇ ಕ್ಷಮಾಪಣೆ ಪತ್ರ ಎಂದು ಹೇಳಲಾಗುತ್ತಿದೆ.ಇವರು ಮಾತ್ರವಲ್ಲ ಅನೇಕ ಕ್ರಾಂತಿಕಾರಿಗಳು ಬರೆದು ಕೊಟ್ಟಿದ್ದರು. ಅಂದಿನ ದಿನಗಳಲ್ಲಿ ಇದು ರೂಢಿಯಾಗಿತ್ತು. ಬೇರೆಯವರನ್ನ ಮುಕ್ತ ಮಾಡಿದರೂ ಸಾವರ್ಕರ್ ಅವರನ್ನು ಬಿಡುಗಡೆ ಮಾಡುತ್ತಿರಲಿಲ್ಲ.

ಸ್ವಾತಂತ್ರದ ಪವಿತ್ರ ಯಜ್ಞಜ್ವಾಲೆಯಲ್ಲಿ ದೇಹ ಒಟ್ಟಿದವರು, ರಾಷ್ಟ್ರಕ್ಕಾಗಿ ಹಗಲಿರಳು ತಳಮಳಿಸುವ ಶೂರನಿಗೆ ಸೆರೆಮನೆ ಮತ್ತು ಸಂಕೋಲೆಗಳೇ ಆಭರಣ ಎಂದು ಭಾವಿಸಿದ್ದರು. ಸಾವರ್ಕರ್ ಅವರು ತಮ್ಮ ಜೀವನ, ಮನೆ, ಮಠ, ಪತ್ನಿ, ಎಂಬ ಮೋಹಕ್ಕೆ ಒಳಗಾಗದೆ ತಾಯಿ ಭಾರತೀಯ ಮುಕ್ತಿಗೆ ತಮ್ಮ ಇಡೀ ಜೀವನವನ್ನು ಸುಟ್ಟುಕೊಂಡರು.

ಸಾವರ್ಕರವರು ಮಾತ್ರವಲ್ಲ ಅವರ ಹಿರಿಯಣ್ಣ ಗಣೇಶ ಸಾವರ್ಕರ್ ತಮ್ಮ ನಾರಾಯಣ ಸಾವರ್ಕರ್ ಕೂಡ ಹೋರಾಟದಲ್ಲಿ ಧುಮಿಕಿ ಚಡಿ ಏಟು ಕಿರುಕುಳ ಜೈಲುವಾಸ ಅನುಭವಿಸಿ ಪರಿಣಾಮ ರೋಗರುಜನೆಗಳಿಂದ ಸಾವನ್ನಪ್ಪಿದವರು.

ಸಾವರ್ಕರ್ ಅಣ್ಣ ಗಣೇಶನಿಗೆ ಬ್ರಿಟೀಷ್ ಅಧಿಕಾರಿಯೊಬ್ಬ ಒದ್ದ ರಭಸಕ್ಕೆ ಅವರ ವೃಷಣಗಳು ಊತಗೊಂಡು ಯಾತನೆ ಅನುಭವಿಸಿದರು.ಸಾವರ್ಕರರ ಮನೆಯ ಮಾತೆಯರು ಕಮ್ಮಿ ಏನಿಲ್ಲ,ತಮ್ಮಲ್ಲಿದ್ದ ಒಡವೆ ವಸ್ತ್ರಗಳನ್ನು ಮಾರಿ ಕ್ರಾಂತಿ ಕಾರ್ಯಕ್ಕೆ ಹಣ ಸಹಾಯ ಮಾಡಿದವರು. ಗಾಂಧಿ ನೆಹರು ಪಟೇಲ್ ಮುಂತಾದ ಗಣ್ಯರು ಅನುಭವಿಸಿದ ಸೆರೆವಾಸ ಸರಳವಾಗಿತ್ತು. ಆದರೆ ಸಾವರ್ಕರ್ ರವರು ಅನುಭವಿಸಿದ ಸೆರವಾಸ ನರಕ ಯಾತನೆಗಿಂತ ಕಠಿಣ ಪದ ಹುಡುಕಬೇಕಾಗಿದೆ.ಬ್ರಿಟಿಷ್ ಅಧಿಕಾರಿಗಳ ಹತ್ಯೆಯ ಆಪಾದನೆ ಮತ್ತು ರಾಜದ್ರೋಹದ ಆಪಾದನೆಗೋಸ್ಕರ ಸಾವರ್ಕರ್ ಅವರಿಗೆ ಐವತ್ತು ವರ್ಷ ಕರಿನೀರಿನ ಆಜನ್ಮಕಠಿಣ ಶಿಕ್ಷೆ. ಸಾವರ್ಕರ್ ಅವರಿಗೆ ಅಂಡಮಾನ್ನಲ್ಲಿರುವ ಸೆಲ್ಯುಲಾರ್ ಜೈಲಿನಲ್ಲಿ ಶಿಕ್ಷೆ ಅನುಭವಿಸಬೇಕೆಂದು ಬ್ರಿಟಿಷ್ ನ್ಯಾಯಾಲಯ ತೀರ್ಪು ಕೊಟ್ಟಿತು.

ಸಾವರ್ಕರ್ ಅವರನ್ನು ನಿಂದಿಸುವ ಅಪಮಾನಿಸುವ ತುಚ್ಚವಾಗಿ ಕಾಣುವ ವಿಚಾರ ವ್ಯಾದಿಗಳೆ, ವಿಕೃತ ಬುದ್ಧಿಜೀವಿಗಳೇ, ಕಾಮಾಲೆ ಕಣ್ಣಿನ ಬ್ರಾಹ್ಮಣ ದ್ರೋಹಿಗಳೆ, ಕೆಲ ರಾಜಕಾರಣಿಗಳೇ ಸೆಲ್ಯೂಲರ್ ಜೈಲು ಕರಿನೀರು ಶಿಕ್ಷೆ (ಕಾಲ ಪಾನಿ ಶಿಕ್ಷೆ )ಎಂದರೇನು, ಸಾವರ್ಕರ್ ಏನೇನು ಶಿಕ್ಷೆ ಅನುಭವಿಸಿದರು ಎಂಬ ಚಿತ್ರಣ ನೋಡಿಯಾದರೂ ನಿಮ್ಮ ಕೊಳಕು ಮನಸ್ಸಿನ ಚಿಂತನೆಗಳಿಗೆ ಪೂರ್ಣ ವಿರಾಮ ಹಾಕಿ.

ಇಂಗ್ಲೆಂಡಿನಲ್ಲಿ ಮತ್ತು ಭಾರತದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಯುವಕರನ್ನು ಸಂಘಟಿಸಿ ಕ್ರಾಂತಿಕಾರ್ಯಗಳನ್ನು ಮಾಡಿಸುತ್ತಿದ್ದ ಆಪಾದನೆಯ ಮೇರೆಗೆ ಬಂಧಿಸಿ ಸಾವರ್ಕರನ್ನು ಭಾರತಕ್ಕೆ ಕರೆತರುತ್ತಿದ್ದರು. ಜೈಲು ಶಿಕ್ಷೆ ಖಚಿತ ಎಂದು ತಿಳಿದ ಸಾವರ್ಕರ್ ಜೈಲಿನಲ್ಲಿ ಮಾಡುವುದೇನಿದೆ ಹೊರಗಿದ್ದು ಸ್ವಾತಂತ್ರ್ಯಕ್ಕೆ ಹೋರಾಟ ಮಾಡಬೇಕು ಎಂಬ ಸದಚ್ಛೆಯಿಂದ ಬಂಧನದಿಂದ ತಪ್ಪಿಸಿಕೊಳ್ಳುವ ಯೋಚನೆ ಬಂದಿತೇವಿನಃ ಪುಕ್ಕಲುತನದಿಂದಲ್ಲ. ಸಾವರ್ಕರ್ ಅವರನ್ನು ಹೊತ್ತ ಎಸ್ ಎಸ್ ಮಾರಿಯ ಎಂಬ ಹಡಗು 1910 ಜುಲೈ 5ರಂದು ಇಂಗ್ಲೆಂಡಿನಿಂದ ಹೊರಟಿತು. 1910 ಜುಲೈ 8ರಂದುಫ್ರಾನ್ಸಿನ ಮಾರ್ಸೆಲ್ಸ್ ಎಂಬ ಬಂದರಿನಲ್ಲಿ ದುರಸ್ತಿಗಾಗಿ ಲಂಗರು ಹಾಕಿ ಹಡಗು ನಿಂತಿತ್ತು.ಆಗ ಸಾವರ್ಕರ್ ತಪ್ಪಿಸಿಕೊಳ್ಳಲು ಯೋಚಿಸಿ ಶೌಚಾಲಯದ ಕಿರು ಕಿಟಕಿಯಿಂದ ತೂರಿ ಮೈಯೆಲ್ಲಾ ಗಾಯ ಮಾಡಿಕೊಂಡು ಹಾರಿ ಈಜಿ ದಡ ಸೇರಿದರು. ದುರಾದೃಷ್ಟ ಅವರನ್ನು ಮತ್ತೆ ಹಿಡಿದು ಭಾರತಕ್ಕೆ ಕರೆತಂದರು. ಭಾರತದ ಬ್ರಿಟಿಷ್ ನ್ಯಾಯಾಲಯ 70 ದಿನಗಳ ವಾದ ವಿವಾದದ ನಂತರ ಅವರಿಗೆ 50 ವರ್ಷಗಳ ಕರಿ ನೀರು ಶಿಕ್ಷೆ ವಿಧಿಸಿತು. ಸಾವರ್ಕರ್ ಸೆಂಟ್ರಲ್ ಬಾಂಬೆಜೈಲಿನಲ್ಲಿ ಕೆಲದಿನವಿದ್ದರು. ಆಗಲೇ ಸಾವರ್ಕರ್ ಪತ್ನಿ ಯಮುನಬಾಯಿ ತನ್ನ ಸೋದರನ ಜೊತೆ ನೋಡಲು ಜೈಲಿಗೆ ಬಂದರು, ಪತಿಯನ್ನು ನೋಡಿ ದುಃಖ ಉಮ್ಮಳಿಸಿತು. ಇಂಗ್ಲೆಂಡಿನಿಂದ ನನ್ನ ಗಂಡ ಸೂಟು ಬೂಟುಧರಿಸಿ ಬ್ಯಾರಿಸ್ಟರ್ ಆಗಿ ಬರುವ ಬದಲು ಕೈದಿಯಾಗಿ ಕೈಗೆ ಕೋಳ, ಮೈಗೆ ಅರ್ಧ ಬಿಳಿಯಂಗಿ, ಚಡ್ಡಿ ಧರಿಸಿ ಜೈಲಿನಲ್ಲಿದ್ದಾರೆ. ಎಂದು ದುಃಖಪಟ್ಟರು. ಅಂತೂ ಸಾವರ್ಕರ್ ಅವರನ್ನು ಅಂಡಮಾನ್ ಜೈಲಿಗೆ ಕರೆದುಕೊಂಡು ಹೋಗುವ ದಿನ ಬಂದಿತು. ಬಾಂಬೆಯಿಂದ ಮದರಾಸಿಗೆ ಕರೆದುಕೊಂಡು ಬಂದ ಬ್ರಿಟಿಷರು ಅಲ್ಲಿಂದ ಅಂಡಮಾನ್ ಗೆ ತೆರಳುವ ಎಸ್. ಎಸ್. ಮಹಾರಾಜ ಹಡಗನ್ನು ಹತ್ತಿಸಿದರು. ಕತ್ತಿಗೆ 1960ನೇ ವರ್ಷ ಎಂದು ಬರೆದಕಬ್ಬಿಣದ ಬಿಲ್ಲೆಯನ್ನು ನೇತು ಹಾಕಿದ್ದರು. ಅದು ಅವರ ಬಿಡುಗಡೆ ವರ್ಷ. ಜೊತೆಗೆ ಜೈಲಿನ ಉಡಪನ್ನು ನೀಡಿದರು. ಕಳ್ಳರು ,ಕೊಲೆಗಡುಕರು,ಪಾತಕಿಗಳ ಜೊತೆಯಲ್ಲಿ ಪ್ರವಾಸ. ಇವರನ್ನ ಇರಿಸಿದ ಕೊಠಡಿ ಹೇಗೆತೆಂದರೆ 30 ಜನ ಇರಬೇಕಾದ ಕೊಠಡಿ 50 ಜನರಿಂದ ತುಂಬಿತ್ತು. ಅಲ್ಲಿ ಗಾಳಿ ಸರಿಯಾಗಿ ಸಿಗದೇ ಉಸಿರಾಟದ ತೊಂದರೆಯಾಯಿತು, ಬ್ರಾಂಕೈಟಿಸ್ ಸಮಸ್ಯೆ ಕಾಣಿಸಿಕೊಂಡಿತು. ಮಲಗುವಾಗ ಎಲ್ಲರೂ ಒತ್ತೊತ್ತಿಗೆ ಮಲಗಿಕೊಂಡು ಎಲ್ಲರ ಕೈಕಾಲುಗಳು ಬೇರೆಯವರ ಮೇಲೆ ಬಿದ್ದಿರುತ್ತಿತ್ತು.ಸಾವರ್ಕರರು ಇದರಿಂದ ಹೊರತಾಗಿರಲಿಲ್ಲ. ದುರ್ಗಂಧದ ಕೊಠಡಿ ಎಲ್ಲರೂ ಮಲಮೂತ್ರ ಮಾಡಲು ಮೂಲೆಯಲ್ಲಿ ಒಂದು ಬಕೆಟ್ ಅದರ ಗಬ್ಬು ವಾಸನೆ. ಒಬ್ಬ ಪಾತಕಿಯಂತೂ ಸಾವರ್ಕರ್ ಎದುರಿಗೆ ಬಕೇಟಿನಮೇಲೆ ಕುಳಿತು ಮಲ ವಿಸರ್ಜನೆ ಮಾಡಿ ಹೋದ. ಇವರಿಗೆ ಹೊಟ್ಟೆ ತೊಳಸಿದಂತಾಗಿ ಕಣ್ಣು ಮುಚ್ಚಿಕೊಂಡರು ಬೇರೆ ದಾರಿಯೇ ಇರಲಿಲ್ಲ, ಸಹಿಸಿಕೊಂಡಿರಬೇಕಿತ್ತು ಹೀಗೆ ಸಾವರ್ಕರರು ನಾಲ್ಕು ದಿನಗಳ ಕಾಲ ಗಬ್ಬು ವಾಸನೆಯನ್ನೇ ಕುಡಿದುಕೊಂಡು ಇರಬೇಕಾಯಿತು. 1819 ರಲ್ಲಿ ಬ್ರಿಟಿಷರು ತಮ್ಮ ಹೊಸಹುತುವಾಗಿ ಪರಿವರ್ತಿಸಿದ ಅಂಡಮಾನ್ ದ್ವೀಪದಲ್ಲಿ ಸೆಲ್ಯುಲಾರ್ ಜೈಲು ನಿರ್ಮಿಸಿದರು. 1857ರ ಪ್ರಥಮ ಸ್ವಾತಂತ್ರ ಸಂಗ್ರಾಮದಲ್ಲಿ ಹೋರಾಡಿದ ಕ್ರಾಂತಿಕಾರಿಗಳನ್ನು ಈ ಸೆಲ್ಯುಲಾರ್ ಜೈಲಿಗೆ ತಳ್ಳಿದರು.ಸಾವರ್ಕರ್ ಇಲ್ಲಿಗೆ ಬರುವ ಹೊತ್ತಿಗಾಗಲೇ ಕೈದಿಗಳನ್ನು ಕೂಡಿಹಾಕಲು 600 ಸೆಲ್ ಗಳು ನಿರ್ಮಾಣವಾಗಿತ್ತು. ಪ್ರತಿಯೊಂದು ಸೆಲ್ ಏಳುವರೆ ಅಡಿ ಉದ್ದ ಹದಿಮೂರೂವರೆ ಅಡಿ ಅಗಲದ ಕತ್ತಲು ಕೋಣೆ.ಎತ್ತರದಲ್ಲಿ ಒಂದು ಸಣ್ಣ ಬೆಳಕಿನ ಕಿಂಡಿ. ಅದಕ್ಕೆ ಭದ್ರವಾದ ಕಬ್ಬಿಣದ ಸಲಾಕೆ.ಎಲ್ಲಾ ಸೆಲ್ಗಳಲ್ಲಿ ಮಲಗಲು ಒಂದು ಮರದ ತುಂಡು ಹಾಕು. ಮಲವಿಸರ್ಜನೆ ನಂತರದ ಅಗತ್ಯಕ್ಕೆ ಒಂದು ಸಣ್ಣ ಮಡಿಕೆ. ಬೀಗ ಹಾಕಲು ಹೊರಗಡೆಯಿಂದ ಒಂದು ಚಿಲಕ. ಪಡಸಾಲೆಯಲ್ಲಿ ಒಂದು ಅಂಗಳ ಅದರಲ್ಲಿ ಕೈದಿಗಳಿಂದ ಕತ್ತೆ ಚಾಕರಿ ಮಾಡಿಸಲು ವರ್ಕ್ಶಾಪ್‌ಗಳು ಅಲ್ಲೊಂದು ಸಣ್ಣ ಟ್ಯಾಂಕ್ ಅದಕ್ಕೆ ಒಂದು ನಲ್ಲಿ.ಒಂದೊಂದು ಅಂಗಳದಲ್ಲೂ ಒಂದೇ ಶೌಚಾಲಯ. ಇಲ್ಲಿದ್ದ ಜಿಲ್ಲಾಧಿಕಾರಿ ಡೇವಿಡ್ ಬ್ಯಾರಿ ಎಂತಹ ಕ್ರೂರಿ ಎಂದರೆ ಎಲ್ಲಾ ಜೈಲುವಾಸಿಗಳು ಅವರನ್ನು ಕಂಡರೆ ಹೆದರಿ ಥರಟ್ಟುತ್ತಿದ್ದರು,ನಡುಗು ತ್ತಿದ್ದರು. ಅವನು ಎಲ್ಲರಿಗೂಈರಿತಿಹೆದರಿಸುತ್ತಿದ್ದ. ನೋಡಿ ಸುತ್ತಲೂ ಗೋಡೆಯೇನೋ ಎತ್ತರವಿಲ್ಲ ಹಾರಬಹುದು ಆದರೆ ತಪ್ಪಿಸಿಕೊಳ್ಳುವುದು ಅಸಂಭವ ಕಾರಣ ಅಲ್ಲಿಂದ ಸಾವಿರಾರು ಮೈಲಿ ದೂರ ಸಮುದ್ರವಿದೆ. ಸುತ್ತಲಿನ ಕಾಡುಗಳಲ್ಲಿ ಕ್ರೂರಿಗಳಾದ ಕಾಡು ಮನುಷ್ಯರಿದ್ದಾರೆ. ಅವರ ಕಣ್ಣಿಗೆ ಬಿದ್ದರೆ ನಿಮ್ಮ ಕಥೆ ಮುಗಿಯಿತು.

ಇಲ್ಲಿಯೇ ಅರವಿಂದಘೋಷರ ತಮ್ಮ ಬರೀಂದ್ರ ಗೋಲಿಪುರ ಬಾಂಬ್ ಸ್ಫೋಟದ ಪ್ರಕರಣದಲ್ಲಿ ಆರೋಪಿಯಾಗಿ ಸಾವರ್ಕರ್‌ಗಿಂತ ಒಂದು ವರ್ಷ ಮುಂಚೆ ಬಂದಿಯಾಗಿದ್ದರು. 26 ವರ್ಷದ ಸಾವರ್ಕರನ್ನುಉದ್ದೇಶಿಸಿ ಡೇವಿಡ್ ಬ್ಲೇಡ್ ಹೀಗೆ ಬುದ್ಧಿವಾದ ಹೇಳುತ್ತಾನೆ.ನೀನಿನ್ನೂ ಯುವಕ ಬದುಕಿ ಬಾಳಬೇಕಾಗಿರುವವನು ಹೀಗೆ ಜೀವನ ಹಾಳು ಮಾಡಿಕೊಳ್ಳಬೇಡ. ಎಂದು ಪದೇ ಪದೇ ಹೇಳುತ್ತಿದ್ದ.ಅವರು ಅದಕ್ಕೆ ಸರಿಯಾದ ಉತ್ತರ ಕೊಡುತ್ತಿದ್ದರು. ಆ ದಿನಗಳಲ್ಲಿ ಕ್ರಾಂತಿಕಾರಿ ಕೈದಿಗಳನ್ನು ಬ್ರಿಟಿಷ್ ಸರ್ಕಾರ ಅಪಾಯಕಾರಿ ಎಂದು ಪರಿಗಣಿಸಿ ಅಂತಹವರಿಗೆ ಸಾಮಾನ್ಯ ಕೈದಿಗಳಿಗಿಂತ ಹೆಚ್ಚಿನ ಕಠಿಣ ಶಿಕ್ಷೆ ವಿಧಿಸುತ್ತಿದ್ದರು. ಕೊಲೆಗಳು ಪಾತಕಿಗಳು ಒಬ್ಬರಿಗೊಬ್ಬರು ಭೇಟಿಯಾಗುತ್ತಿದ್ದರು ಆದರೆ ಕ್ರಾಂತಿಕಾರಿ ರಾಜಕೀಯ ಕೈದಿಗಳುಗೆ ಪರಸ್ಪರ ಭೇಟಿಯಾಗುವ ಅವಕಾಶವಿರಲಿಲ್ಲ. ಹಾಗಾಗಿಯೇ ಸಾವರ್ಕರ್ ಅಣ್ಣ ಗಣೇಶಸಾವರ್ಕರ್ ಅದೇ ಜೈಲಿನಲ್ಲಿದ್ದರೂ ಭೇಟಿಯಾಗಲು ವರ್ಷಗಳೇ ಕಳೆದವು. ಸಾಮಾನ್ಯ ಕೈದಿಗಳಿಗಿರುತ್ತಿದ್ದ ಯಾವ ಹಕ್ಕು ಇವರಿಗೆ ಇರುತ್ತಿರಲಿಲ್ಲ. ಇವರಿಗೆ ಕೊಡುತ್ತಿದ್ದ ಆಹಾರವು ಅಷ್ಟಕ್ಕಷ್ಟೇ. ಅರೆಹುಟ್ಟಿಗೂ ಸಾಕಾಗುತ್ತಿರಲಿಲ್ಲ. ಒಂದು ದಿನದಲ್ಲಿ ಮೂರು ಗಂಟೆ ಸಮಯ ಕೊಡುತ್ತಿದ್ದರು ಆಗ ನೂರಾರು ಕೈದಿಗಳು ತಮ್ಮ ಶೌಚಾಲಯದ ಕೆಲಸ ಮುಗಿಸಬೇಕಿತ್ತು. ಸಾಮಾನ್ಯ ಕೈದಿಗಳು ತಪ್ಪು ಮಾಡಿದರೆ ಕ್ಷಮೆ ಇರುತ್ತಿತ್ತು.ಆದರೆ ರಾಜಕೀಯ ಕೈದಿಗಳಿಗೆ ನಿಯಮ ಉಲ್ಲಂಘಿಸಿದರೆ ಅವರನ್ನು ನಿಲ್ಲಿಸಿ ಕೈಗೆ ಕೋಳ ಹಾಕಿ ಗೋಡೆಗೆ ಕೈಗಳನ್ನು ನೇತು ಹಾಕುತ್ತಿದ್ದರು. ದಿನವಿಡೀ ನಿಂತಿರಬೇಕಿತ್ತು.ಸೆಲ್ಯುಲಾರ್ ಜೈಲಿನ ಕೈದಿಗಳಿಗೆ ಸ್ನಾನಕ್ಕೆ ಬಂಗಾಳಕೊಲ್ಲಿಯ ಉಪ್ಪು ನೀರೇ ಗತಿ. ಅದರಲ್ಲಿ ಸ್ನಾನ ಮಾಡಿದರೆ ತುರಿಕೆ ಕಾಣಿಸುತ್ತಿತ್ತು.ಸ್ನಾನ ಈ ಗತಿಯಾದರೆ ಇನ್ನು ಊಟ ತಿಂಡಿ ದೇವರೇ ಗತಿ ಒಪ್ಪಿಲ್ಲ ಹುಳಿಯಿಲ್ಲ ಕೆಟ್ಟದಾಗಿರುತ್ತಿತ್ತು.

ವಿಧಿ ಇಲ್ಲದೆ ತಿನ್ನಲೇಬೇಕಾಗಿತ್ತು. ಅದೂ ಅರೆ ಹೊಟ್ಟೆ ತುಂಬುತ್ತಿತ್ತು. ಅನ್ನ ಅರೆಬೆರೆ ಬೆಂದಿರುತ್ತಿತ್ತು. ಅದಕ್ಕೆ ಕೊಡುತ್ತಿದ್ದ ತೊವ್ವೆ ಶುಚಿ ರುಚಿ ಎರಡೂ ಇರುತ್ತಿರಲಿಲ್ಲ. ಒಮ್ಮೊಮ್ಮೆ ಕೊಡುವ ಅಕ್ಕಿ ಗಂಜಿಯಲ್ಲಿ ಸೀಮೆಎಣ್ಣೆ ಬಿದ್ದಿರುತ್ತಿತ್ತು. ಮೈಯೆಲ್ಲಾ ಬೆವರು ಸುರಿಯುತ್ತಿರುವ ಗಬ್ಬು ವಾಸನೆ ಬರುತ್ತಿದ್ದ ಕೈದಿಗಳಿಂದ ಅಡಿಗೆ ತಯಾರಿ. ಇದರಿಂದಾಗಿ ಎಷ್ಟೋ ಕೈದಿಗಳಿಗೆ

ಸಂಕ್ರಾಮಿಕ ರೋಗ ಬರುತ್ತಿತ್ತು. ಪ್ರಾರಂಭದಲ್ಲಿ ಸಾವರ್ಕರವರಿಗೆ ತೆಂಗಿನ ಮೊಟ್ಟೆ ಕುಟ್ಟಿ ನಾರು ತೆಗೆಯುವ ಕೆಲಸ ಕೊಟ್ಟರು.ಮಾತ್ರವಲ್ಲ ಆ ತೆಂಗಿನ ನಾರಿನಿಂದ ಹಗ್ಗ ತೆಗೆಯುವ ಕತ್ತೆ ಕೆಲಸ ಮಾಡಬೇಕಿತ್ತು.ಪೆನ್ನು ಪೇಪರ್ ಹಿಡಿದ ಕರಗಳು ತೆಂಗಿನ ಮೊಟ್ಟೆ ಹಿಡಿದು ಬೊಬ್ಬೆ ಬರುತ್ತಿತ್ತು. ರಟ್ಟೆಗಳಲ್ಲಿ ಅಸಹನೀಯ ನೋವು. ನೋವನ್ನು ತೋಡಿಕೊಂಡರೆ ಜೈಲು ಅಧಿಕಾರಿ ಕೇಳಿಸಿಕೊಳ್ಳುತ್ತಿರಲಿಲ್ಲ. ಹೀಗೆ ನೋವು ಅನುಭವಿಸಿಕೊಂಡೆ ಕೆಲಸ ಮಾಡುತ್ತಿದ್ದ ಸಾವರ್ಕರಗೆ ಆಗಸ್ಟ್ 11ರಂದು ಅಂಡಮಾನಿನ ಸೂಪರಿಂಟೆಂಡೆಂಟಾಗಿ ಬಂದ ಎಚ್.ಈ. ಬ್ರೌನಿಂಗ್ ಸಾವರ್ಕರರಿಗೆ ಅಲ್ಲೇ ಇದ್ದ ಎಣ್ಣೆ ತೆಗೆಯುವ ಗಾಣಕ್ಕೆ ನೇಮಿಸಿದ. 14 ದಿನಗಳ ಕಾಲ ಹೆಗಲ ಮೇಲೆ ನೊಗವನ್ನು ಹೊತ್ತು ಎಣ್ಣೆ ತೆಗೆಯುವ ಕೆಲಸ ಕೊಟ್ಟು. ಸಾವರ್ಕರ್ ದಿನಕ್ಕೆ 12 ಕೆಜಿ ಎಣ್ಣೆ ತೆಗೆಯಬೇಕಿತ್ತು.ಇದು ಸಾಮಾನ್ಯ ಮನುಷ್ಯನ ಕೈಯಲ್ಲಿ ಆಗದ ಕೆಲಸ ಅದರಲ್ಲೂ ಪುಳಿಜಾರು ತಿನ್ನುವ ಬಡ ಬ್ರಾಹ್ಮಣ ಹೇಗೆ ಮಾಡಿಯಾನು. ಅದೊಂದು ಅಮಾನುಷ,ಹಿಂಸಾತ್ಮಕ ಮತ್ತು ಮಾನವ ಹಕ್ಕಿಗೆ ಕುಂದು ತರುವಂತಹ ಶಿಕ್ಷೆಯಾಗಿತ್ತು. ಜಟ್ಟಿಯಂತೆ ಮೈ ಬೆಳೆಸಿಕೊಂಡ ಗಟ್ಟಿಗನಿಗೂ ಕೊರಲೊಡ್ಡಿ ಗಾನ ಎಳೆಯುವುದು ಸುಲಭವಾದ ಕೆಲಸವಾಗಿರಲಿಲ್ಲ. ಇನ್ನೂ ಕೈನಲ್ಲಿ ಬರವಣಿಗೆ ತಲೆಯಲ್ಲಿ ಸದ್ ಚಿಂತನೆ ತುಂಬಿಕೊಂಡ ಸಾವರ್ಕರ್ ಹೇಗೆ ಸಹಿಸಿಕೊಂಡಿರಬಹುದು ಊಹಿಸಿ. ಗಾಣ ಸುತ್ತುವ ತುಸು ಹೊತ್ತಿಗೆ ಮೈನ ಕಸುವೆಲ್ಲ ಬಸಿದು ತಲೆ ಸುತ್ತಲು ಶುರುವಾಗುತ್ತಿತ್ತು. ನಿಧಾನ ಮಾಡಿದಾಗ ಹಿಂಬದಿಯಿಂದ ಚಾಟಿಯಲ್ಲಿ ಹೊಡೆತ. ಗಾಣ ಸುತ್ತಲೂ ಶುರು ಮಾಡಿದ ಹತ್ತೇ ಹತ್ತು ನಿಮಿಷದಲ್ಲಿ ಉಸಿರೇನಿಂತಂತೆ ಆಗುತ್ತಿತ್ತು. ನಂತರ ಲಕ್ವಾ ಹೊಡೆದಂತಾಗುತ್ತಿತ್ತು. ಬಾಯಾರಿದರೆ ಒಂದು ಬೊಗಸೆ ನೀರಿಗಿಂತ ಹೆಚ್ಚು ಕೊಡುತ್ತಿರಲಿಲ್ಲ. ದಿನಕ್ಕೆ ಕೊಡುತ್ತಿದ್ದದು ಎರಡು ಕರಟ ನೀರು ಮಾತ್ರ.ಮೊದಲ ದಿನ ಸಾವರ್ಕರ್ ಗಾಣ ಸುತ್ತುವ ಕೆಲಸ ಮಾಡಿ ಬಂದು ಮರದ ಹಲಗೆಯ ಮೇಲೆ ಮಲಗಿದರೆ ಮೈಯೆಲ್ಲಾ ಕತ್ತರಿಸಿದಂತೆ ನೋವು. ನಿದ್ದೆ ಬರುತ್ತಿರಲಿಲ್ಲ.ಜ್ವರ ಕ್ಷಣದಿಂದ ಕ್ಷಣಕ್ಕೆ ಏರುತ್ತಿತ್ತು. ಒಂದು ದಿನ ಹೀಗೆ ಗಾಣ ಎಳಿಯುವಾಗ ತಲೆ ಸುತ್ತಿ ಇನ್ನಿಲ್ಲದ ಮೈ ಕೈ ನೋವು ಬಂದು ಅಲ್ಲೇ ಗೋಡಿಗೆ ಒರಗಿ ಕುಳಿತರು. ತಕ್ಷಣ ಪ್ರಜ್ಞೆಯನ್ನು ಕಳೆದುಕೊಂಡರು. ಹೀಗೆಂದು ಅವರ ಜೊತೆಯಿದ್ದ ಬಂಗಾಳಿ ಕ್ರಾಂತಿಕಾರಿಗಳು ಹೇಳಿಕೊಂಡಿದ್ದಾರೆ.ಅಂಡಮಾನ್ ಸೆಲ್ಯುಲಾರ್ ಜೈಲಿಗೆ ಬರುವುದಕ್ಕೆ ಮುಂಚಿಂದಲೂ ಸಾವರ್ಕರ್ ಅವರ ಅಣ್ಣ ಅದೇ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದರು. ಅವರನ್ನು ಕಾಣುವ ತವಕ,ಮನಸ್ಸು ತುಡಿಯುತ್ತಿತ್ತು. 25 ವರ್ಷ ಜೀವಾವಧಿ ಶಿಕ್ಷೆ .ಅವರನ್ನು 1910ರಲ್ಲೇ ಈ ಜೈಲಿಗೆ ಕರೆತರಲಾಗಿತ್ತು.ಅದು ಸಾವರ್ಕರ್ ಅವರಿಗೆ ತಿಳಿದಿತ್ತು. ಅಣ್ಣನನ್ನು ಭೇಟಿಯಾಗಲು ಅಂಗಾಲಾಚಿ ಬೇಡಿದರೂ ಯಾವ ಅಧಿಕಾರಿಯೂ ಸಹಕರಿಸಲಿಲ್ಲ. ಕೊನೆಗೆ ಜೈಲು ವಾರ್ಡನ್ ಒಬ್ಬನ ಗುಪ್ತಸಹಾಯದದಿಂದ ಭೇಟಿಯಾದರು. ಅದು 5 ವರ್ಷದ ನಂತರ ಅವರಿಬ್ಬರ ಪ್ರಥಮ ಭೇಟಿಯಾಗಿತ್ತು. ಇಷ್ಟು ಸಂಕಷ್ಟದ ಮಧ್ಯದಲ್ಲಿಯೂ ಬಿಡುವಿನ ವೇಳೆ ಅವರ ಕೊಠಡಿಯ ಗೋಡೆಗಳ ಮೇಲೆ ಮಳೆಯಿಂದ ಅನೇಕ ದೇಶಭಕ್ತಿ ಕವನಗಳನ್ನು ಬರೆಯುತ್ತಿದ್ದರು.

ಅಂದಿನ ದಿನಗಳಲ್ಲಿಸಾವರ್ಕರ್ ಇದ್ದ ಜೈಲಿನಲ್ಲೂ ಮತಾಂತರದ ಹಾವಳಿ ನಡೆಯುತ್ತಿತ್ತು. ಅಲ್ಲಿ ಮುಸ್ಲಿಮರ ಪ್ರಭಾವ ಜಾಸ್ತಿ ಇತ್ತು, ಸಂಖ್ಯೆಯೂ ಸಾಕಷ್ಟಿತ್ತು. ಹಿಂದೂಸ್ಥಾನದಿಂದ ಬಂದ ಮೃದು ಸ್ವಭಾವದ ಹುಡುಗರನ್ನು ಮತಾಂತರಿಸುತ್ತಿದ್ದರು. ಅವರಿಗೆ ಜೈಲರೆ ಸಹಕರಿಸುತ್ತಿದ್ದ. ಮತಾಂತರವಾದವರಿಗೆ ಶಿಕ್ಷೆ ರಿಯಾಯಿತಿ ತೋರಿಸುತ್ತಿದ್ದರು. ಹಾಗಾಗಿ ಆ ಶಿಕ್ಷೆಯ ತಾಳಲಾರದೆ ಮತಾಂತರವಾಗುತ್ತಿದ್ದರು. ಇದನ್ನು ಕಂಡ ಸಾವರ್ಕರರಿಗೆ ಕೂಡ ಕೋಪ ಬಂದಿತು. ಧರ್ಮಾಂತರದಿಂದ ರಾಷ್ಟ್ರಾಂತರ ಎಂಬುದು ಅವರ ನಿಲವು.ಅದಕ್ಕೆ ಜೈಲರ್ ಬಳಿ ದೂರನ್ನು ವೈದರು. ಜೈಲರ್ ಲೆಕ್ಕಿಸಲಿಲ್ಲ. ಆದರೆ ಸಾವರ್ಕರ್ ಬಿಡಲಿಲ್ಲ. ವಿರೋಧಿಸುತ್ತಲೇ ಇದ್ದರು. ಹಿಂದುಗಳಿಗೆ ಮನವರಿಕೆ ಮಾಡಲು ಪ್ರಾರಂಭಿಸಿದರು. ಬಲವಂತವಾಗಿ ಮತಾಂತರಮಾಡಿದವರಮೇಲೆ ಮೊಕದ್ದಮೆ ಹೂಡಿದರು.ಆಗ ಮುಸಲ್ಮಾನಕೈದಿಗಳು ವಿರೋಧಿಗಳಾದರು. ಹಿಂದುಕೈದಿಗಳು ಸಾವರ್ಕರರ ಪರ ನಿಂತರು. ಇದರಿಂದ ಸಾವರ್ಕರ್ ಅವರಿಗೆ ಆನೆ ಬಲ ಬಂದಂತಾಯಿತು. ಮುಸಲ್ಮಾನರಾಗಿದ್ದವರು ಅನೇಕರು ಮರಳಿ ಮಾತೃ ಧರ್ಮಕ್ಕೆ ಬಂದರು. ಸಿಲೋನಿ ನಿಂದ ಬಂದಿದ್ದ ಓರ್ವ ಕ್ರಿಶ್ಚಿಯನ್ ಯುವಕನನ್ನೂ ಕೂಡ ಹಿಂದು ಧರ್ಮಕ್ಕೆ ತಂದರುದ. ಹೀಗೆ ಜೈಲಿನಲ್ಲಿ ಅನೇಕ ಮಾರ್ಪಾಡುಗಳನ್ನು ಮಾಡಿದರು. *ಏಕದೇವ* *ಏಕದೇಶ* *ಏಕಆಶಾ* *ಏಕಜಾತಿ* *ಏಕಜೀವ* *ಏಕಭಾಷಾ* ಇದು ಜೈಲಿನಲ್ಲಿರುವ ಕೈದಿಗಳಿಗೆ ದಿನನಿತ್ಯ ಮಾಡುತ್ತಿದ್ದ ಪಾಠ.ಸಾವರ್ಕರ್ ಅವರ ಹೋರಾಟದ ದೆಸೆಯಿಂದ ಇತರ ಕೈದಿಗಳಿಗೂ ಒಳ್ಳೆಯ ಊಟ ನಿಯಮಿತ ಆಹಾರ ಸಿಗುವಂತಾಯ್ತು.ವೃತ್ತ ಪತ್ರಿಕೆಯ ವಿತರಣೆ, ಗ್ರಂಥಾಲಯ ತೆರೆದುಕೊಂಡವು.

ಸಾವರ್ಕರ್ ದೇಹ ಕೃಷವಾಗಿತ್ತು ದೇಹದಲ್ಲಿ ಮೂಳೆಯ ಪ್ರಧಾನವಾಗಿ ಕಾಣುತ್ತಿತ್ತು. ಅನಾರೋಗ್ಯ ಮೇರೇ ಮೀರಿತ್ತು.ಆ ಸಮಯಕ್ಕೆ ದೇಶದಲ್ಲೆಲ್ಲಾ ಸಾವರ್ಕರ ಬಿಡುಗಡೆಗೆ ಒತ್ತಾಯ ರಭಸತಾಳಿತ್ತು. ಆದ ಕಾರಣ 1909ರಲ್ಲಿ ಯಾವ ದ್ವಾರದಿಂದ ಜೈಲಿಗೆ ಪ್ರವೇಶಿಸಿದರು ಅದೇ ದ್ವಾರದಿಂದ ಸಾವಿರ 1921 ರಲ್ಲಿ ಹೊರ ಬಂದರು. ಅವರನ್ನ ಮತ್ತೆ ಸ್ಥಳೀಯ ಜೈಲಿನಲ್ಲಿ ಇಡಲಾಯಿತು. 1922 ರಲ್ಲಿ ಅಣ್ಣ ಗಣೇಶ ಸಾವರ್ಕರ್,1924ರಲ್ಲಿ ದಾಮೋದರ ಸಾವರ್ಕರನ್ನು ಬಿಡುಗಡೆ ಮಾಡಿದರು.1924 ರಿಂದ 9137ರವರೆಗೆ ಸಾವರ್ಕರರನ್ನು ಗೃಹಬಂಧನದಲ್ಲಿಟ್ಟಿದ್ದರು.ಜೊತೆಗೆ ಪತ್ನಿ ಯಮುನಾ ಬಾಯಿಯೂ ಸಹ ಇದ್ದರು. ಸಾವಿರದ ಒಂಬೈನೂರ ಒಂದರಲ್ಲಿ ಮದುವೆಯಾಗಿದ್ದರು 24-25 ವರ್ಷ ಸಾಂಸಾರಿಕ ಜೀವನ ನಡೆಸಿರಲಿಲ್ಲ.ಈಗ ಸಾವರ್ಕರ್‌ಗೆ ಪ್ರಭಾತ್ ಎಂಬ ಮಗಳು ವಿಶ್ವಾ ಎಂಬ ಮಗ ಹುಟ್ಟಿದರು. ಜೈಲಿನಿಂದ ಬಿಡುಗಡೆಯಾದಮೇಲು ಅದೇ ಉತ್ಸಾಹ ಅದೇ ಧೈರ್ಯ ಅನೇಕ ಸಾಮಾಜಿಕ ಕಾರ್ಯವನ್ನು ಕೈಗೊಂಡರು.ಅಸ್ಪೃಶ್ಯತೆ ಎಂಬುದು ಹಿಂದೂಗಳಿಗೆ ಶಾಪ ಅದರ ವಿರುದ್ಧ ಹೋರಾಡಿದರುಹರಿಜನರನ್ನು ದೇವಾಲಯಕ್ಕೆ ಕರೆದೊಯ್ದರು ಅವರೊಂದಿಗೆ ಸಾಮೂಹಿಕ ಭೋಜನ ವೇರ್ಪಡಿಸಿದರು. ಹಿಂದುತ್ವದ ಜಪವನ್ನೇ ಮಾಡುತ್ತಿದ್ದ ಸಾವರ್ಕರರು *ಹಿಂದೂ ಮಹಾಸಭಾ* ಎಂಬ ರಾಜಕೀಯ ಪಕ್ಷವನ್ನು ಹುಟ್ಟು ಹಾಕಿದರು.

ವೀರ ಸಾವರ್ಕರ್ ರವರು ಮೇ 28, 1883ರಲ್ಲಿ ನಾಸಿಕ್ ಹತ್ತಿರವಿರುವ ಭಗೂರಿನಲ್ಲಿ ಪೌರುಷಕ್ಕೆ ಹೆಸರಾದ ಚಿತ್ಪಾವನ ಬ್ರಾಹ್ಮಣ

ಪಂಗಡದಲ್ಲಿ ಜನ್ಮ ತಾಳಿದರು. ತಂದೆ ದಾಮೋದರ ಪಂತ. ಸ ಊರಿನಲ್ಲಿ ಗಣ್ಯ ವ್ಯಕ್ತಿ. ತಾಯಿ ರಾಧಾಬಾಯಿ. ಮಗ ವಿನಾಯಕ ತಾಮೋದರನಿಗೆ 9 ವರ್ಷವಿದ್ದಾಗಲೇ ತಾಯಿ ಅಸುರುಗಿದರು. ವಿನಾಯಕ ದಾಮೋದರ ಸಾವರ್ಕರ್ ಇದುಅವರ ಪೂರ್ಣ ಹೆಸರು. ಅಣ್ಣ ಗಣೇಶ ಹಾಗೂ ತಮ್ಮ ನಾರಾಯಣ ಸಾವರ್ಕರ್. ಸಹೋದರಿ ಮೈನಾಭಾಯಿ.19901 ರಲ್ಲಿ ನಾಸಿಕ್ ನ ಶಿವಾಜಿ ಹೈಸ್ಕೂಲಿನಲ್ಲಿ ಮೆಟ್ರಿಕಲೇಶನ್ ಪರೀಕ್ಷೆ ಮುಗಿಸಿದರು. ಪುಣೆಯ ಮಾರ್ಗೂಸನ್ ಕಾಲೇಜಿನಲ್ಲಿ ಬ್ಯಾಚುಲರ್ ಆಫ್ ಆರ್ಟ್ಸ್ ಮುಗಿಸಿಕೊಂಡರು. ವಿದ್ಯಾರ್ಥಿ ವೇತನ ಪಡೆದು ಇಂಗ್ಲೆಂಡಿನಲ್ಲಿ ಕಾನೂನು ಪದವಿ ಪಡೆದರು. ಆಗ ಭಾರತದ ದಾಸ್ಯದ ಬಗ್ಗೆ ಅರಿವಾಗಿ ಅಲ್ಲಿದ್ದ ವಿದ್ಯಾರ್ಥಿಗಳನ್ನು ಸಂಘಟಿಸಿ ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಸ್ಪೂರ್ತಿ ನೀಡಿ, ಮದನ್ ಲಾಲ್ ದಿಂಗ್ರಮುಂತಾದವರನ್ನು ಹೋರಾಟಕ್ಕೆ ಸಜ್ಜು ಮಾಡಿದರು. ಬ್ರಿಟಿಷರ ವಿರುದ್ಧ ಹೋರಾಡಲು *ಫ್ರೀ ಇಂಡಿಯ ಸೊಸೈಟಿ* ಪ್ರಾರಂಭಿಸಿದರು.

ಸೆರೆಮನೆ ವಾಸದಿಂದ ಬಿಡುಗಡೆಯಾದ ಅನೇಕ ವರ್ಷಗಳವರೆಗೆ ಸಾಮಾಜಿಕ ಕಾರ್ಯಾ ಮಾಡುತ್ತಲೆ ಇದ್ದರು.

ಸಾವರ್ಕರರಿಗೆ ತಾನು ಬಂದ ಕೆಲಸ ಮುಗಿಯಿತು ಎಂಬ ಭಾವನೆ ಬಂದಿತು.ಆಗಾಗಲೇ ವಿನಾಯಕ ದಾಮೋದರ್ ಸಾವರ್ಕರ ಅಣ್ಣ ಗಣೇಶ ಸಾವರ್ಕರ್ 1945ರಲ್ಲೂ,ತಮ್ಮ ನಾರಾಯಣಸಾವರ್ಕರ್ 1950 ರಲ್ಲೂ ಕಾಲವಾಗಿದ್ದರು.ಪತ್ನಿ ಯಮುನಾ ಬಾಯಿ 1965 ರಲ್ಲಿ ಅವರನ್ನು ಅಗಲಿದ್ದರು. ಮಗ ವಿಶ್ವಾಸಿಗೆ ಮದುವೆಯಾಗಿತ್ತು. ಮಗಳು ಪ್ರಭಾತ್‌ಳ ಮದುವೆ ಆಗಿ ಗಂಡನ ಮನೆಯಲ್ಲಿದ್ದಳು. ಶರೀರ ಸವೆದಿತ್ತು, ಅನಾರೋಗ್ಯ ಮನೆ ಮಾಡಿದ್ದು ಜೀವನದಲ್ಲಿ ಇನ್ನಾವಸೆಯೂ ಇರಲಿಲ್ಲ. ಆದರೆ ಅವರ ಕೆಣ್ಣೆದುರಿಗೆ ತಾಯಿ ಭಾರತೀಯ ಶರೀರ ತುಂಡಾಗಿ ಪಾಕಿಸ್ತಾನಗಳಾಗಿದ್ದು ಮಾತ್ರ ನೋವು ತುಂಬಿತ್ತು. ಬಂದ ಕಾರ್ಯ ಮುಗಿದ ಮೇಲೆ ಶ್ರೀ ಶಂಕರಾಚಾರ್ಯರು ಹೇಗೆ ಈಶ್ವರನಲ್ಲಿ ಲೀನವಾದರೋ ಹಾಗೆ ನನ್ನ ಕೆಲಸವು ಮುಗಿದಿದೆ. ತಾನು ತಾಯಿ ಭಾರತೀಯ ಪರತಲದಲ್ಲಿ ಲೀನವಾಗಬೇಕೆಂದು ನಿಶ್ಚಯಿಸಿದರು. ಆಮರಣಾಂತ ಉಪವಾಸ ಪ್ರಾರಂಭಿಸಿದರು. 1966 ಫೆಬ್ರವರಿ 26ರಂದು ತಾಯಿ ಭಾರತೀಯ ಒಡಲಲ್ಲಿ ಲೀನವಾದರು. ಯಾವಾಗಲೂ ಗಾಯತ್ರಿ ಮಂತ್ರದಂತೆ ಜಪಿಸುತ್ತಿದ್ದ

ಜಯೋಸ್ತುತೆ ಶ್ರೀ ಮಹನ್ಮಂಗಲೇ ಶಿವಾಸ್ಪದೇ ಶುಭದೆ
ಸ್ವತಂತ್ರತೆ ಭಗವತಿ ತ್ವಾಮಹಂ ಯಶೋ
ಯುತಾಂ ವಂದೇ

ಇದನ್ನು ನಾವು ಜಪಿಸೋಣ ಸಾವರ್ಕರ ಜ್ಯೋತಿ ಮನೆ ಮನೆಯಲ್ಲಿ ಮನ ಮನದಲ್ಲಿ ಬೆಳಗುವಂತಾಗಲಿ.

**ಭಾರತ್ ಮಾತಾ ಕಿ ಜೈ**


**ಪೂರ್ಣಪ್ರಜ್ಞ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ**

**ಶುಭಾಶಯಗಳೊಂದಿಗೆ**

ನಂ. 552, 'ಪೂರ್ಣಪ್ರಜ್ಞ ಸುವರ್ಣಭವನ',
ಉತ್ತರಹಳ್ಳಿ–ಕೆಂಗೇರಿ ಮುಖ್ಯರಸ್ತೆ
ಪೂರ್ಣಪ್ರಜ್ಞ ನಗರ, ಬೆಂಗಳೂರು–560 061.
ದೂ. ಸಂ. 080–26731335, 26731336



**ಬಡಾವಣೆ ವಿವರಗಳು :**
1. ಪೂರ್ಣಪ್ರಜ್ಞ ಬಡಾವಣೆ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು-560 085
2. ಪೂರ್ಣ ಪ್ರಜ್ಞನಗರ, ಉತ್ತರಹಳ್ಳಿ, ಸುಬ್ರಮಣ್ಯಪುರ ಪೋಸ್ಟ್, ಬೆಂಗಳೂರು-560 061

**ಸಂಘದ ಆಡಳಿತ ಮಂಡಳಿ ಸದಸ್ಯರು**

| | | | | | |
|---|---|---|---|---|---|
| ಹಯಗ್ರೀವಾಚಾರ್ | ಅಧ್ಯಕ್ಷರು | ಕೃಷ್ಣಮೂರ್ತಿ ಕೆ.ಎನ್. | ನಿರ್ದೇಶಕರು | ವೆಂಕಟೇಶ್ ಎಸ್.ವಿ. | ನಿರ್ದೇಶಕರು |
| ಅನಂತಸ್ವಾಮಿ ಎಸ್. | ಉಪಾಧ್ಯಕ್ಷರು | ವಿಶ್ವನಾಥ್ ಜಿ. | ನಿರ್ದೇಶಕರು | ರಾಮಯ್ಯ ಎಸ್.ಟಿ. | ನಿರ್ದೇಶಕರು |
| ಸುಧೀಂದ್ರ ಎಸ್.ಕೆ. | ನಿರ್ದೇಶಕರು | ಈಶ್ವರಿ ಜಿ.ಸಿ. | ನಿರ್ದೇಶಕರು | ಸಂಜೀವ್ ಕುಮಾರ್ ಎಸ್ | ನಿರ್ದೇಶಕರು |
| ಮೊಕಾಶಿ ಡಿ.ಎಚ್. | ನಿರ್ದೇಶಕರು | ರಾಧಮಣಿ ವಿ.ಕೆ. | ನಿರ್ದೇಶಕರು | | |

ಹಿಂದಿನ ಸಂಚಿಕೆಯಿಂದ

# ದೈವ ಮತ್ತು ಪುರುಷ ಪ್ರಯತ್ನ

**ಕೃಪೆ: ಆರ್ಯಸಂಸ್ಕೃತಿ ಮಾಸಪತ್ರಿಕೆ, ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಮೈಸೂರು**

– ಡಾ. ಕೆ. ಎಲ್ ಶಂಕರನಾರಾಯಣ ಜೋಯ್ಸ್

ವಿಜಯನಗರಸಾಮ್ರಾಜ್ಯದ ಪ್ರತಿಷ್ಠಾಪನೆಯ ವಿಷಯದಲ್ಲಿ ಒಂದು ಪ್ರಸಂಗವನ್ನು ನಾವು ಆಲಿಸುತ್ತೇವೆ. ಮಹಾಮಹಿಮರಾದ ವಿದ್ಯಾರಣ್ಯರು ಅನೇಕ ಶಾಸ್ತ್ರಗಳಲ್ಲಿ ಪರಿಣಿತಿಯುಳ್ಳವರಾಗಿದ್ದರು. ಜ್ಯೋತಿಷಶಾಸ್ತ್ರದಲ್ಲಿ ಅವರಿಗೆ ಅಪಾರವಾದ ತಿಳುವಳಿಕೆ. ಮಹಾಸಾಧಕರೆನ್ನಿಸಿಕೊಂಡ ಅವರಿಗೆ ಸಹಜವಾಗಿ ಉದಯಿಸಿದ್ದ ಒಂದು ಸಂಕಲ್ಪ –ಸಹಸ್ರಸಹಸ್ರಸಂವತ್ಸರಗಳವರೆಗೆ ನೆಲೆ ನಿಲ್ಲುವ ಒಂದು ಧರ್ಮರಾಜ್ಯವನ್ನು ಸ್ಥಾಪಿಸಬೇಕು ಎಂಬುದಾಗಿ. ಅತ್ಯಂತ ಆದರ್ಶವಾದ ಉದ್ದೇಶ. ಧರ್ಮಪರರಾರ ರಾಜರಿಂದ ಆ ಕಾರ್ಯ ಸಂಪನ್ನವಾಗಲು ಮಾಗದರ್ಶನ ನೀಡುವುದು ತಮ್ಮ ಕರ್ತವ್ಯವೆಂದು ಬಗೆದಿದ್ದರು. ಯೋಗ್ಯರೆನ್ನಿಸಿದ ರಾಜಮನೆತನದ ವ್ಯಕ್ತಿಗಳನ್ನು ಪಡೆದ ಅವರು ಆ ಕಾರ್ಯವನ್ನು ಆರಂಭಿಸಲು ಒಂದು ಮೂಹೂರ್ತವನ್ನು ತಾವೇ ವಿಶೇಷ ಶ್ರದ್ಧೆಯಿಂದ ಆರಿಸಿದರು. ಯಾವ ಶುಭಮುಹೂರ್ತದಲ್ಲಿ ಪ್ರತಿಷ್ಠಾಪನಾಕಾರ್ಯವು ಆರಂಭವಾದರೆ ಮುಂದೆ ಅದಕ್ಕೆ ಅನುಕೂಲವಾದ ಸನ್ನಿವೇಶವು ದೊರೆತು ನಿರ್ವಿಘ್ನವಾಗಿ ಧರ್ಮರಾಜ್ಯವು ನೆಲೆಗೊಂಡು ಸುದೀರ್ಘಕಾಲ ಸೌಖ್ಯದ ತವರಾಗಬಹುದೋ ಅಂತಹ ಶುಭಲಕ್ಷಣಗಳಿಂದ ಕೂಡಿದ ಮುಹೂರ್ತವನ್ನು ಅವರು ಆರಿಸಿದ್ದರು. ಘಟಿಕಾಯಂತ್ರವನ್ನು ಸ್ಥಾಪಿಸಿಕೊಂಡು ಮುಹೂರ್ತದ ಕಾಲವನ್ನು ಸೂಕ್ಷ್ಮವಾಗಿ ನಿರ್ಣಯಿಸಿ ಕಾಲಕ್ಕೆ ಸರಿಯಾಗಿ ಕಾರ್ಯವನ್ನು ನಡೆಸುವ ಬಗ್ಗೆ ತಕ್ಕ ವ್ಯವಸ್ಥೆಗಳಾಗಿದ್ದವು. ಮುಹೂರ್ತವು ಬಂದೊಡನೆ ಅದರ ಜ್ಞಾಪಕವಾಗಿ ತಾವು ಶಂಖವನ್ನು ಊದುವುದಾಗಿಯೂ ಅದರ ಧ್ವನಿ ಕೇಳಿದೊಡನೆಯೇ ಪ್ರತಿಷ್ಠಾಪನಾ ಕಾರ್ಯವನ್ನು ಮಾಡಬೇಕೆಂಬುದಾಗಿಯೂ ರಾಜಕುಮಾರರಿಗೆ ಅವರ ಆದೇಶವಿತ್ತು. ಹೀಗೆ ಎಲ್ಲ ಪೂರ್ವಸಿದ್ಧತೆಗಳೊಡನೆ ಮುಹೂರ್ತವನ್ನು ನಿರೀಕ್ಷಿಸುತ್ತಿರಲು ಈ ಮಧ್ಯೆ ಒಬ್ಬ ದಾಸಯ್ಯನು ತನ್ನ ಸಹಜವಾದ ಪ್ರವೃತ್ತಿಯಂತೆ ಒಮ್ಮೆ ಥಟ್ಟನೆಯಾಗಿ ಶಂಖವನ್ನು ಊದಿದ. ಆ ಶಂಖದ ಧ್ವನಿಯನ್ನೇ ವಿದ್ಯಾರಣ್ಯರ ಸೂಚನೆಯೆಂದು ಬಗೆದು ಪ್ರತಿಷ್ಠಾಪನಾ ಕಾರ್ಯವು ಘಟಿಸಿ ಹೋಯಿತು. ಆದರೆ ಆ ಕಾಲದ ಧರ್ಮವು ಪೂರ್ಣವಾಗಿ ಅನುಕೂಲಕರವಾಗಿರಲಿಲ್ಲ. ಒಟ್ಟಿನಲ್ಲಿ ನಿರ್ದಿಷ್ಟವಾದ ಮುಹೂರ್ತದಲ್ಲಿ ಕಾರ್ಯ ಸಂಪನ್ನವಾಗಲಿಲ್ಲ. ಪರಿಣಾಮವಾಗಿಯೇ ಕೆಲವೇ ಶತಕಗಳಲ್ಲಿ ಅತ್ಯಂತ ವೈಭವದಿಂದ ಶಿಖರನ್ನೇರಿ ರಾಜ್ಯವು ಅಸ್ತಂಗತವಾಯಿತು – ಎಂದು. ಈ ಘಟನೆಯು ಐತಿಹಾಸಿಕವೇ? ಕಲ್ಪಿತವೇ? ಎಂದು ಬಗೆಬಗೆಯಾದ ಸಂದೇಹಗಳಿಗೆ ಅವಕಾಶ ನೀಡಿರಬಹುದು. ಅದರ ಸ್ಥಿತಿ ಹೇಗೇ ಇದ್ದರೂ ಸಹ ಇಂತಹ ಪ್ರಸಂಗಗಳು ಸಂಭವ ಎಂಬ ಬಗ್ಗೆ ಈ ಕ್ಷೇತ್ರದಲ್ಲಿ ಪರಿಶ್ರಮಿಸುವವರಿಗೆ ಮನವರಿಕೆಯಾಗದೇ ಇರುವುದಿಲ್ಲ.

ಈ ಜ್ಯೋತಿಷಕ್ಷೇತ್ರದಲ್ಲೇ ಇನ್ನೊಂದು ಪ್ರಸಿದ್ಧವಾದ ಘಟನೆಯನ್ನು ಉಲ್ಲೇಖಿಸುವುದನ್ನು ನೋಡುತ್ತೇವೆ. ಅದು ಗಣಿತ ಶಾಸ್ತ್ರದಲ್ಲಿ ಪ್ರಾವೀಣ್ಯವನ್ನು ಪಡೆದು ಭಾರತದ ಹಿರಿಮೆಗರಿಮೆಗಳಿಗೆ ಬಾಹ್ಯವಾಗಿಯೂ ಕಾರಣಳೆನ್ನಿಸಿಕೊಂಡ ಲೀಲಾವತಿಯ ಬಗೆಗೆ. ಲೀಲಾವತಿಯ ತಂದೆ ಜ್ಯೋತಿಷಶಾಸ್ತ್ರದಲ್ಲಿ ವಿಶೇಷ ಪಾಂಡಿತ್ಯವನ್ನು ಸಂಪಾದಿಸಿ ಎಲ್ಲೆಲ್ಲೂ ಹೆಸರಾದ ವಿದ್ವಾಂಸರಾಗಿದ್ದರು. ಅವರ ಮಗಳ ಜನನ ಸಮಯವು ತಿಳಿಸುವಂತೆ ಆಕೆಗೆ ವಿವಾಹದ ಉತ್ತರ ಕ್ಷಣದಲ್ಲೇ ವೈಧವ್ಯ ಯೋಗ! ಅದನ್ನರಿತು ಅವರು ವೈಧವ್ಯಯೋಗವನ್ನು ಪರಿಹರಿಸಲು ಬೇಕಾದ ಕ್ರಮಗಳನ್ನು ಕೈಗೊಂಡರಲ್ಲದೆ, ವಿವಾಹದ ಮುಹೂರ್ತವನ್ನು ನಿರ್ಣಯಿಸುವಾಗ ಹೆಚ್ಚಿನ ನಿಗವನ್ನು ವಹಿಸಿದರು. ಶಾಸ್ತ್ರವು ತಿಳಿಸುವಂತೆ ಯಾವ ಮುಹೂರ್ತದಲ್ಲಿ ವಿವಾಹವು ಸಂಪನ್ನವಾದರೆ ವೈಧವ್ಯವು ಘಟಿಸಲಾರದೋ ಅಂತಹ ಒಂದು ಮುಹೂರ್ತವನ್ನು ಹೆಚ್ಚಿನ ಪರಿಶ್ರಮದಿಂದ ಆಯ್ದರು. ಮುಹೂರ್ತದ ಶೋಭನವಾದ ಕಾಲವನ್ನು ಆಯ್ದುಕೊಳ್ಳಲು ವಿವಾಹದ ದಿನ ಸೂರ್ಯೋದಯಕ್ಕೆ ಸರಿಯಾಗಿ ಘಟೀಯಂತ್ರವನ್ನು (ಘಳಿಗೆ ಬಟ್ಟಲು) ಸ್ಥಾಪಿಸಿದರು. ಒಂದು ಬೋಳಾದ ತಾಮ್ರದ ಬಟ್ಟಲನ್ನು ಘಳಿಗೆ ಬಟ್ಟಲು ಎಂದು ಕರೆಯುವ ವಾಡಿಕೆ. ಅದರ ಮಧ್ಯದಲ್ಲಿ ಒಂದು ಸಣ್ಣ ರಂಧ್ರವಿರುತ್ತದೆ. ಪಾತ್ರೆಯ ಒಳ–ಹೊರಭಾಗದಲ್ಲಿ ವಿಘಳಿಗೆಗಳನ್ನು ನೆನಪಿಸುವ 60 ಗೆರೆಗಳಿರುತ್ತವೆ. ಆ ಪಾತ್ರೆಯನ್ನು ನೀರಿನ ಮೇಲೆ ಇಟ್ಟರೆ ರಂಧ್ರದ ಮೂಲಕ ನೀರು ತುಂಬುತ್ತಾ ಒಂದು ಘಳಿಗೆಯ ಕಾಲಕ್ಕೆ ಸರಿಯಾಗಿ ಮುಳುಗುವುದು. ಅದು ಮುಳುಗುತ್ತಿರುವಾಗ ಪಾತ್ರೆಯ ಹೊರಾವರಣದಲ್ಲಿರುವ ಗೆರೆಗಳ ಮೇಲೆ ವಿಘಳಿಗೆಗಳನ್ನು ಗುರುತಿಸಬಹುದು. ಸೂರ್ಯೋದಯದ ಅನಂತರ ಇಷ್ಟು ಘಳಿಗೆ ಇಷ್ಟು ವಿಘಳಿಗೆಗಳಿಗೆ ಮುಹೂರ್ತವೆಂಬ ಪೂರ್ವಭಾವಿ ನಿರ್ಣಯದಂತೆ ಕಾಲವನ್ನು ಗಣಿಸಿ ಸಕಾಲದಲ್ಲಿ ಕರ್ಮವನ್ನು ನಡೆಸುವ ಅಭ್ಯಾಸ. ಅದರಂತೆ ಬಹಳ ಶ್ರದ್ಧೆಯಿಂದ ಕಾಲವನ್ನು ಗಣಿಸುತ್ತಿರಲು ಅವರ ನಿಗಕ್ಕೆ ಬರದಂತೆ ಒಂದು ಅಕ್ಕಿಯ ಕಾಳು ನೀರಿನಲ್ಲಿ ಸೇರಿ ಆ ರಂಧ್ರದಲ್ಲಿ ಬಂದು ನೀರು ತುಂಬುವುದರಲ್ಲಿ ವಿಳಂಬವಾಯಿತು. ಇದು ಮನವರಿಕೆಯಾಗದೇ ನಿರ್ದಿಷ್ಟವಾದ ಸುಮುಹೂರ್ತವು ಗತಿಸಿ ಸಲ್ಲದ ಕುಮುಹೂರ್ತದಲ್ಲೇ ವಿವಾಹವು ಸಂಪನ್ನವಾಯಿತು. ಪರಿಣಾಮವಾಗಿ ವಿವಾಹದ ಉತ್ತರಸಮಯದಲ್ಲೇ ಆಕೆಗೆ ಪತಿವಿಯೋಗವುಂಟಾಯಿತು. ಅತ್ಯಂತ ಖಿನ್ನರಾದ ಭಾಸ್ಕರಾಚಾರ್ಯರು ಗಣಿತವಿದ್ಯೆಯಲ್ಲಿ ಆಕೆಯನ್ನು ಬೆಳೆಸಿದರು. ಆಕೆಯ ಹೆಸರು ಲೋಕದಲ್ಲಿ ದೀರ್ಘಕಾಲ ಉಳಿಯುವಂತಾಯಿತು.

ಈ ಘಟನೆಯ ಬಗ್ಗೆಯೂ ಸಹ ಅನೇಕಪ್ರಶ್ನೆಗಳು ಉದ್ಭವಿಸಬಹುದು. ಇಷ್ಟೆಲ್ಲಾ ವಿಶೇಷ ಶ್ರದ್ಧೆ ವಹಿಸಿದ ಆಚಾರ್ಯರಿಗೆ ಪಾತ್ರೆಯಲ್ಲಿ ಬಂದು ಸೇರಿದ ಅಕ್ಕಿಕಾಳು ಗೋಚರಿಸಲಿಲ್ಲವೇ? ಇದಲ್ಲದೇ ಅವರಿಗೆ ಕಾಲವನ್ನು ಗುರುತಿಸಲು ಬೇರೆ ಯಾವ ಸಾಧನೆಯೂ ಇರಲಿಲ್ಲವೇ? ವಿಧಿಯು ಇಷ್ಟೆಲ್ಲ ಬಲಿಷ್ಠವೆಂಬ ಬಗ್ಗೆ ತಿಳಿದಿರಲಿಲ್ಲವೇ? ತಿಳಿದಿದ್ದರೂ ಇಂತಹ ಪ್ರಯತ್ನ ನಡೆಸಿದರೆಂದರೆ ಇಂತಹ ಸಾಹಸ ಕಾರ್ಯ ಮಾಡಿ ವಿಫಲರಾಗುವುದಕ್ಕಿಂತಲೂ ವಿಧಿಯನ್ನು ಒಪ್ಪಿಕೊಂಡು ಅದರಂತೆ ಬದುಕಬಹುದಾಗಿತ್ತಲ್ಲವೆ? ಎಂದು. ಅಲ್ಲದೇ ಅಲ್ಲಲ್ಲಿ ಹರಡಿರುವ ಕಿಂವದಂತಿಗಳೇ ಹೊರತು ವಾಸ್ತವಿಕತೆಯ ಬಗ್ಗೆ ಸರಿಯಾದ ಪ್ರಮಾಣಗಳಿಲ್ಲದಿರುವಾಗ ಇಂತಹ ಘಟನೆಗಳನ್ನು ಉಲ್ಲೇಖಿಸಿ ಅದರ ಮೇಲೆ ಒಂದು ನಿರ್ಣಯವನ್ನು ನೀಡುವುದು ತೀರ ಬಾಲಿಶವಲ್ಲವೇ?

ಎಂದೂ ಮೂಲಭೂತವಾದ ಪ್ರಶ್ನೆ ಸಂಭವಿಸಬಹುದು. ಈ ಹಿಂದೆ ತಿಳಿಸಿದಂತೆ ಈ ಘಟನೆಯ ವಾಸ್ತವಿಕತೆಯ ಬಗ್ಗೆ ವಿಮರ್ಶೆಗಿಂತಲೂ ಇಲ್ಲಿ ಈ ಕ್ಷೇತ್ರದಲ್ಲಿ ಪರಿಶ್ರಮಿಸುವವರಿಗೆ ಆಗಾಗ ಅನುಭವಗೋಚರವಾಗುವ ಒಂದು ಸತ್ಯವನ್ನೇ ಈ ಪ್ರಸಂಗದ ಮೂಲಕ ಉಲ್ಲೇಖಿಸಿದ್ದಾರೆಂಬುದಷ್ಟೇ ಮುಖ್ಯವಾದ ವಿಷಯ. ಕೆಲವೊಮ್ಮೆ ಪುರುಷಪ್ರಯತ್ನಕ್ಕೆ ಮೀರಿ ವಿಧಿ ವಿಜೃಂಭಿಸಬಲ್ಲದು ಎಂಬುದಕ್ಕೆ ಒಂದು ನಿದರ್ಶನ ಎಂದಷ್ಟೇ ಭಾವಿಸುವುದು ಮುಖ್ಯವಾದೀತು. ಇಂತಹ ಪ್ರಸಂಗಗಳಲ್ಲಿ ಪುರುಷಪ್ರಯತ್ನವು ನಿಷ್ಫಲವಾಯಿತಲ್ಲವೇ? ಎಂದರೆ ಇಲ್ಲ. ನಿರ್ದಿಷ್ಟವಾದ ಫಲವು ಲಭಿಸಲಿಲ್ಲವೆಂದಿದ್ದರೂ ಶುಭವನ್ನು ಬೆಳೆಸಿಕೊಳ್ಳುವುದಕ್ಕೆ ಇರಬೇಕಾದ ಸತತ ಪ್ರಯತ್ನದ ಪ್ರವೃತ್ತಿಯು ಉಳಿಯಲು ಇದು ಸಾಧಕವಾಗಿದೆ. ಆದ್ದರಿಂದ ಇಂತಹ ಪ್ರಯತ್ನಗಳು ಅಗತ್ಯ. ಈ ಬಗ್ಗೆ ಶ್ರೀರಂಗಮಹಾಗುರುವು ತಮ್ಮ ಜೀವನದ ಒಂದು ಘಟ್ಟದಲ್ಲಿ ತಮ್ಮ ಮೊದಮೊದಲಿನ ಶಿಷ್ಯರೊಬ್ಬರಿಗೆ ನೀಡಿದ ವಿಶ್ಲೇಷಣೆಯನ್ನು ಸಪ್ರಸಂಗವಾಗಿ ನೆನಪಿಸಿಕೊಳ್ಳಬಹುದಾಗಿದೆ.

ಶ್ರೀರಂಗಮಹಾಗುರುಗಳ ಮಾತೃಶ್ರೀಯವರು ತುಂಬಾ ಅಸ್ವಸ್ಥರಾಗಿದ್ದ ಸಂದರ್ಭ. ಅವರ ಇಹಲೋಕದ ಜೀವನದ ಅಂತಿಮದಿನಗಳು ಸನ್ನಿಹಿತವಾಗಿದ್ದವು. ಮಹಾಗುರುವು ಅವರ ನಾಡಿಯನ್ನು ಪರಿಶೀಲಿಸಿ ಮರುದಿನವೇ ನಿರ್ಯಾಣ ಹೊಂದಲಿದ್ದಾರೆಂಬುದನ್ನು ಪತ್ತೆ ಹಚ್ಚಿದ್ದರು. ಮೈಸೂರಿಗೆ ಹೋಗಿ ಉತ್ಕೃಷ್ಟವಾದ ಕಿತ್ತಳೆ ಹಣ್ಣುಗಳನ್ನು ಸಾಕಷ್ಟು ತೆಗೆದುಕೊಂಡು ಬಂದಿದ್ದರು. ಪರಂಧಾಮವನ್ನೈ-ಯುವ ಪೂರ್ವದಲ್ಲಿ ಅವರಿಗೆ ತಡೆಯಲಾರದಷ್ಟು ದಾಹವುಂಟಾಗಲು ತಾವೇ ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಅವರಿಗೆ ಕಿತ್ತಳೆಯ ರಸವನ್ನು ಆಗಾಗ ಪಾನ ಮಾಡಿಸುತ್ತಿದ್ದರು. ಹಣ್ಣಿನ ರಸವನ್ನು ಕುಡಿಸುವುದರ ಮಧ್ಯೆ ಮಧ್ಯೆ ಸಣ್ಣಪುಟ್ಟ ಚಿಕಿತ್ಸೆಗಳನ್ನು ನಡೆಸುತ್ತಿದ್ದರಲ್ಲದೆ ಸಾಂತ್ವನದ ಮಾತುಗಳನ್ನೂ ಆಡುತ್ತಿದ್ದರು. ಇದನ್ನೆಲ್ಲ ಗಮನಿಸುತ್ತಿದ್ದ ಶಿಷ್ಯರೊಬ್ಬರು ಶೀಘ್ರದಲ್ಲೇ ದೇಹವನ್ನು ತ್ಯಜಿಸುತ್ತಾರೆಂಬುದು ಸ್ಪಷ್ಟವಾಗಿರುವಾಗ ಈ ಚಿಕಿತ್ಸೆಗಳೆಲ್ಲಾ ಏಕೆ? ಎಂದು ಪ್ರಶ್ನಿಸಲು ಅದಕ್ಕೆ ಕಾರಣವಿದೆಯಪ್ಪ. ತಿಳಿಸುತ್ತೇನೆ ಎಂದು ಸಂಕ್ಷೇಪವಾಗಿ ಉತ್ತರಿಸಿ ಒಂದೆರಡು ದಿನಗಳ ಅನಂತರ ಜೀವವು ದೇಹವನ್ನು ತ್ಯಜಿಸುವ ಸಂದರ್ಭದಲ್ಲಿ ಅದರ ಮನೋಧರ್ಮವೇನಿರುತ್ತದೆ? ಪ್ರಾಣ ವಿಯೋಗಕಾಲದಲ್ಲಿ ದಾಹವೇಕೆ? ಚಿಕಿತ್ಸೆಯ ಅವಶ್ಯಕತೆಯೇನು? ಎಂಬೆಲ್ಲ ವಿಷಯಗಳನ್ನು ಕುರಿತು ವಿಸ್ತಾರವಾಗಿ ಪಾಠಮಾಡಿದ್ದುಂಟು. ದೇಹವೆಂಬುದು ಬಿದ್ದುಹೋಗುವ ವಸ್ತು. ಅದಕ್ಕೆ ಭಗವಂತನ ಇಚ್ಛೆಯಂತೆ ಒಂದು ಆಯುಷ್ಯವಿರುತ್ತದೆ. ಇದು ನಿರ್ಧಾರವಾಗಿದ್ದರೂ ಕೊನೆಯ ಕ್ಷಣದವರೆಗೆ ಜೀವಕ್ಕೆ ಹಿತವಾಗುವ ಚಿಕಿತ್ಸೆಗಳನ್ನು ನಡೆಸುವುದೊಂದು ಕರ್ತವ್ಯವಿರುತ್ತದೆ. ಇದರಿಂದ ಕಿಂಚಿತ್ ಪ್ರಯೋಜನವಿರಬಹುದು ಅಥವಾ ಇಲ್ಲದಿರಬಹುದು. ಪ್ರಯೋಜನವಿಲ್ಲದಿದ್ದರೂ ರೋಗಕ್ಕೆ ಚಿಕಿತ್ಸೆಯಾಗಬೇಕು ಎಂಬ ಮನಃಪ್ರವೃತ್ತಿ ಮತ್ತು ಪರಿಹಾರದ ಪ್ರಯತ್ನರೂಪವಾದ ಒಂದು ಪ್ರವೃತ್ತಿ ಇವು ಉಳಿದುಕೊಳ್ಳಬೇಕು. ಇಂತಹ ಪ್ರವೃತ್ತಿಗಳೇ ಸಂಸ್ಕಾರರೂಪವಾಗಿ ಬೆಳೆದು ಜೀವದ ಉದ್ಧಾರಕ್ಕೆ ದಾರಿ ಮಾಡುತ್ತದೆ ಎಂದು ಉತ್ತರಿಸಿದ್ದರೆಂದು ತಿಳಿದಿದೆ. ಆದ್ದರಿಂದ ಕರ್ಮವು ಬಲಿಷ್ಠವಾಗಿದ್ದಾಗ ಅದನ್ನು ಪುರುಷಪ್ರಯತ್ನದಿಂದ ದೂರಮಾಡಲು ಒಮ್ಮೆ ಸಾಧ್ಯವಾಗದೇ ಇರಬಹುದು ಆದರೂ ಅದರ ನಿವೃತ್ತಿಗೆ ಒಂದು ವಿಧದಲ್ಲಿ ಪ್ರಯತ್ನವಿರುವಲ್ಲಿ ಅದರಿಂದ ಅನುಕೂಲವುಂಟು. ಈ ಹಿನ್ನೆಲೆಯಲ್ಲಿ ಅನೇಕ ಆಚಾರಗಳನ್ನು ರೂಢಿಗೆ ತಂದಿದ್ದಾರೆ.

ಜನ್ಮಾಂತರದ ಕರ್ಮಗಳು ಬಿಟ್ಟ ಬಾಣದಂತೆ ಎಂದು ಶಾಸ್ತ್ರಗಳು ವರ್ಣಿಸುತ್ತವೆ. ಬಿಟ್ಟ ಬಾಣಕ್ಕೆ ಹೇಗೆ ಒಂದು ದಿಕ್ಕು, ಬಲ, ವೇಗ ಸ್ವಭಾವಗಳುಂಟೋ ಅಂತೆಯೇ ಜನ್ಮಾಂತರಾರ್ಜಿತಕರ್ಮಗಳು ಸಹ ತಮ್ಮದೇ ಆದ ಸ್ವಭಾವ ವೀರ್ಯಗಳಿಂದ ಕೂಡಿರುತ್ತವೆ. ಜ್ಯೋತಿಷಶಾಸ್ತ್ರವು ಅವುಗಳ ಬಗ್ಗೆ ಚಿಂತಿಸುವಾಗ ದೃಢಕರ್ಮ, ಅದೃಢಕರ್ಮ ಎಂದು ಎರಡು ವಿಭಾಗವನ್ನು ತಿಳಿಸುತ್ತದೆ. ಅದೃಢಕರ್ಮಗಳನ್ನು ಪುರುಷ ಪ್ರಯತ್ನಗಳಿಂದ ಗೆಲ್ಲಬಹುದು. ಆ ಪುರುಷಪ್ರಯತ್ನಗಳೂ ಸಹ ವ್ಯವಸ್ಥಿತವಾಗಿಯೂ ತಕ್ಕ ಪ್ರಮಾಣದಲ್ಲಿಯೂ ನಡೆದಾಗ ಮಾತ್ರ ಪರಿಹಾರವು ಘಟಿಸಬಹುದು. ಪರಿಹಾರದ ಉಪಾಯವು ಯುಕ್ತ ಅಥವಾ ವಿಜ್ಞಾನದ ದೃಷ್ಟಿಯಿಂದ ಸಂಗತವಲ್ಲದಿದ್ದರೆ ಪರಿಹಾರವಾಗಲಾರದು. ಇನ್ನು ದೃಢಕರ್ಮಗಳು ಅತ್ಯಂತ ಬಲವೀರ್ಯಗಳಿಂದ ಕೂಡಿ ಆಕ್ರಮಣ ಮಾಡುವ ಸ್ವಭಾವವುಳ್ಳವುಗಳಾಗಿದ್ದರಿಂದ ಅವುಗಳನ್ನು ಗೆಲ್ಲಲು ಸಾಧ್ಯವಾಗದು. 'ಭವಿತವ್ಯಂ ಭವತ್ಯೇವ'-ಆಗಬೇಕಾದದ್ದು ಆಗಿಯೇ ಆಗುತ್ತದೆ' ಎಂಬಮಾತು ಅಲ್ಲಿಗೆಸಲ್ಲುವುದು.

ಯಾವುದಾದರೂ ಪಾಪಕರ್ಮವು ಅತ್ಯಂತ ಬಲಿಷ್ಠವಾದದ್ದು ಕಾರ್ಯಪ್ರವೃತ್ತವಾಗಿರಲು ಅದರ ಶಮನಕ್ಕಾಗಿ ಪ್ರಯತ್ನಿಸಬಾರದೆಂಬುದಿಲ್ಲ. ಅಲ್ಲದೆ ಇನ್ನೊಂದು ದೃಷ್ಟಿಯಿಂದ ಪ್ರಯತ್ನಿಸಬೇಕಾದುದೇ ಕರ್ತವ್ಯ. ಪ್ರಯತ್ನವೆಂದಾಗ ಅದು ಹಲವು ಪರಿಯಾಗಿರಬಹುದಷ್ಟೆ. ಪಾಪಕರ್ಮವೆಂಬುದು ದೇವತಾ ಪ್ರಕೋಪವನ್ನುಂಟುಮಾಡಿ ಅನಿಷ್ಟಫಲವನ್ನು ಉಂಟು ಮಾಡುವುದಾದ್ದರಿಂದ ಅಲ್ಲಿ ಮೂಲದಲ್ಲಿರುವ ದೇವತಾಪ್ರಕೋಪವನ್ನು ಪರಿಹರಿಸಿಕೊಳ್ಳುವುದೇ, ಪ್ರಸನ್ನತೆಯನ್ನು ಸಂಪಾದಿಸುವುದೇ ಮುಖ್ಯವಾದೀತು. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪವುಂಟಾಗಿದ್ದರೆ ಆಗತಾನೇ ದೇವತಾಪ್ರಕೋಪ ಶಾಂತವಾಗಬಹುದು. ಅನಂತರತಾನೇ ದೇವತಾಪ್ರಸನ್ನತೆಯನ್ನು ಗಳಿಸುವ ಯತ್ನ. ಆದುದರಿಂದ ಅಂತಹ ಪ್ರಾಮಾಣಿಕವಾದ ಪಶ್ಚಾತ್ತಾಪ ಹೊಂದಿ ತನ್ನ ಕರ್ಮಾನುಗುಣವಾಗಿ ಪ್ರಾಪ್ತವಾಗುವ ಫಲವನ್ನೂ ಮೌನವಾಗಿ ಸ್ವೀಕರಿಸುತ್ತಾ ಸದ್ವಿಚಾರ ಸದಾಚಾರಗಳಿಂದ ಕೂಡಿ ಬದುಕುವುದೂ ಒಂದು ಪುರುಷಪ್ರಯತ್ನವೇ. ಅದು ದೇವತಾಪ್ರಸನ್ನತೆಯನ್ನು ಉಂಟುಮಾಡುವುದು. ಅಲ್ಲಿ ಮಂಗಳವಿದೆ. ಅಥವಾ ಪಶ್ಚಾತ್ತಾಪದೊಂದಿಗೆ ದೇವತಾಪ್ರಸ್ತನತೆಯನ್ನು ಸಂಪಾದಿಸಲು ಬೇಕಾದ ಜಪಪೂಜಾ ಹೋಮ ದಾನ ಮೊದಲಾದ ಕರ್ಮಗಳನ್ನು ನಿರ್ವಹಿಸಬಹುದು. ಎರಡೂ ಮಾರ್ಗವೂ ವ್ಯಕ್ತಿಯ ಪ್ರಕೃತಿಭೇದೇನ ಯೋಗ್ಯವೇ ಆಗಿರುವುದು.

ಒಬ್ಬನು ಅನೇಕ ಪಾಪಕರ್ಮಗಳನ್ನು ಮಾಡಿದವನಾಗಿದ್ದು ಅದರ ಫಲವನ್ನು ಪಡೆಯುತ್ತಿರುವಾಗಲೇ ಮೋಕ್ಷಕ್ಕಾಗಿ ಅಧ್ಯಾತ್ಮಸಾಧನೆಯನ್ನು ನಡೆಸಬಹುದು. ಎಲ್ಲ ದೇವತಾಶಕ್ತಿಗಳ ಹಿಂದೂ ಬೆಳಗುತ್ತಿರುವ ಪರಂಜ್ಯೋತಿಯ ಅನುಭವದ ಹಂಬಲದಿಂದ ಅನನ್ಯವಾದ ಭಕ್ತಿಶ್ರದ್ಧೆಗಳಿಂದ ಆತ್ಮಸಾಧನೆಯಲ್ಲಿ ಮುಳುಗುವವನಿಗೆ ಅವಶ್ಯಕವಾದ ಎಲ್ಲ ದೇವತಾಪ್ರಸನ್ನತೆಗಳು ತಾವಾಗಿಯೇ ಒದಗಿ ಬರುವವು. ಯೋಗಶಾಸ್ತ್ರವೂ ಸಹ ವ್ಯಾಧಿ, ಸ್ತ್ಯಾನ, ಸಂಶಯ, ಪ್ರಮಾದ, ಆಲಸ್ಯ, ಅವಿರತಿ ಭ್ರಾಂತಿದರ್ಶನ, ಅಲಬ್ಧಭೂಮಿಕತ್ವ, ಅನವಸ್ಥಿತತ್ವ ಎಂದು ಹಲವು ಬಗೆಯ ಯೋಗವಿಘ್ನಗಳನ್ನು ಹೇಳಿ ಅದಕ್ಕೆಲ್ಲ ಪರಿಹಾರವೇನು? ಎಂಬ ಪ್ರಶ್ನೆಗೆ 'ಏಕತತ್ತ್ವಾಭ್ಯಾಸ'ವೇ ಪರಿಹಾರವೆಂದು ಉತ್ತರಿಸುವುದು. ಇದೇ ಸತ್ಯವನ್ನೇ ಜ್ಯೋತಿಶ್ಶಾಸ್ತ್ರವೂ ಸಹ ತೀವ್ರವಾದ ಆತ್ಮಸಾಧಕನಿಗೆ ಆತ್ಮಸಾಧನೆಯಿಂದಲೇ ಎಲ್ಲಪಾಪಗಳೂ ಕಳೆಯುತ್ತವೆಯೆಂದು ಸ್ಪಷ್ಟಪಡಿಸುತ್ತದೆ.

# ಅಧಿಕ ಮಾಸ ಪ್ರಯುಕ್ತ ನಾಡಿನಾದ್ಯಂತ ವನಿತೆಯರಿಂದ ವಿಶೇಷ ಪೂಜೆ,
# ಲಲಿತಾ ಹಾಗೂ ವಿಷ್ಣು ಸಹಸ್ರನಾಮ ಪಾರಾಯಣ, ಕುಂಕುಮಾರ್ಚನೆ



PERIODICAL RATE

VIPRANUDI KANNADA MONTHLY

RNI No. KARKAN/2009/29931. Posted at BG PSO, Mysore Road, Bangalore-560 026,

Permitted to Post on 24-08-2023 Date of Publishing 22-08-2023




If undelivered please return to :

**VIPRANUDI**

Akhila Karnataka Brahmana Mahasabha (R.)

"Gayathri Bhavana", No. 3070, 9th Main Road

Gayathri Bhavana Road, (14th Cross) BSK 2nd Stage

BANGALORE-560 070. Phone : 26771695

VIPRANUDI-Kannada Monthly, Published & Owned by President, On behalf of Akhila Karnataka Brahamana Mahasabha (R) "Gayathri Bhavana", No. 3070, 9th Main Road, Gaythri Bhavana Road (14th Cross) BSK 2nd Stage, Bangalore-560 070. And Printed at Parimala Mudranalaya, No. 184, Allama Prabhu Road, 14th Main, Hanumanthanagar, Bangalore-560 050, Editor : Prof. M.K. Sridhar